MADAM SPEAKER.—The Karnataka Appropriation Bill, 1975 is introduced* The Hon. Minister may move for consideration.

ಶ್ರೀ ಎಚ್. ಡಿ. ದೇವೇಗೌಡ.—ಈಗ ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಇನ್ನೂ ಚರ್ಚೆ ಆಗಿಲ್ಲ, ಹೀಗೆ ನಾಗಾಲೋಟದಲ್ಲಿ ಓಡಿದರೆ, ನಮಗೆ ಕಷ್ಟವಾಗುತ್ತದೆ, ಇವತ್ತಿನ ಸನ್ನಿವೇಶ ಏನು ಅಂತ ತಮಗೆ ಗೊತ್ತಿದೆ. ಸಪ್ಲಿಮೆಂಟರಿ ಡಿಮ್ಯಾಂಡ್ಸ್ ಚರ್ಚೆ ಆಗುವುದಕ್ಕೆ ಸಾಧ್ಯವಾಗದೇ ಒಂದು ನಿಮಿಷದಲ್ಲಿ ಅದನ್ನು ಮತಕ್ಕೆ ಹಾಕಿದಿರಿ, ಅದರ ಬಗ್ಗೆ ಚರ್ಚೆ ಆಗಬೇಕಾಗುತ್ತದೆ. ನಾಳೆ ಅಥವಾ ನಾಡಿದ್ದು ಇದನ್ನು ತೆಗೆದುಕೊಂಡು ಮುಗಿಸಿಕೊಡುತ್ತೇವೆ.

ಶ್ರೀ ಎಂ. ವೈ. ಘೋರ್ಪಡೆ.—ಈಗ ಅಪ್ರೊಪ್ರಿಯೇಷನ್ ಬಿಲ್ ಮೇಲೆ ಚರ್ಚೆ ಮಾಡಬಹುದು.

ಶ್ರೀ ಎಚ್. ಡಿ. ದೇವೇಗೌಡ.—ಇದರ ಮೇಲೆ ಈಗ ಚರ್ಚೆ ಮಾಡುವುದು ಬೇಡ. ಇದನ್ನು ನಾಳೆ ತೆಗೆದುಕೊಳ್ಳೋಣ.

Budget Estimates for 1975—76

Demands for Grants

Demand Nos. 38, 41, 44 and 45.

MADAM SPEAKER.—Now Demands :

Sri DEVENDRAPPA GHALAPPA.—I move :

" That a sum not exceeding Rs. 15,99,16,000 be granted to the Government to defray the charges which will come in course of payment during tne financial year ending 31st day of March 1976 in respect of Demand No. 38, "Agriculture (Excluding Horticulture, ".

" That a sum not exceeding Rs. 2,78,99,000 be granted to the Government to defray the charges which will come in course of payment during the financial year ending 31st March 1976 in respect of Demand No. 41 "Soil and water Conservation"

"That a sum not exceeding Rs. 4,66,96,000 be grante dto the Government to defray the charges which will come in ccurse of payment during the financial year ending 31st day of March 1976 in respect of Demand No. 44, "Animal Husbandry ".

That a sum not exceeding Rs. 7,80,69,000 be granted to the Government to defray the charges which will come in course of payment during the financial year endins 31st day of March 1976 in respect of Demand No. 45, 'Dairy Development".

Sri MADAM SPEAKER.—Motion moved ;

"That a sum not exceeding Rs. 15,99,16,000 be granted to the Government to defray the charges which will come in course of payment during the financial year ending 31st day

---

* Bill appended as Annexure.

of March 1976 in respect of Demand No. 38 'Agriculture (Excluding Horticulture) ''.

The other Demands are also before the House.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಸದನದ ಒಪ್ಪಿಗೆಗಾಗಿ ಮಂಡಿಸಿರತಕ್ಕಂಥ 38, 41, 44 ಮತ್ತು 45ನೇ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ಸರ್ಕಾರದವರು ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಪಶುಸಂಗೋಪನೆಗೆ ಸಂಬಂಧಪಟ್ಟಂತೆ, ಬೆಂಗಳೂರು ಡೈರಿಗೆ ಸಂಬಂಧಪಟ್ಟಂತೆ ಮತ್ತು ವೆಟರಿನರಿ ಸರ್ವಿಸಸ್‌ಗೆ ಸಂಬಂಧಪಟ್ಟಂತೆ ಕೆಲವು ವರದಿಗಳನ್ನು ನಮಗೆ ಒದಗಿಸಿದ್ದಾರೆ. ನಾನು ಪ್ರಮುಖವಾಗಿ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟಂತೆ ಮೊದಲು ಮಾತನಾಡಿ ಬೇರೆ ವಿಷಯಗಳ ಬಗ್ಗೆ ಕೊನೆಯಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮತ್ತು ಉಳಿದ ವಿಷಯಗಳ ಬಗ್ಗೆ ವಿವರವಾಗಿ ಮಾತನಾಡಲು ನನ್ನ ಮಿತ್ರರಿಗೆ ಅವಕಾಶ ಮಾಡಿಕೊಡುತ್ತೇನೆ.

ಒಂದು ದೇಶದಲ್ಲಿ ವ್ಯವಸಾಯ ಸಂಪೂರ್ಣವಾಗಿ ಪ್ರಗತಿಯಾಗಿದೆ ಎಂಬ ಭಾವನೆಯನ್ನು ತಾಳಬೇಕಾದರೆ ನಾವು ಪ್ರಮುಖವಾಗಿ ಕೆಲವು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ ಯಾವ ದೇಶದಲ್ಲಿಯೇ ಆಗಲೀ, ಯಾವ ರಾಜ್ಯದಲ್ಲಿಯೇ ಆಗಲೀ, ಭೂಮಿಯ ಉತ್ಕೃಷ್ಟತೆಯ ಬಗ್ಗೆ ಹಲವಾರು ವಿಷಯಗಳು ನಿರ್ಧಾರವಾಗುವುದರ ಜೊತೆಗೆ. ಹವಾಗುಣ, ನೀರಿನ ಆಸರೆ, ಗೊಬ್ಬರ ಅಂದರೆ ಕ್ರಿಮಿನಾಶಕಗಳನ್ನು ನಾಶಪಡಿಸತಕ್ಕಂಥ ರಾಸಾಯನಿಕ ದ್ರವ್ಯಗಳು ಏನಿವೆ, ಅವುಗಳನ್ನು ಸಿಂಪಡಿಸುವ ವಿಧಾನ ಮತ್ತು ಬೀಜದ ಅಗತ್ಯ ಇವೆಲ್ಲವನ್ನೂ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಮತ್ತು ರೈತನಾದವನು ಏನು ಬೆಳೆ ಬೆಳೆಯುತ್ತಾನೆ, ಆ ಬೆಳೆಗೆ ತಕ್ಕ ಪ್ರತಿಫಲ ಬರುವಂತೆ ಅಂದರೆ ಆತನ ಶ್ರಮಕ್ಕೆ ತಕ್ಕ ಪ್ರತಿಫಲ ಬರುವಂತಹ ಒಂದು ಬೆಲೆಯ ನಿಯಂತ್ರಣ ಇರಬೇಕಾಗುತ್ತದೆ. ಯಾವ ದೇಶದಲ್ಲಿ ವ್ಯವಸಾಯವೇ ಹೆಚ್ಚಿನ ಉದ್ಯೋಗವಿರುತ್ತದೋ ಅಂತಹ ದೇಶದಲ್ಲಿ ವ್ಯವಸಾಯಗಾರರ ಅಥವಾ ಜನಸಂಖ್ಯೆಯ ಒಂದು ಪ್ರಗತಿಯ ನೋಟವನ್ನು ನಾವು ನೋಡಬಹುದು ; ವ್ಯವಸಾಯ ಇಲಾಖೆಯ ಬಗ್ಗೆ ಸರ್ಕಾರದವರು ಒದಗಿಸಿರುವ ವರದಿಯಲ್ಲಿ ಅನೇಕ ವಿಷಯಗಳು ಉಲ್ಲೇಖವಾಗಿಲ್ಲ. ಕೆಲವಾರು ವಿಷಯಗಳನ್ನು ಸೂಕ್ಷ್ಮವಾಗಿ ಮುಟ್ಟಿದ್ದಾರೆ, ಕೆಲವಾರು ವಿಷಯಗಳನ್ನು ಮುಟ್ಟಿಲ್ಲ ; ಎಷ್ಟು ಆಹಾರ ಬೆಳೆಯಲಾಗುತ್ತಿವೆ, ಎಷ್ಟು ಪ್ರೊಕ್ಯೂರ್ ಆಗಿದೆ ಎಂಬುದನ್ನು ಮಾತ್ರ ತಿಳಿಸಿದ್ದಾರೆ. ಅದರ ಜೊತೆಗೆ ನಮ್ಮ ರಾಜ್ಯದಲ್ಲಿ ಎಷ್ಟು ಅಗ್ರಿಕಲ್ಚರಲ್ ಹೋಲ್ಡಿಂಗ್ಸ್ ಇದೆ ಎಂಬ ಬಗ್ಗೆ ಲೆಕ್ಕ ಕೊಡಬೇಕಾಗಿತ್ತು, ಜೊತೆಗೆ ಮಳೆ ನೀರಿನ ಆಶ್ರಯ ಬಿಟ್ಟು ಭಾರಿ, ಮಧ್ಯಮ ಮತ್ತು ಸಣ್ಣ ನೀರಾವರಿ ಯೋಜನೆಗಳ ಮೂಲಕ ಎಷ್ಟು ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗಿಸಿದ್ದೀರಿ ಎಂಬುದು ಪ್ರಮುಖವಾದ ಅಂಶ. ಈ ಬಗ್ಗೆ ಅಂಕಿಅಂಶಗಳನ್ನು ಕೊಡಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಒಟ್ಟು 191773 ಸ್ಕ್ವೇರ್ ಕಿಲೋಮಿಟರ್ಸ್ ಭೂಮಿ ಇದೆ. ಇದರ ಜೊತೆಗೆ ಜನಸಂಖ್ಯೆಯ ಸಾಂದ್ರತೆಯನ್ನು ಸಹ ನಾವು ನೋಡಬೇಕಾಗುತ್ತದೆ. ಅಲ್ಲದೆ ಎಷ್ಟು ಜನಸಂಖ್ಯೆಗೆ ಎಷ್ಟು ಭೂಮಿ ಇವೆ ಎಂಬುದನ್ನು ಸಹ ನೋಡಬೇಕಾಗುತ್ತದೆ. ನಂತರ ಜನಸಾಂದ್ರತೆ ಯಾವಯಾವ ಭಾಗದಲ್ಲಿ ಎಷ್ಟಿವೆ. ಅಲ್ಲಿರತಕ್ಕಂಥ ಭೂಮಿ ಆ ಜನತೆಗೆ ಸಾಕಾಗುತ್ತದೆಯೋ ಎಂಬುದನ್ನು ನೋಡಬೇಕಾಗುತ್ತದೆ. ಭೂಮಿ ಸಾಕಾಗುವಷ್ಟು ಇದ್ದರೆ, ಅವರಿಗೆ ಬೇಕಾದ ಇತರೇ ಅನುಕೂಲಗಳನ್ನು ಒದಗಿಸುವುದು ಸಹ ಪ್ರಮುಖವಾದ ಅಂಶ. ಇತ್ತೀಚಿನ ಕೆಲವು ವರ್ಷಗಳಲ್ಲಿ ಹಸಿರು ಕ್ರಾಂತಿಯ ಒಂದು ಕೂಗು ಎದ್ದಿದೆ, ಈ ಒಂದು ಪದದ ಅರ್ಥ ವ್ಯಾಪ್ತಿ ವಿಪರೀತ ವಿಷಯಗಳನ್ನು ಒಳಗೊಂಡಿರುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಸಿರು ಕ್ರಾಂತಿ ಇಂದು ಉಸಿರು ಕ್ರಾಂತಿಯಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅದು ಸರಿಯೆಂದು ಕಾಣುತ್ತದೆ. ಪ್ರತಿ ದಶಕದಲ್ಲಿಯೂ ನಮ್ಮ ದೇಶದ ಜನಸಂಖ್ಯೆ ಪ್ರಮಾಣ ಹೆಚ್ಚಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. 1941–51ರಲ್ಲಿ 19.36, 1951–61ರಲ್ಲಿ 21.57 ಮತ್ತು 1961-71ರಲ್ಲಿ 24.21 ಪರ್ಸೆಂಟ್ ಪ್ರಕಾರ ಜನಸಂಖ್ಯೆ ಜಾಸ್ತಿಯಾಗಿರುವುದು ಸೆನ್ಸಸ್ ಪ್ರಕಾರ ತಿಳಿದು ಬರುತ್ತದೆ. ಆದರೆ ಇದೇ ರೀತಿ ಭೂಮಿಯ ಉದ್ದ ಮತ್ತು ಅಗಲ ಜಾಸ್ತಿಯಾಗಿಲ್ಲ. ಈ ಕಾರಣದಿಂದ ಇರತಕ್ಕಂಥ ಭೂಮಿಯಲ್ಲಿಯೇ ಹೈ—ಈಲ್ಡಿಂಗ್ ಬೆಳೆಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಆಗ ಇರತಕ್ಕಂಥ ಜನಸಂಖ್ಯೆಗೆ ಆಹಾರ ಒದಗಿಸಲು ಸಾಧ್ಯವಾಗುತ್ತದೆ. ಇಂದು ರೂರಲ್ ಏರಿಯಾದಲ್ಲಿರತಕ್ಕಂಥ ಸಣ್ಣ ಪುಟ್ಟ ರೈತರನ್ನು ಕಾಲಿನಿಂದ ಆಳವಾಗಿ ತುಳಿದುಹಾಕಿದ್ದೀರಿ. ಅವರು ಹಣ ಖರ್ಚು ಮಾಡಿ ಬೆಳೆದ

ಬೆಳೆಗೆ ತಕ್ಕ ಬೆಲೆಯನ್ನು ನಿಗದಿ ಮಾಡಿಲ್ಲ, ಇದನ್ನು ರುಜುವಾತು ಮಾಡಿ ಹೇಳಬಹುದು. ಈ ವಿಷಯಕ್ಕೆ ಅನಂತರ ಬರುತ್ತೇನೆ. ಈಗ ನಾವು ಮುಖ್ಯವಾಗಿ ನೀರಾವರಿ ಅನುಕೂಲದ ಬಗ್ಗೆ ತೆಗೆದುಕೊಂಡರೆ ಮೈನರ್ ಇರಿಗೇಷನ್ ವಿಚಾರದಲ್ಲಿ ತಮಿಳುನಾಡು ಮೊದಲ ಸ್ಥಾನದಲ್ಲಿದೆ, ಎರಡನೇ ಸ್ಥಾನ ಆಂಧ್ರಕ್ಕೆ ಬರುತ್ತದೆ. ಮೂರನೇ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಅದೇ ರೀತಿ ಬಾವಿಗಳ ನೀರಿನಿಂದ ವ್ಯವಸಾಯ ಮಾಡುತ್ತಿರುವ ಜಮೀನಿನ ವಿಸ್ತೀರ್ಣ ತೆಗೆದು ಕೊಂಡರೆ ತಮಿಳುನಾಡು ಬಹಳ ಹೆಚ್ಚಿನ ಪ್ರಮಾಣದಲ್ಲಿ ಬಾವಿ ನೀರನ್ನು ಉಪಯೋಗ ಮಾಡಿ ಕೊಳ್ಳುತ್ತಿದೆ. ಎರಡನೇ ಸ್ಥಾನ ಆಂಧ್ರಕ್ಕೆ ಬರುತ್ತದೆ, ಮೂರನೇ ಸ್ಥಾನ ಕರ್ನಾಟಕ ರಾಜ್ಯಕ್ಕೆ ಬರುತ್ತದೆ. ಇನ್ನು ಬಾವಿಗಳನ್ನು ತೋಡಿಸತಕ್ಕದ್ದನ್ನು ನೋಡುವುದಾದರೆ, ತಮಿಳು ನಾಡಿನಲ್ಲಿ ಬಾವಿಗಳ ಸಂಖ್ಯೆ ವಿಪರೀತವಾಗಿವೆ. ನಮ್ಮ ರಾಜ್ಯದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಬಾವಿಗಳನ್ನು ಹೆಚ್ಚಾಗಿ ತೋಡಿಸಿದ್ದಾರೆ. ಅದೂ ಅಲ್ಲಿ ಬರಗಾಲ ಬಂದ ಮೇಲೆ ಅಲ್ಲಿ ಹೆಚ್ಚು ಬಾವಿಗಳನ್ನು ತೋಡಿಸಿದ್ದಾರೆ. ಅದೇ ರೀತಿ ಹಳೇ ಮೈಸೂರಿನ ಭಾಗಗಳಲ್ಲೂ ಸಹ ಹೆಚ್ಚು ಪ್ರಮಾಣದ ಸವಲತ್ತನ್ನು ಇವತ್ತಿನ ದಿವಸ ಒದಗಿಸಬೇಕಾಗಿದೆ. ರೂಲ್ 59ರ ಪ್ರಕಾರ ಹಾಸನ ಜಿಲ್ಲೆ, ಹಳೇ ಮೈಸೂರು ರಾಜ್ಯದ ಇನ್ನಿತರ ಭಾಗಗಳಲ್ಲಿರತಕ್ಕ ವಿಪರೀತ ಬರಗಾಲದಿಂದ ಉದ್ಭವಾಗಿರತಕ್ಕ ಪರಿಸ್ಥಿತಿ ಬಗ್ಗೆ ಮಾನ್ಯ ಸದಸ್ಯರು ಒಂದು ಸೂಚನೆಯನ್ನು ಚರ್ಚೆಗೋಸ್ಕರ ಇಟ್ಟಿದ್ದಾರೆ. ಆಗ ಅದರ ಬಗ್ಗೆ ವಿವರವಾದ ಚರ್ಚೆಯಾಗುತ್ತದೆ. ಆದುದರಿಂದ, ಇವತ್ತಿನ ದಿವಸ ಉತ್ತರ ಕರ್ನಾಟಕದಲ್ಲಿ ಯಾವ ಅತಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಿದ್ದೀರಿ, ನಮ್ಮ ಹಳೆಯ ಮೈಸೂರು ರಾಜ್ಯಕ್ಕೂ ಈ ಬಾವಿಗಳ ವಿಚಾರದಲ್ಲಿ ಒದಗಿಸುವುದಕ್ಕೆ ಹೆಚ್ಚು ಗಮನವನ್ನು ಮಾನ್ಯ ಮಂತ್ರಿಗಳು ಕೊಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನವನ್ನು ಸೆಳೆಯುತ್ತೇನೆ. ಏನೆಂದರೆ ಆ್ಯಕ್ಚುಯಲ್ ಹೋಲ್ಡಿಂಗ್ಸ್ ವಿಚ್ ಆರ್ ಬ್ರಾಟ್ ಅಂಡರ್ ಕಲ್ಟಿವೇಷನ್' ಇದು ಬಹಳ ಮುಖ್ಯವಾದುದು. ಆಪರೇಷನ್ ಹೋಲ್ಡಿಂಗ್ಸ್ ಮತ್ತು ಓನರ್ ಶಿಪ್ಸ್—ನಿಮ್ಮ ಖಾತೆಯಲ್ಲಿ ಎಷ್ಟೆಷ್ಟು ಜಮೀನು ಇರಬೇಕು—ಇವುಗಳ ಬಗ್ಗೆ ಅಂಕಿಅಂಶಗಳನ್ನು ಇಡಬೇಕಾಗುತ್ತದೆ. ಕರೆಕ್ಟ್ ಡಿಸಿಷನ ಮಾಡಬೇಕಾದರೆ, ಈ ಎರಡು ಫಿಗರ್‌ಗಳನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಓನರ್‌ಷಿಪ್ ಹೋಲ್ಡಿಂಗ್ ಎಷ್ಟು ಮತ್ತು ಆಪರೇಷನ್ ಹೋಲ್ಡಿಂಗ್ ಎಷ್ಟು ಎಂದು. ಹಾಗೆ ಮಾಡಿದರೆ ಪರ್‌ಫೆಕ್ಟ್ ಡಿಸಿಷನ್' ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಮ್ಮ ವರದಿಯನ್ನು ನೋಡಿದೆ. ಆ ವರದಿಯಲ್ಲಿ ಕ್ರಾಪ್ ಏರಿಯಾ ಎಷ್ಟು ಇದೆ ಎನ್ನತಕ್ಕದ್ದನ್ನು ಇಲ್ಲಿ ಕೊಟ್ಟಿಲ್ಲ. ಪ್ರತಿಯೊಬ್ಬರೂ ಟ್ರ್ಯಾಕ್ಟರ್‌ಗಳನ್ನು ಉಪಯೋಗಿಸಿ ವ್ಯವಸಾಯ ಮಾಡುವುದು ಸಾಧ್ಯವಾಗುವುದಿಲ್ಲ. ಎತ್ತುಗಳ ಮೇಲೆ ಭಾರ ಹಾಕಿ ಜೀವನ ಮಾಡಬೇಕಾಗುತ್ತದೆ. ವ್ಯವಸಾಯ ಇಲಾಖೆಯ ಬಗ್ಗೆ ತಾವು ಏನು ಪ್ಲಾನಿಂಗ್ ಹಾಕಿದ್ದೀರಿ. ಅದು ಸರಿಯಾದುದಲ್ಲ ಎಂದು ಹೇಳುತ್ತೇನೆ. ತಮ್ಮ ವರದಿಯಲ್ಲಿ ಏನು ಕೊಟ್ಟಿದ್ದೀರಿ ಎಂದರೆ, ಎಷ್ಟು ಆಫೀಸರ್ಸ್ ಇದ್ದಾರೆ. ಎಷ್ಟು ಡಿವಿಜನ್‌ಗಳು ಇವೆ ಎನ್ನುವ ವಿಷಯವನ್ನು ತಿಳಿಸಿದ್ದೀರಿಯೇ ವಿನಾ ರೈತರ ಅಭಿವೃದ್ಧಿ ಮಾಡುವುದಕ್ಕೋಸ್ಕರ ಹೋಬಳಿ ಲೆವೆಲ್‌ನಲ್ಲಾಗಲೀ, ಬ್ಲಾಕ್ ಲೆವೆಲ್‌ನಲ್ಲಾಗಲೀ ಏನೇನು ಮಾಡಿದ್ದೀರಿ ಎಂಬುದನ್ನು ಈ ವರದಿಯಲ್ಲಿ ಇಡುವುದಕ್ಕೆ ಸಾಧ್ಯವಾಗಿಲ್ಲ.

ಇವತ್ತು ನಾನು ಒಂದು ಸಲಹೆ ಕೊಡುತ್ತೇನೆ. ಸೀಜನಲ್ ಕಂಡೀಶನ್ಸ್ ಆಧಾರದ ಮೇಲೆ ಕರ್ನಾಟಕ ರಾಜ್ಯವನ್ನು ನಾಲ್ಕು ವಿಭಾಗಗಳನ್ನಾಗಿ ಮಾಡಿ ಎಂದು ಹೇಳುತ್ತೇನೆ. ಇದು ನನ್ನ ಅಭಿಪ್ರಾಯ. ಮಾನ್ಯ ಸಚಿವರು ಈ ವಿಷಯದ ಬಗ್ಗೆ ತಮ್ಮ ಗಮನವನ್ನು ಹರಿಸಬೇಕು. ನಾನು ಹೇಳುತ್ತಿರುವ ಈ ನಾಲ್ಕು ವಿಭಾಗಗಳು ಡಿಪಾರ್ಟ್‌ಮೆಂಟಲ್ ಡಿವಿಜನ್ಸ್ ಅಲ್ಲ. ಅವು ಯಾವುವೆಂದರೆ, ಒಂದನೆಯದು

1. Central Rejion: Narrow coastal plain between the Western ghats and Arabian Sea.
2. Malnad Are; Eastern region lying to the East of Western ghats.
3. Northern midan and
4. Southern midan.

ಈ ಮೈದಾನ ಪ್ರದೇಶವನ್ನು ಎರಡು ಭಾಗಗಳನ್ನಾಗಿ ಮಾಡಬೇಕಾಗಿದೆ. ಇದು ಸೀಜನಲ್ ಕಂಡೀಷನ್ ಮೇಲೆ, ಅಲ್ಲ ಕ್ರಾಪ್ ಬೆಳೆಯುತಕ್ಕ ವಾತಾವರಣ ಏನು ಇದೆ ಅದರ ಮೇಲೆ ಇದನ್ನು

ಡಿಪೆಂಡ್ ಆಗಿರಬೇಕಾಗುತ್ತದೆ. ಆದುದರಿಂದ, ಸರಕಾರ ವ್ಯವಸಾಯದ ಬಗ್ಗೆ ಯೋಚನೆ ಮಾಡುವುದಾದರೆ, ಈ ಒಂದು ವಿಧಾನವನ್ನು ಅನುಸರಿಸಿ ಮಾಡಬೇಕಾಗುತ್ತದೆ. ಆದರೆ, ಇದರ ಬಗ್ಗೆ ಹೆಚ್ಚು ಗಮನ ಕೊಟ್ಟಿಲ್ಲ ಎಂದು ಹೇಳಬೇಕಾಗಿದೆ.

ಇನ್ನು ಮಳೆಯ ಬಗ್ಗೆ ಹೇಳುವುದಾದರೆ, ಕೆಲವು ಕಡೆ ಮಳೆ ಬರುತ್ತದೆ. ಇನ್ನು ಕೆಲವು ಕಡೆ ಬರುವುದಿಲ್ಲ. ಈಗ ನಮ್ಮ ಮಲೆನಾಡು ಪ್ರದೇಶವೆಲ್ಲ ಮಳೆ ಬಂದಿತೆಂದರೆ ವಿಪರೀತವಾಗಿ ಸುರಿಯುತ್ತಲೇ ಇರುತ್ತದೆ. ಒಂದೊಂದು ಸಾರಿ ಏನೇನೂ ಇಲ್ಲ. ಆದಕ್ಕೆ ನಾವುಗಳು ಹೇಳುತ್ತಾ ಬಂದಿದ್ದೇವೆ. ಕೆರೆಗಳ ರಿಪೇರಿ ಮಾಡಿ, ಕೆರೆಗಳಲ್ಲಿ ಹೂಳು ತುಂಬಿಕೊಂಡಿರತಕ್ಕದ್ದನ್ನು ತೆಗೆಯಿಸಿ ಎಂದು ಸುಮಾರು 400—500 ವರ್ಷಗಳಿಂದಲೂ ಅಲ್ಲಿನವರು ಹೇಳಿಕೊಂಡು ಬಂದಿದ್ದಾರೆ. ಆದರೆ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಲ್ಲಿನವರೆಗೆ ಕೆರೆಗಳಿಂದ ಸಣ್ಣ ನೀರಾವರಿ ಪದ್ಧತಿಯ ಉಪಯೋಗ ಪಡೆಯುವುದಕ್ಕೆ ಇಲ್ಲಿನವರಿಗೂ ಆಗಿಲ್ಲ. ಆದುದರಿಂದ, ದಯವಿಟ್ಟು ಅಲ್ಲಿನ ಕೆರೆಗಳಲ್ಲಿರುವ ಹೂಳನ್ನು ತಗೆಸಲಿಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಈಗ ನಮ್ಮ ದೇಶದಲ್ಲಿ ಎಷ್ಟು ಜನ ವ್ಯವಸಾಯವನ್ನು ಅವಲಂಬಿಸಿದ್ದಾರೆ ಎನ್ನತಕ್ಕ ವಿಷಯವನ್ನು ತಿಳಿದುಕೊಳ್ಳತಕ್ಕ ಅಗತ್ಯ ಇದೆ. ನನಗೆ ಗೊತ್ತಿರುವ ಮಟ್ಟಿಗೆ ಆ್ಯಕ್ಚುಯಲ್ ಕಲ್ಟಿವೇಟರ್ಸ್ 40.01, ನಮ್ಮ ಸರಕಾರದ ಲೆಕ್ಕದ ಪ್ರಕಾರ ಸುಮಾರು 67 ಪರ್ಸೆಂಟ್ ಆಗುತ್ತದೆ. ಅಂದರೆ, 100ಕ್ಕೆ 70 ರಷ್ಟು ಜನ ವ್ಯವಸಾಯದ ಮೇಲೆ ಅವರು ಆಸರೆ ಇಟ್ಟು ಜೀವನ ಮಾಡತಕ್ಕ ಜನ ಏನಿದ್ದಾರೆ, ಆ ಪ್ರಮಾಣದ ಪ್ರಾಮುಖ್ಯತೆಯನ್ನು ರಾಜ್ಯ ಸರಕಾರ ಕೊಡಬೇಕು ; ಇದನ್ನು ಸರಕಾರದವರು ಮನಗಂಡಿದ್ದಾರೆ ಎಂದು ನಂಬಿಕೆ ಇಟ್ಟುಕೊಂಡಿದ್ದೇವೆ. ಇನ್ನು ಉಳಿದ ಮೂವತ್ತು ಪರ್ಸೆಂಟ್ ಏನು ಇದ್ದಾರೆ, ಅದರ್ ಸರ್ವಿಸಸ್, ಮ್ಯಾನುಫ್ಯಾಕ್ಚರ್ಸ್, ಹೌಸ್‌ಹೋಲ್ಡ್, ಇಂಡಸ್ಟ್ರೀಸ್ ಇವೆಲ್ಲಾ ಸೇರಿ ಬರುತ್ತವೆ. ಇನ್ನು ರೂರಲ್ ಎಕಾನಮಿ ಬೆಳೆಸಬೇಕು ಎಂದು ಹೇಳುವುದಾದರೆ. ಫರ್ಟಿಲಿಟಿ ಆಫ್ ದಿ ಸಾಯಿಲ್ ಕನ್‌ಸರ್ವೇಷನ್, ಗೊಬ್ಬರದ ಪ್ರಶ್ನೆ, ಸಾಲಸೌಲಭ್ಯಗಳು ಇವೆಲ್ಲವನ್ನೂ ಪರಿಶೀಲನೆ ಮಾಡುವುದರ ಜೊತೆಗೆ ಮಾರ್ಕೆಟಿಂಗ್ ಫೆಸಿಲಿಟಿಯನ್ನು ಕೊಡಬೇಕಾಗುತ್ತದೆ. ಅಮೇರಿಕಾ ಮತ್ತು ಜಪಾನ್ ದೇಶದಲ್ಲಿ ನಾವು ನೋಡುತ್ತಾ ಇದ್ದೇವೆ, ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಅವರು ಅಲ್ಲಿ ಓದಿ ಬಂದಿರತಕ್ಕವರು. ಮಾನ್ಯ ಅಧ್ಯಕ್ಷರೇ, ತಾವು ವ್ಯವಸಾಯಗಾರರು, ನಾನು ವ್ಯವಸಾಯಗಾರ. ನಮಗೆ ಇದರ ಬಗ್ಗೆ ಗೊತ್ತಿದೆ. ಇಲ್ಲಿ ಬೆಳೆಯ ಧಾರಣೆಯನ್ನು ನಿಗದಿಯೇ ಮಾಡಿಲ್ಲ.

ಶ್ರೀ ಸಿ. ಬೈರೇಗೌಡ.—ಗೊಬ್ಬರದ ಬೆಲೆಯನ್ನು ನಿಗದಿ ಮಾಡಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಬೆಳೆಯೊಂದನ್ನು ಬಿಟ್ಟು ಎಲ್ಲವನ್ನೂ ನಿಗದಿ ಮಾಡುತ್ತಾರೆ. ನಮ್ಮ ರೈತನು ಬೆಳೆ ಬಂದು ಕೊಯಿಲು ಆಗಿದ್ದರೆ, ಬಹುಶಹ ಅವನಿಗಿರುವ ಸಾಲ ಸೋಲಗಳನ್ನು ತೀರಿಸಬೇಕಾದ ಸಂದರ್ಭ ಬಂದಾಗ, ಧಾನ್ಯವನ್ನು ಅತಿ ಕಡಿಮೆ ಬೆಲೆಗಾದರೂ ಮಾರುಕಟ್ಟೆಯಲ್ಲಿ ಮಾರಲೇಬೇಕು. ವ್ಯಾಪಾರಸ್ಥರು ಇವತ್ತು ಇಷ್ಟು ಬುದ್ಧಿವಂತರಾಗಿದ್ದಾರೆ, ರೈತ ಏನು ಇದ್ದಾನೆ, ಅವನನ್ನು ಸಂಪೂರ್ಣವಾಗಿ ಇವತ್ತಿನ ದಿವಸ ಕಪಿಮುಷ್ಟಿಯಲ್ಲಿ ಹಿಡಿದುಕೊಂಡಿದ್ದಾರೆ ಸರಕಾರದವರು ಅಂಥವರನ್ನು ಬಿಡಿಸುವುದಕ್ಕೆ ಆಗುತ್ತಾ ಇಲ್ಲ. ನಾನು ಜಪಾನ್ ಮತ್ತು ಅಮೇರಿಕಾ ದೇಶಗಳಲ್ಲಿನ ಈ ಸಂಬಂಧಪಟ್ಟ ವಿದ್ಯಾಮಾನಗಳನ್ನು ತಿಳಿದು ಕೊಂಡಿದ್ದೇನೆ. ಅಲ್ಲಿನ ರೈತರು ಏನು ಇದ್ದಾರೆ, ಅವರು ಬೆಳೆದದ್ದನ್ನು ಮನೆಯಲ್ಲಿ ಇಟ್ಟುಕೊಂಡು ಕಾಯುತ್ತಾ ಇರುತ್ತಾರೆ ಇದನ್ನು ಖರೀದಿ ಮಾಡಿಕೊಳ್ಳುವವರೆಗೂ ಕಾಯುತ್ತಾ ಇರುತ್ತಾರೆ. ಇಲ್ಲಿರುವಂತೆ, ಅಲ್ಲಿ ಲೇವಿ ಇದೆಯೇನು ? ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಅಮೇರಿಕಾ ಮತ್ತು ಜಪಾನ್ ದೇಶಗಳಲ್ಲಿ ರೈತನು ಬೆಳೆದಂಥ ಬೆಳೆಗಳಿಗೆ ಕನಿಷ್ಠವಾದಂಥ ಬೆಲೆಯನ್ನು ಸರಕಾರ ನಿಗದಿ ಮಾಡಿದೆ. ಒಂದು ಎಕರೆ ಸಾಗುವಳಿ ಮಾಡತಕ್ಕ ಒಬ್ಬ ರೈತನಿಗೆ ಖರ್ಚು ಎಷ್ಟು ಬೀಳುತ್ತದೆ ಎಂಬುದನ್ನೆಲ್ಲಾ ನೋಡಿ, ಹೊಲವನ್ನು ಶುದ್ಧಿ ಮಾಡಿ ಉಳುವುದರಿಂದ ಹಿಡಿದು ಬೆಳೆ ಬೆಳೆಯುವವರಿಗೂ ಆಗುವ ಎಲ್ಲಾ ಖರ್ಚನ್ನೂ ಲೆಕ್ಕ ಹಾಕಿ ಅವನು ಮಾರುಕಟ್ಟೆಗೆ ಅದನ್ನು ಮಾರುವ ಬೆಲೆ ಏನು ಇದೆ, ಅದಕ್ಕೆ ಮಾರಿದರೆ ನಮ್ಮ ರೈತನಿಗೆ ಕೊನೆಗೆ ಏನೇನೂ ಉಳಿಯುವುದಿಲ್ಲ. ಈ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡೇ ಏನೋ ಬಹುಶಃ ಅಮೇರಿಕಾ ಮತ್ತು ಜಪಾನ್ ದೇಶಗಳವರು ಏನು ಮಾಡಿದ್ದಾರೆ ಎಂದರೆ, ಅವನು ಬೆಳೆ ತೆಗೆಯುವುದಕ್ಕೆ ಕನಿಷ್ಟ ಖರ್ಚು ಎಷ್ಟು. ಅನಂತರ ಅವನ ಜೀವನಾವಶ್ಯಕತೆಗೆ ಎಷ್ಟು ಬೇಕಾಗುತ್ತದೆ, ಅದನ್ನು ನೋಡಿಕೊಂಡು ಅದರ ಆಧಾರದ ಮೇಲೆ ಅಲ್ಲಿ ಬೆಲೆಯನ್ನು ನಿಗದಿ ಪಡಿಸಿದ್ದಾರೆ ಇಂತಿಂಥ ಬೆಳೆಗಳಿಗೆ ಇಂತಿಂಥ ಬೆಲೆ ಎಂದು ನಿಗದಿ ಮಾಡಿದ್ದಾರೆ. ಸರಕಾರವೇ ನೇರವಾಗಿ ಖರೀದಿ ಮಾಡುತ್ತದೆ. ಹಣವನ್ನು ಸರಕಾರವೇ ಅವನಿಗೆ ಕೊಡುತ್ತದೆ. ಸರಕಾರದವರು ಕೊಡುವ ಬೆಲೆ, ಸಾಕಷ್ಟು ಪ್ರಮಾಣದಲ್ಲಿ ಅವನಿಗೆ ತೃಪ್ತಿಯಾಗುತ್ತದೆ.

ಅಧ್ಯಕ್ಷರು.—ಜಪಾನ್ ದೇಶದಲ್ಲಿ ಸರಕಾರದವರೇ ತೆಗೆದುಕೊಳ್ಳುವುದಿಲ್ಲ.

4—00 P.M.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಅದು ಏನೇ ಇರಲಿ ಇದನ್ನು ಏತಕ್ಕೆ ಪ್ರಸ್ತಾಪ ಮಾಡುತ್ತೇನೆ ಎಂದರೆ ಯಾವಾಗಲೂ ಕಷ್ಟಪಟ್ಟು ದುಡಿಯುತಕ್ಕ ರೈತನಿಗೆ ಸರಿಯಾದ ಬೆಲೆಯನ್ನು ಸರ್ಕಾರದವರು ನಿಗಧಿಮಾಡಬೇಕು ಉದಾಹರಣೆಗೆ ರಾಗಿ, ಜೋಳ, ಭತ್ತ ಕ್ವಿಂಟಾಲಿಗೆ 80-85 ರೂಪಾಯಿ ಕೊಡುತ್ತಾರೆ. ಹೊರಗಡೆ 150-160 ರೂಪಾಯಿ ಕೆಲವು ಸಾರಿ 200 ರೂಪಾಯಿ ರೇಟ್ಆಗಿದೆ, ಇಷ್ಟು ವ್ಯತ್ಯಾಸ ಇದ್ದಾಗ ಈ ಖರ್ಚಿನ ಜೊತೆಗೆ ಹೇಗೆ ನಿರ್ವಹಣೆ ಮಾಡಬೇಕು ಎನ್ನುವುದು ಮೂಲ ಪ್ರಶ್ನೆ. ಈ ದೃಷ್ಟಿಯಿಂದ ಸರ್ಕಾರವನ್ನು ಈ ಮೂಲಕ ಪ್ರಶ್ನೆ ಮಾಡುತ್ತೇನೆ. ಖರ್ಚಿನ ಆಧಾರದ ಮೇಲೆ ಮತ್ತು ಅವರ ಜೀವನಾವಶ್ಯಕತೆಗೆ ಯಾವ ಪರಿಣಾಮವನ್ನು ಆಧರಿಸಿ ಬೆಲೆಯನ್ನು ತಾವು ನಿಗಧಿ ಮಾಡಿದರೆ ಸಾಧ್ಯವಾಗುತ್ತದೆ. ಇದಕ್ಕೆ ತಾವು ಹೆಚ್ಚಿನ ಗಮನಕೊಡ ಬೇಕು. ವರ್ಕಿಂಗ್ ಪಾಪ್ಯುಲೇಷನ್ 70 ಪರ್‌ಸೆಂಟ್ ಆಗಿರುವುದರಿಂದ ಈ ಮಾತನ್ನು ಹೇಳು ತ್ತೇನೆ. ಈ ಅಗ್ರಿಕಲ್ಚರ್ ಕೂಲಿಗಳು ಏನಿದ್ದಾರೆ the agricultural coolies have not got lands of their own but they know argr cultural work. ಇವೊತ್ತು ಕೇರಳ ರಾಜ್ಯದಲ್ಲಿ ಮಿನಿಮಮ್ ವೇಜಸ್ ಕಾನೂನು ಮಾಡಿದ್ದಾರೆ ಅದೇರೀತಿ ಮತ್ತೆ ಎರಡು ಮೂರು ಕಡೆ ಮಾಡಿದ್ದಾರೆ. ಮಿನಿಮಮ್ ವೇಜಸ್ ಇಷ್ಟು ಇರಬೇಕು. working hours, ಇಷ್ಟು ಇರ ಬೇಕು ಎಂದು ನಿಗದಿ ಮಾಡಿದ್ದಾರೆ. Provident fund facilities ಇಟ್ಟಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ನಾವು ಮಿನಿಮಮ್ ವೇಜಸ್ ಮಾಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಅವರು ಪ್ರಾವಿಡೆಂಟ್ ಫಂಡ್ ಸ್ಕೀಂ ಮಾಡಿದ್ದಾರೆ, ವರ್ಕಿಂಗ್ ಅವರ್ಸ್ ಸಿಸ್ಟಂ ಮಾಡಿದ್ದಾರೆ. ಮಿನಿಮಮ್ ವೇಜಸ್ ಮಾಡಿದ್ದಾರೆ. You please bring a legislation to that effect comprising of these factors, then only you will be giving a good help to the landless people who mainly depend on agricultural works ಈ ಸಾರಿ ಬಡ್ಜೆಟ್ ಸೆಷನ್ ಮುಗಿಯುವುದರೊಳಗಾಗಿ ದಯಮಾಡಿ ಇದನ್ನು ತೆಗೆದುಕೊಂಡು ಬನ್ನಿ. ಈ ದೃಷ್ಟಿಯಿಂದ ಈ ವಿಷಯ ತಮ್ಮ ಹತ್ತಿರ ಪ್ರಸ್ತಾಪ ಮಾಡುತ್ತಾ ರೂರಲ್ ಎಕಾನಮಿ ಬೆಳೆಯಬೇಕು ಎಂದು ಹೇಳುತ್ತೇನೆ. ಇವೊತ್ತು ಮೇಜರ್ ಇರಿಗೇಷನ್ ಮಾಡಿದ್ದೀರಿ, ಮಾಡಬಾರದು ಎಂದು ಅಲ್ಲ, ತುಂಗಭದ್ರ, ಅಪ್ಪರ್ ಕೃಷ್ಣ ಪ್ರಾಜೆಕ್ಟ್ ..

ಶ್ರೀ ಎಚ್. ಡಿ. ದೇವೇಗೌಡ.—ರೂರಲ್ ಎಕಾನಮಿ ಬೆಳೆದು ಹೋಗಿದೆ, ರಾಜ್‌ಕಮಿಟಿ ರಿಪೋರ್ಟ್ ನೋಡಲಿಲ್ಲವೇ ?

ಶ್ರೀ ಎಸ್ ಬಂಗಾರಪ್ಪ —ಅದು ನೋಡಿದ್ದೇನೆ, ಅಗ್ರಿಕಲ್ಚರಲ್ ಬಗ್ಗೆ ಸೆಂಟ್ರಲ್ ಗವರ್ನ್ ಮೆಂಟ್ ರಿಪೋರ್ಟ್ ನೋಡಿದ್ದೇನೆ. ಅದರಲ್ಲಿ ಬೇಕಾದಷ್ಟು ವ್ಯತ್ಯಾಸ ಇದೆ. ಮಾನ್ಯ ಅಧ್ಯಕ್ಷರೇ ಈಗ ರೂರಲ್ ಎಕಾನಮಿ ಬೆಳೆಯಬೇಕು ಎಂದರೆ ಪ್ರಾಮುಖ್ಯವಾಗಿ ಮೂರು ಅಂಶ ಒಳಗೊಂಡಿರ ಬೇಕು. ನ್ಯಾಷನಲೈಜೇಷನ್ ಆಫ್ ಅಗ್ರಿಕಲ್ಚರ್ ಮಾಡಬೇಕು, ಪ್ರೊಡಕ್ಟಿವಿಟಿ ಜಾಸ್ತಿ ಮಾಡ ಬೇಕು. ಅನಂತರ ಕ್ರಿಯೇಷನ್ ಆಫ್ ಸರ್‌ಪ್ಲಸ್ ಅಂಡ್ ಇಟ್ಸ್ ಮೊಬಿಲೈಸೇಷನ್ ಆಗಬೇಕು ಅದರ ಜೊತೆಗೆ ability to export a part of productivity. ಆಗಬೇಕು, ಇವೊತ್ತು ನಾವು ಏನು ಬೆಳೆಯುತ್ತೇವೆ ಅದು ನಮಗೇ ಸಾಕಾಗುವದಿಲ್ಲ ಎನ್ನುವ ಕೂಗು ಇದೆ. ನಾವು ಏನು ಬೆಳೆಯುತ್ತೇವೆ ಅದರಲ್ಲಿ ಕೆಲವು ಭಾಗವನ್ನು ಮಾರತಕ್ಕ ಶಕ್ತಿ ಪಡೆದುಕೊಂಡಿರಬೇಕು. It all depends upon the production. ಪ್ರೊಡಕ್ಷನ್ ಜಾಸ್ತಿ ಆದರೆ ಇದು ಸಾಧ್ಯವಾಗು ತ್ತದೆ. ಇದಕ್ಕೆ ಹೆಚ್ಚಿನ ಗಮನ ತಾವು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಕ್ರಾಪಿಂಗ್ ಪ್ಯಾಟರನ್ ಸರಿಮಾಡಿದರೆ ಮಾತ್ರ ಸಾಧ್ಯ ಆಗಬಹುದು. ನನ್ನ ಅಭಿಪ್ರಾಯದಲ್ಲಿ First, Second, Third and Fourth five year plan ಅಂದರೆ ಸುಮಾರು 1970-71ರ ವರೆಗೆ ನನಗೆ ಅನಿಸುತ್ತದೆ ಕ್ರಾಪಿಂಗ್ ಸಿಸ್ಟಂನಲ್ಲಿ ಎಷ್ಟೋ ಲಕ್ಷ ಹೆಕ್ಟೇರ್‌ಗಳಲ್ಲಿ ಕ್ರಾಪಿಂಗ್ ಪ್ಯಾಟರ್ನ್ ಚೇಂಜ್ ಮಾಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಆದರೆ ಆ ವರದಿಯಲ್ಲಿ ಯಾವುದು ವಾಸ್ತವ ಅಂಶ ಸಿಕ್ಕುತ್ತಿಲ್ಲ. ಕ್ರಾಪಿಂಗ್ ಪ್ರಾಟರನ್ ಬಗ್ಗೆ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆಯೇ ಅಂದರೆ ವರದಿಯಲ್ಲಿ ಏನೇನೂ ಇಲ್ಲ. ಲ್ಯಾಂಡ್ ಯುಟಿಲೈಜೇಷನ್ ಫಿಫ್ತ್ ಪ್ಲಾನ್‌ನಲ್ಲಿ ಎಷ್ಟು ಅನ್ನುವ ಅಂಕಿಅಂಶ ಒದಗಿಸಿಲ್ಲ. ನನ್ನ ಅಂಕಿ ಅಂಶದ ಪ್ರಕಾರ percentage

of land utilization has not crossed the old barriers. ಕ್ರಾಪಿಂಗ್ ಪ್ಯಾಟರನ್ ಕೂಡ ಚೇಂಜ್ ಮಾಡುವುದು ಫಿಫ್ತ್ ಪ್ಲಾನ್‌ನಲ್ಲಿ ತಮ್ಮಿಂದ ಆಗಲಿಲ್ಲ.

ಶ್ರೀ ಜಿ. ರಾಮೇಗೌಡ.—ತಾವು ಲ್ಯಾಂಡ್ ಯುಟಿಲೈಜೇಷನ್ ಸ್ಟಾಟಿಸ್ಟಿಕ್ ಯಾವ ಬೇಸಿಸ್ ನ ಮೇಲೆ ಕಲೆಕ್ಟ್ ಮಾಡಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯ ಕೇಳುವುದಾದರೆ, ಇದಕ್ಕೆ ಬೇರೆ ಪುಸ್ತಕಗಳು ಇವೆ. There are so many expertson agriculture who have written so many books on agriclture. ತಾವು ಕೊಟ್ಟಿರುವ ಅಂಕಿಅಂಶಕ್ಕೂ ಅದಕ್ಕೂ ವ್ಯತ್ಯಾಸ ಇದೆ. We will have to depend upon the facts and figures furuished by the government, otherwise we have to depend upon the experts who have written the books on agriculture. ಸ್ಟಾಟಿಸ್ಟಿಕ್ಸ್ ನನ್ನ ಹತ್ತಿರ ಇದೆ, ಪುಸ್ತಕ ಹಿಡಿದುಕೊಂಡು ಮಾತನಾಡುತ್ತೇನೆ Census of Agricultural Holdings in Karnataka 1970-71 ಇದರಲ್ಲಿ ಸಾಕಷ್ಟು ಅಂಕಿಅಂಶ ಕೊಟ್ಟಿದ್ದಾರೆ. ಇದೇ ಸಂದರ್ಭದಲ್ಲಿ ಕ್ರಾಪಿಂಗ್ ಇನ್‌ಷೂರೆನ್ಸ್ ಬಗ್ಗೆ ಹೇಳುತ್ತೇನೆ ಮಾನ್ಯ ಚಿಕ್ಕೇಗೌಡರು ಇದರ ಬಗ್ಗೆ ಉತ್ತರ ಹೇಳುತ್ತಾರೆ ಎಂದು ನಂಬಿಕೆ ಇಟ್ಟುಕೊಂಡಿದ್ದೇನೆ. ಈಗಾಗಲೇ ಮಹಾರಾಷ್ಟ್ರ, ಬೇರೆ ಬೇರೆ ರಾಜ್ಯಗಳಲ್ಲಿ ಗಮನಕೊಟ್ಟಿದ್ದಾರೆ. ಕ್ರಾಪಿಂಗ್ ಇನ್‌ಶೂರೆನ್ಸ್ ಮಾಡತಕ್ಕ ವಿಷಯ ಮಹಾರಾಷ್ಟ್ರ, ಗುಜರಾತ್, ಕಡೆಗಳಲ್ಲಿ ಮಾಡಿಕೊಂಡಿದ್ದಾರೆ. ಕ್ರಾಪಿಂಗ್ ಇನ್‌ಷೂರೆನ್ಸ್ ಸಿಸ್ಟಂ ನಮ್ಮ ರಾಜ್ಯದಲ್ಲಿ ಜಾರಿಗೆತರಬೇಕು ಎನ್ನುವುದೇ ನನ್ನ ಅಭಿಪ್ರಾಯ, ಇಲ್ಲವೆ ಹೋದರೆ ಬೆಳೆಯುತಕ್ಕ ರೈತರಿಗೆ ಬೆಳೆ ಬಂದಾಗ ಬರುತ್ತದೆ, ಹೋದಾಗ ಹೋಗುತ್ತದೆ, ಮಹಾರಾಷ್ಟ್ರದಲ್ಲಿ ಏನು ಮಾಡಿದ್ದಾರೆ ಎಂದರೆ ಅಲ್ಲಿಯೂ ತರುವುದಕ್ಕೆ ಪ್ರಯತ್ನ ಪಡುತ್ತಾರೆ ಎನ್ನುವ ನಂಬಿಕೆ ಇಟ್ಟುಕೊಂಡಿದ್ದೇನೆ ಬೆಲೆ ನಿಗದಿ ಮಾಡುವ ವಿಷಯದಲ್ಲಿ ಪ್ರೈಸ್ ಫಿಕ್ಸೇಷನ್ ಕಮಿಟಿ ಬಗ್ಗೆ ತಾವು ಹೋರಾಟ ಮಾಡುತ್ತೇವೆ ಎಂದು ಹೇಳಿದಿರಿ, ಏತಕ್ಕೆಂದರೆ ಮುಖ್ಯಮಂತ್ರಿಗಳು ಕೂಡ ಹೇಳಿದ್ದರು. ನಾವು ಹೇಳುತ್ತಿದ್ದೇವೆ ಅದು ಆಗುವುದಿಲ್ಲ ಎಂದು, ಲಾರಿ ಬಾಡಿಗೆ ಇತ್ಯಾದಿ ಎಲ್ಲಾ ಸೇರಿಸಿಕೊಡುತ್ತಿದ್ದಾರೆ ಎನ್ನುವ ವಿಷಯ ಹೇಳಿದ್ದೀರಿ. The Price Fixation Committee of the Central Government has not at all come to the rescue of agriculturists. I request through the Chair to put more pressure on the Central Government Price Fixation Committee to see that exact prices are fixed for the produce. ದಯಮಾಡಿ ಇದರ ಬಗ್ಗೆ ಪ್ರೆಜರ ತರಬೇಕಾಗುತ್ತದೆ. ಇಲ್ಲದೇ ಹೋದರೆ ಆಕಾಶ ನೋಡಿಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ಈ ಒಂದು ಸಂದರ್ಭದಲ್ಲಿ ದಯಮಾಡಿ ಪ್ರೆಜರ್ ತರಬೇಕು ಎಂದು ಹೇಳುತ್ತೇನೆ, ಅಧ್ಯಕ್ಷರೆ, ಮೇಜರ್ ಇರಿಗೇಷನ್ ವಿಷಯದಲ್ಲಿ ನಾನು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುತ್ತಾ ಹೇಳಿದೆ, ತಮಿಳುನಾಡಿನಲ್ಲಿ ಜಾಸ್ತಿ ಇದೆ, ಸುಮಾರು ನಮ್ಮಲ್ಲಿ 11.9 ಪರ್‌ಸೆಂಟ್ ಮೇಜರ್ ಇರಿಗೇಷನ್, ತಮಿಳುನಾಡಿನಲ್ಲಿ 36 ಪರ್‌ಸೆಂಟ್, ಆಂಧ್ರಪ್ರದೇಶದಲ್ಲಿ 22 ಪರ್‌ಸೆಂಟ್, ಮೇಜರ್ ಇರಿಗೇಷನ್ ಅಷ್ಟೇ ಸರ್ಕಾರದ ಲೆಕ್ಕದ ಪ್ರಕಾರ ಇಷ್ಟೊಂದು ಕಡಿಮೆ ಪರ್‌ಸೆಂಟೇಜ್ ಇದೆ. ಇರಿಗೇಷನ್ ಫೆಸಿಲಿಟೀಸ್ ನಮ್ಮ ರಾಜ್ಯದಲ್ಲಿ ಇದೆ. ಇಷ್ಟು ಇದ್ದು ಫಿಫ್ತ್ ಫೈವ್ ಇಯರ್ ಪ್ಲಾನ್ ಪೀರಿಯಡ್ ಒಳಗೆ ನಾವು ಬಂದಿದ್ದೇವೆ.

ಅಧ್ಯಕ್ಷರು—ಮಾನ್ಯ ಸದಸ್ಯರು ಮಾತನಾಡುವುದಕ್ಕೆ ಪ್ರಾರಂಭ ಮಾಡಬಹುದು. ಈಗಾಗಲೇ 32 ನಿಮಿಷಗಳಾಗಿದೆ, ನನ್ನ ಹತ್ತಿರ ಬಹಳ ಜನರ ಹೆಸರು ಇದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಮೂಲತಃ ಒಂದು ವಿಷಯವನ್ನು ಪ್ರಸ್ತಾಪ ಮಾಡಿದೆ. ಏನೆಂದರೆ, ಹಳ್ಳಿಗಾಡಿನಲ್ಲಿರತಕ್ಕ ಸಣ್ಣ ವ್ಯವಸಾಯಗಾರನನ್ನು ಸಂಪೂರ್ಣವಾಗಿ ಕಡೆಗಣಿಸಿದ್ದಾರೆ ಎನ್ನುವ ಚಾರ್ಜನ್ನು ಮಾನ್ಯ ಮಂತ್ರಿಗಳ ಮೇಲೆ ಮಾಡಬೇಕಾಗಿದೆ, ಏಕೆಂದರೆ, ಮಂಡ್ಯ ಜಿಲ್ಲೆಯಲ್ಲಿ ಲೇಡಿ ಎಕ್ಸಪರ್ಟ್ ಸ್ಯಾಂಪಲ್ ಸರ್ವೆ ಮಾಡಿದ್ದಾರೆ. ಇರಿಗೇಷನ್ ಫೆಸಿಲಿಟಿ ಭಾಗದಲ್ಲಿರತಕ್ಕ ಜಮೀನಿನ ಒಡೆಯ ಅಥವಾ ಕುಟುಂಬ ಏನು ಇರುತ್ತಾರೆ ಅವರ ಸಂಪೂರ್ಣ ಉತ್ಪನ್ನ ವರ್ಷೇ ವರ್ಷೇ ಎಷ್ಟೆಷ್ಟು ಅನ್ನುವ ಅಂಕಿಅಂಶಗಳನ್ನು ತೆಗೆದುಕೊಂಡು ನಿಗದಿ ಮಾಡಿದ್ದಾರೆ. ಹಾಗೆಯೇ ನೀರಿನ ಆಶ್ರಯ ಏನೇನೂ ಇಲ್ಲದೇ ಇರತಕ್ಕ ವ್ಯವಸಾಯಗಾರ ಯಾರು ಇರುತ್ತಾನೆ ಅವನ ಉತ್ಪನ್ನ ಎಷ್ಟು ಎನ್ನುವುದನ್ನೂ ನಿಗದಿಮಾಡಿದ್ದಾರೆ. ಇವೆರಡನ್ನೂ ನೋಡಿದರೆ ಅಜಗಜಾಂತರ ವ್ಯತ್ಯಾಸ ಇದೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ನೀರಾವರಿ ಸೌಲಭ್ಯ ಇರತಕ್ಕ ಒಬ್ಬ ವ್ಯವಸಾಯಗಾರನ ಕುಟುಂಬ ಎರಡು ಬೆಳೆ ಬೆಳೆಯುತಕ್ಕ

ಶಕ್ತಿಯನ್ನು ಪಡೆದಿರುತ್ತದೆ. ಉತ್ಪನ್ನ ಜಾಸ್ತಿ ಎಂದು ಹೇಳುತ್ತಾರೆ. ಇರಿಗೇಷನ್ ಇಲ್ಲದೇ ಇರತಕ್ಕವನು ಕುಟುಂಬದ ಗೋಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ನಾನು ಒಂದು ಅಭಿಪ್ರಾಯ ಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಸಣ್ಣ ಸಣ್ಣ ಹಿಡುವಳಿಗಾರರು ಏನಿದ್ದಾರೆ ಅವರ ಬಗ್ಗೆ ತಾವು ಮನಸ್ಸು ಕೊಟ್ಟಿಲ್ಲ. ತಾವು ಸ್ಮಾಲ್ ಫಾರ್ಮರ್ಸ್ ಡೆವಲಪಿಂಗ್ ಏಜೆನ್ಸಿ ಎಂದು ಮಾಡಿದ್ದೀರಿ. ಅದು ಕಾರವಾರದಲ್ಲಿ ಇದೆ. ಇದೇರೀತಿ ರಾಜ್ಯದ 19 ಜಿಲ್ಲೆಗಳೂ ಮಾಡಬೇಕು ಎಂದು ನನ್ನ ಅಭಿಪ್ರಾಯ. ಅಷ್ಟೇ ಸಾಲದು ಬ್ಲಾಕ್ ಲೆವೆಲ್‌ವರೆಗೂ ಮಾಡಬೇಕು. ಹೋಬಳಿ ಲೆವೆಲ್‌ವರೆಗೂ ಆ ಏಜೆನ್ಸಿಯನ್ನು ತೆಗೆದುಕೊಂಡು ಹೋಗಿ ಅದು ಕೆಲಸಕಾರ್ಯಗಳನ್ನು ನಿರ್ವಹಣೆ ಮಾಡುವಂತೆ ಮಾಡಬೇಕು, ಮತ್ತು ಇದರ ಸೌಲಭ್ಯ ನೇರವಾಗಿ ಸಣ್ಣ ರೈತನಿಗೆ ಮುಟ್ಟುವಂತೆ ಮಾಡಬೇಕು ಎಂದು ನನ್ನ ಅಭಿಪ್ರಾಯ. ಇವತ್ತು ಸಣ್ಣ ಸಣ್ಣ ಹಿಡುವಳಿದಾರರನ್ನು ಕಡೆಗಣಿಸಿದ್ದೀರಿ. ಅವರನ್ನು ಮೇಲೆ ಎತ್ತುವುದಕ್ಕೆ ತಾವು ಒಂದು ಹೊಸ ಯೋಜನೆಯನ್ನು ಸೃಷ್ಟಿ ಮಾಡುವ ಯೋಜನೆಯನ್ನು ಹಾಕಬೇಕು. ಇಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ. ಅಪ್ಪರ್ ಕೃಷ್ಣ, ಹೇಮಾವತಿ ಬೇಸಿನ್, ತುಂಗಭದ್ರ ಬೇಸಿನ್‌ನಲ್ಲಿ ದೊಡ್ಡ ದೊಡ್ಡ ಜಮೀನುದಾರರು ಬರುತ್ತಾರೆ, ಅವರೂ ಬರಲಿ, ನಮಗೆ ಪುಡ್‌ಬೇಕು ಸಂತೋಷ, ಆದರೆ ನೀರಾವರಿ ಸೌಲಭ್ಯ ಇಲ್ಲದೇ ಇರತಕ್ಕ ಅನೇಕ ಪ್ರದೇಶಗಳಿಗೆ ಸಣ್ಣ ನೀರಾವರಿಗೂ ಆದರೂ ತಾವು ಹೆಚ್ಚು ಹಣವನ್ನು ಕೊಡಬೇಕು. ನಂತರ ಅಂಡರ್‌ಗ್ರೌಂಡ್ ವಾಟರ್ ಟ್ಯಾಪ್ ಮಾಡುವುದಕ್ಕೆ ತಾವು ಹೆಚ್ಚಿನ ಯೋಚನೆ ಮಾಡಬೇಕು. ಮತ್ತೊಂದು ಮುಖ್ಯವಾದ ವಿಚಾರವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಹೆಚ್ಚು ಬೆಳೆ ಬೆಳೆಯಬೇಕಾದರೆ ಒಳ್ಳೆಯ ಬೀಜದ ಅವಶ್ಯಕತೆ ಇದೆ. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ಗೆ ಮತ್ತು ಬೇರೆ ಏಜೆನ್ಸಿಗೆ ಸರ್ಟಿಫೈ ಮಾಡಿದ್ದೀರಿ. ಹೊಸ ಏಜೆನ್ಸಿಗೆ ಏನು ಕಾರ್ಯ ವಹಿಸಿದ್ದೀರಿ ಇದರಲ್ಲಿ ದುರ್ವ್ಯವಹಾರಗಳು ವಿಪರೀತ ನಡೆಯುತ್ತಿದೆ. ಫೌಂಡೇಷನ್ ಸೀಡ್ ಎನ್ನುವ ಕಾರಣದ ಮೇಲೆ ನಾನು ತೆಗೆದುಕೊಂಡು ಹೋಗಿ ನನ್ನ ಜಮೀನಿನಲ್ಲಿ ಹಾಕಿ ನೋಡಿದ್ದೇನೆ. ಆ ಬೀಜಗಳು ಹುಟ್ಟಲಿಲ್ಲ. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ನವರು ಸರ್ಟಿಫೈಮಾಡಿ ಸೀಲ್ ಹಾಕಿರತಕ್ಕ ಬೀಜಗಳು ಈರೀತಿ ಆಗಿದೆ. ಎನ್.ಎಸ್.ಸಿ. ಯಲ್ಲಿ 2 ಕೋಟಿ ರೂಪಾಯಿ ಹತ್ತಿ ಬೆಳೆ ಬೆಳೆಯತಕ್ಕ ಸೀಡ್ಸ್ ದುರ್ವ್ಯವಹಾರ ರಾಜ್ಯದಲ್ಲಿ ನಡೆದಿದೆ. ಹಿಂದೆ ಶ್ರೀಮಾನ್ ದೇವೇಗೌಡರು ಬರಗಾಲ ಪರಿಸ್ಥಿತಿ ಬಂದಾಗ ಕರ್ನಾಟಕದ ಎಲ್ಲಾ ಭಾಗಕ್ಕೂ ಬೀಜಗಳನ್ನು ಕಳಿಸಬೇಕು ಎನ್ನುವ ಮಾತನ್ನು ಹೇಳಿದರು. ಆಗ ಇದರಲ್ಲಿ ಕೋಟ್ಯಾಂತರ ರೂಪಾಯಿ ದುರ್ವ್ಯವಹಾರ ನಡೆದಿದೆ. ಆ ಕಾಲದಲ್ಲಿ ಸಂಪೂರ್ಣ ವಿಚಾರಣೆ ಆಗಬೇಕು, ಎಲ್ಲಾ ಪತ್ರಗಳನ್ನು ತಂದು ಸಭೆಯಲ್ಲಿ ಇಡಬೇಕು, ನಾನು ರುಜುವಾತು ಪಡಿಸುತ್ತೇನೆ, ನಾನು ರುಜುವಾತು ಮಾಡದೇ ಹೋದರೆ ನಾನು ರಾಜಿನಾಮೆ ಕೊಡುತ್ತೇನೆ ಎನ್ನುವ ಸವಾಲನ್ನು ಶ್ರೀಮಾನ್ ದೇವೇಗೌಡರು ಹಾಕಿದರು. ಈ ಒಂದು ಅಪಾದನೆಯನ್ನು ರಾಜ್ಯಸರ್ಕಾರದವರು ಹೊತ್ತಿದ್ದಾರೆ. ಆಗ ಶ್ರೀಮಾನ್ ಕೆ.ಎಚ್. ಪಾಟೀಲರು ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದರು. ಶ್ರೀಮಾನ್ ದೇವೇಗೌಡರು ಸಂಬಂಧಪಟ್ಟ ಮಂತ್ರಿಗಳ ಮೇಲೆ ಸವಾಲನ್ನು ಇಟ್ಟರು, ಮಂತ್ರಿಗಳು ಅದರ ವಿಚಾರಣೆಗೆ ಒಪ್ಪಲಿಲ್ಲ. ಆದುದರಿಂದ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಅಧ್ಯಕ್ಷರ ವಶಕ್ಕೆ ಕೊಟ್ಟು ಒಂದು ಸಮಿತಿಯನ್ನು ನೇಮಕಮಾಡಿ, ಅವರು ರಿಪೋರ್ಟ್ ಕೊಡಲಿ; ಶ್ರೀಮಾನ್ ಕೆ.ಎಚ್. ಪಾಟೀಲರು ಇರಲಿ, ಶ್ರೀಮಾನ್ ಚಿಕ್ಕೇಗೌಡರು ಇರಲಿ, ಯಾರೇ ಇರಲಿ. ಇದಕ್ಕೆ ಶ್ರೀಮಾನ್ ಚಿಕ್ಕೇಗೌಡರು ಒಪ್ಪಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಅವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೈಬ್ರಿಡ್ ಜವಾರ್ ಬೀಜಗಳನ್ನು ತೆಗೆದುಕೊಂಡು ಹೋಗಿ ಹಾಕಿದ್ದೇನೆ. ನರಗಳಲ್ಲಿ ರಕ್ತ ತುಂಬಿಕೊಂಡಿರುವ ಹಾಗೆ, ಬೀಜದ ರಕ್ತ ಹಳ್ಳಿಹಳ್ಳಿಗಳಲ್ಲಿ ತುಂಬಿಕೊಂಡಿದೆ. ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು, ಸರ್ಟಿಫೈ ಮಾಡಿದ್ದಾರೆ. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ರವರು ಬೋರ್ಡ್ ಸೀಲ್‌ಗಳನ್ನು ಹಾಕಿದ್ದಾರೆ. ಪಾಂಫಲೆಟ್‌ನಲ್ಲಿ ಇಷ್ಟು ಉದ್ದದ ತೆನೆ ಬರುತ್ತದೆ. ಎಂದು ಹಾಕಿದ್ದಾರೆ. ಆದರೆ ಆ ಬೀಜ ತೆಗೆದುಕೊಂಡು ಹೋಗಿ ಹಾಕಿದರೆ ಚೋಟುದ್ದದ ತೆನೆ ಬಂದಿರುತ್ತದೆ. ವ್ಯವಸಾಯದ ಬಗ್ಗೆ ನಿಮಗೂ ಹೆಚ್ಚು ಅನುಭವ ಇದೆ. ಡಿಪಾರ್ಟ್‌ಮೆಂಟ್‌ನವರು ಸರ್ಟಿಫೈ ಮಾಡಿರತಕ್ಕ ಬೀಜಗಳನ್ನು ನಿಮ್ಮ ಜಮೀನಿಗೆ ತೆಗೆದುಕೊಂಡು ಹೋಗಿ ಹಾಕಿ, ಎಷ್ಟು ಬೆಳೆಯುತ್ತದೆ ಎನ್ನುವುದನ್ನು ನನಗೆ ತೋರಿಸಿ. ನಿಮ್ಮ ವ್ಯವಸಾಯದ ಪರಿಣತೆಯ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಇದರಿಂದ ಭತ್ತ ಇರಲಿ, ಜೋಳ ಇರಲಿ ಇವತ್ತು ನಂಬಿಸಿ ನಂಬಿಸಿ ವ್ಯವಸಾಯಗಾರರು ಹಾಳಾಗತಕ್ಕ ಪರಿಸ್ಥಿತಿ ಇದೆ. ಇವತ್ತು ಒಂದು ಬೆಳೆ ಬೆಳೆಯದೇ ಹೋದರೆ ರೈತನ ಗತಿ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಹೈಕ್ಲಾಸ್ ಬೀಜ ಒಳ್ಳೊಳ್ಳೆಯ ಸೀಡ್ ಎಂದು ಎನ್. ಎಸ್. ಸಿ. ಯವರು ಸರ್ಟಿಫೈ ಮಾಡಿದ್ದಾರೆ, ಅನುಮಾನ ಇಲ್ಲ ಎಂದು ಗ್ಯಾರಂಟಿ ಕೊಡುತ್ತೀರಿ ಇದರಲ್ಲಿ ತಮಗೇನಾದರೂ ಅನುಮಾನ ಇದ್ದರೆ, ಅನುಮಾನ ಇದೆ ಎಂದು

ರಾಜ್ಯದ ಜನತೆಗೆ ತಿಳಿಸಬೇಕು. ನ್ಯಾಷನಲ್ ಸೀಡ್ ಕಾರ್ಪೊರೇಷನ್‌ರವರು ತಾವು ಹೇಳಿದ ಹಾಗೆ ಕೆಲಸ ಮಾಡುತ್ತಾರೆ. ಇವತ್ತು ಆ ಬೀಜ ಬೆಳೆಯದೇ ಹೋದರೆ ರಾಜ್ಯಸರ್ಕಾರದವರು ಆ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ. ಈ ಬೀಜಗಳು ಬೆಳೆಯದೇ ಹೋದರೆ ರೈತರ ಗತಿ ಏನಾಗುತ್ತದೆ ಎನ್ನುವುದರ ಬಗ್ಗೆ ಸರ್ಕಾರದವರು ಗಮನ ಹರಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಟ್ರಾಕ್ಟರ್ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ತಾಲ್ಲೂಕ್ ಲೆವೆಲ್‌ನಲ್ಲಿ ಒಂದು ಸೆಂಟರ್‌ನ್ನು ತೆರೆಯುತ್ತಾರೆ. ದಯಮಾಡಿ ಮಾನ್ಯ ಸದಸ್ಯರು ಪುನಃ ವಿಚಾರ ಮಾಡಬೇಕು. ನಾವು ಏನು ಈ ಟ್ರಾಕ್ಟರ್ಸ್ ರಿಪೇರ್ಸ್ ಸೆಂಟರ್‌ಗಳನ್ನು ಮಾಡಿದ್ದೇವೆ, ಕೆಲವು ಆಗ್ರೋ ಇಂಡಸ್ಟ್ರೀಸ್ ಸಂಬಂಧಪಟ್ಟದ್ದನ್ನು ಮಾಡಿದ್ದೀರಿ. ಸೊರಬಾ ತಾಲ್ಲೂಕಿನಲ್ಲಿ ಜಡೆಮಲ್ಲ ಎನ್ನತಕ್ಕ ಎಸ್ಟೇಟ್ ಇದೆ. ಅಲ್ಲಿ ಲಕ್ಷಾಂತರ ರೂಪಾಯಿ ಲೂಟ್ ಆಗಿದೆ. ಟ್ರಾಕ್ಟರ್ ಇದ್ದು ಮೂಲೆಗುಂಪಾಗಿ ಬಿದ್ದಿದೆ. ಟ್ರಾಕ್ಟರನ್ನು ನೋಡಿದರೆ ಹೊಟ್ಟೆ ಉರಿಯುತ್ತದೆ ಇಟ್ ಇಸ್ ಅವರ್ ಸ್ಟೇಟ್ ಪ್ರಾಪರ್ಟಿ. ಸಿಕ್ಕತಕ್ಕ ಇಂಪ್ಲಿಮೆಂಟ್ ತೆಗೆಯತಕ್ಕ ಅಧಿಕಾರವಿದ್ದರೆ ಆಯಿತು ; ಬಕಪಕ್ಷಿ ಕೂತ ಹಾಗೆ ಇರುತ್ತದೆ, ಲಕ್ಷಾಂತರ ರೂಪಾಯಿಗಳು ನಮ್ಮ ತಾಲ್ಲೂಕಿನ ಜಡೆಹಳ್ಳಿಯಲ್ಲಿ ಹಾಳಾಗಿ ಹೋಗಿದೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಟ್ರಾಕ್ಟರ್ಸ್ ಇವೆ ತಾವು ಅದರಿಂದ ವಿತರಣೆ ಮಾಡುತ್ತಿದ್ದಾರೆಂದು ನಂಬಿಕೆ ಇಟ್ಟುಕೊಂಡಿದ್ದೀರಿ. ಜಡೆಮಲ್ಲ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಕ್ಷಾಂತರ ರೂಪಾಯಿ ಹಣ ದುರ್‌ವ್ಯವಹಾರ ನಡೆದಿದ್ದರೂ ಕೂಡ ಮತ್ತೆ ಹಣವನ್ನು ಕೊಟ್ಟು ಮತ್ತೆ ಎಬ್ಬಿಸಬೇಕೆಂದು ಪ್ರಯತ್ನ ಮಾಡುತ್ತಿದ್ದೀರಿ. ಟ್ರಾಕ್ಟರ್‌ಗಳಿಗೆ ಟೈರ್ ಟ್ಯೂಬ್‌ಗಳೇ ಇಲ್ಲ. ಕೆಲವು ಎಂಜಿನ್‌ಗಳಿಗೆ ಮುಖವೇ ಇಲ್ಲ. ಮೂಲೆಗುಂಪಾಗಿರುವ ಅನೇಕ ಟ್ರಾಕ್ಟರ್‌ಗಳನ್ನು ಮತ್ತೆ ಎತ್ತಬೇಕು ಎನ್ನುವ ದೃಷ್ಟಿಯಿಂದ ಲಕ್ಷಾಂತರ ರೂಪಾಯಿ ಹಣವನ್ನು ಕೊಡಿಸುವುದಕ್ಕೆ ರಾಜ್ಯ ಸರ್ಕಾರದಲ್ಲಿ ಪ್ರಯತ್ನ ನಡೆಯುತ್ತಿದೆ. ಅಂಥದ್ದೇನಾದರೂ ನಡೆದಿದ್ದರೆ ಅಲ್ಲಿ ಪ್ರಾಸಿಕ್ಯೂಟ್ ಮಾಡಬೇಕು, ರೆಸ್‌ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕು, ಹಣ ದುರ್‌ವ್ಯವಹಾರ ನಡೆದಿದ್ದರೆ ಅದನ್ನು ವಸೂಲು ಮಾಡಬೇಕು. ಶಿವಮೊಗ್ಗದಲ್ಲಿರತಕ್ಕ ಆಗ್ರೋ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕ ಸೊರಬಾ ತಾಲ್ಲೂಕಿನ ಶ್ರೀ ಚನ್ನವೀರಪ್ಪಗೌಡರು ಆರು ತಿಂಗಳಿಂದ ಟ್ರಾಕ್ಟರನ್ನು ಇಟ್ಟುಕೊಂಡಿದ್ದಾರೆ. ಆರು ತಿಂಗಳಿನಿಂದ ಅವರ ಹತ್ತಿರವಿದೆ. ಇವತ್ತು ನಾನು ಕೇಳುತ್ತೇನೆ ಅದನ್ನು ಬಾಡಿಗೆಗೆ ಕೊಟ್ಟಿದ್ದಾರೆಯೋ ಎಂದು ಕೇಳುತ್ತೇನೆ. ಜನರು ಯಾರಾದರೂ ಬಾಡಿಗೆಗೆ ಕೇಳಿದರೆ ಇಲ್ಲ ಎಂದು ಹೇಳುತ್ತಾರೆ. ನೂರು ರೂಪಾಯಿ ಸಾವಿರ ರೂಪಾಯಿ ಬಾಡಿಗೆ ಸಂಪಾದನೆ ಮಾಡಿದ್ದಾರೆ. ಸುಳ್ಳು ಸರ್ಟಿಫಿಕೇಟ್ ಕಳುಹಿಸಿ ಕೆಟ್ಟು ಹೋಗಿದೆ ಎಂದು ಹೇಳಿ ಟ್ರಾಕ್ಟರ್‌ನಲ್ಲಿ ಮದುವೆ ಮೆರವಣಿಗೆ ಮಾಡುತ್ತಿದ್ದಾರೆ. ಅವರು ಆಡಳಿತ ಪಕ್ಷದ ತಾಲ್ಲೂಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಅವರು ಟ್ರಾಕ್ಟರನ್ನು ಇಟ್ಟುಕೊಂಡು ದುರುಪಯೋಗಪಡಿಸುತ್ತಿದ್ದಾರೆ. ನಾನು ಹೇಳುತ್ತೇನೆ ಅವರೇ ಟ್ರಾಕ್ಟರನ್ನು ಇಟ್ಟುಕೊಂಡು ಉಳುಮೆ ಮಾಡುತ್ತಾ ಹೈಬ್ರೀಡ್ ಬೀಜವನ್ನು ಉತ್ಪಾದನೆ ಮಾಡುತ್ತಾ ಇದ್ದಾರೆ. ಸರ್ಟಿಫೈಡ್ ಬೀಜವೆಂದು ಮಾರಿದ್ದಾರೆ ಅವರು ಮಂಗಳಾ ಎಸ್ಟೇಟ್‌ನಲ್ಲಿ ಹತ್ತು ಎಕರೆಯ ಒಂದು ಪ್ಲಾಟನ್ನು ಖರೀದಿ ಮಾಡಿದ್ದಾರೆ. ಅವರಿಗೆ ಇನ್ನೂ ಬೇರೆ ಬೇರೆ ಪ್ಲಾಟ್‌ಗಳೂ ಇವೆ. ಮಂಗಳಾ ಎಸ್ಟೇಟ್ ಹತ್ತು ಎಕರೆ ಪ್ಲಾಟ್‌ನಲ್ಲಿ ಮೇಲ್ ಮತ್ತು ಫೀಮೇಲ್ ಬೀಜಗಳನ್ನು ಕ್ರಾಸ್ ಮಾಡಿ ಒಳ್ಳೆಯ ಬೀಜವನ್ನು ಬೆಳೆದಿದ್ದಾರೆಂದು ಹೇಳುತ್ತಾರೆ. ಮಲ್ಲಾಪುರ ಪ್ಲಾಟ್ ಅನವಟ್ಟಿ ಮತ್ತು ಸೊರಬಾ ರೋಡ್‌ನಲ್ಲಿ ಇದೆ. ಮಂಗಳಾ ಎಸ್ಟೇಟ್ ಎಂದು ಬೋರ್ಡ್‌ನಲ್ಲಿ ಬರೆದಿದೆ. ಶ್ರೀಮಾನ್ ಚಿಕ್ಕೇಗೌಡರಿಗೆ ಪ್ರಾರ್ಥನೆ ಮಾಡುತ್ತೇನೆ ಮತ್ತು ನಂಬಿಕೆಯ ಮಾತು ಆಡುತ್ತೇನೆ, ಬೆಳೆದ ಬೀಜ ಒಳ್ಳೆಯದಲ್ಲ. ತೆಗೆದುಕೊಂಡು ಹೋದವರ ಭೂಮಿಯಲ್ಲಿ ನಾಲ್ಕು ಬೀಜ ಹುಟ್ಟಲಿಲ್ಲ. ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿ ಚೇರ್‌ಮನ್‌ರವರು 12 ಸಾವಿರದ ಒಂದು ಐಟಮ್, ಏಳು ಸಾವಿರದ ಒಂದು ಐಟಮ್, ಒಟ್ಟು 19 ಸಾವಿರ ರೂಪಾಯಿ ಮಾರಾಟ ಮಾಡಿದ್ದಾರೆ. ಬೆಳೆ ಸರಿಯಾಗಿ ಬಾರದಿದ್ದಕ್ಕೆ ನೇರವಾಗಿ ಅಪಾದನೆ ಮಾಡುತ್ತಾರೆ. ಏತಕ್ಕೆ ಸರ್ಟಿಫೈಡ್ ಏಜೆನ್ಸಿ ಆಜ್ಞೆ ಮಾಡಿದ್ದಾರೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. ದಯಮಾಡಿ ಒಂದು ಮಾತನ್ನು ಹೇಳುತ್ತೇನೆ, ಮಲೆನಾಡು ಭಾಗದಲ್ಲಿ ಭೂಸಾರ ರಕ್ಷಣೆಗೆ ಹೊಸ ಯೋಜನೆಯನ್ನು ಮಾಡಬೇಕು, ಕೆರೆಗಳ ಬಗ್ಗೆಯೂ ತಿಳಿಸಿದ್ದೇನೆ. ಭೂಸಾರದ ರಕ್ಷಣೆಯ ಬಗ್ಗೆ ಹೆಚ್ಚಿಗೆ ಗಮನ ಕೊಡಬೇಕು. ಮೈದಾನ ಪ್ರದೇಶಗಳಲ್ಲಿ ಮಾಡಿದ್ದಾರೆ, ಅದಕ್ಕೆ ಬಹಳ ಸಂತೋಷಪಡುತ್ತೇನೆ. ಹಳೆ ಮೈಸೂರು ರಾಜ್ಯದಲ್ಲಿ ಹೆಚ್ಚಿನ ಗಮನ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಡೈರಿಬಗ್ಗೆ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ

ಪಡುತ್ತೇನೆ. ಶಿವಮೊಗ್ಗದಲ್ಲಿ ಡೈರಿ ಇದೆ ಅಲ್ಲಿಂದ ನಮ್ಮ ಮನೆಗೂ ಹಾಲನ್ನು ತರಿಸುತ್ತೇನೆ. ಮೊದಲು ಬರುತ್ತಿದ್ದ ಹಾಲು ಗಟ್ಟಿಯಾಗಿ ಚೆನ್ನಾಗಿ ಇರುತ್ತಿತ್ತು. ಈಗ ನೀರನ್ನು ಬೆರೆಸುವುದಕ್ಕೆ ಶುರು ಮಾಡಿದ್ದಾರೆಂದು ಕಾಣುತ್ತದೆ. ಈಗ ಏನಾಗಿದೆ ಎಂದರೆ ಹಾಲಿಗೆ ನೀರನ್ನು ಸೇರಿಸುವ ಬದಲು ನೀರಿಗೆ ಹಾಲನ್ನು ಸೇರಿಸುತ್ತಾರೋ ಏನೋ ಎಂದು ಇಷ್ಟೊಂದು ವಿಷಯವನ್ನು ಪ್ರಸ್ತಾಪಮಾಡಿ ಮಾನ್ಯ ಅಧ್ಯಕ್ಷರೆ—

Mr. Chairman [SRI K. N. VEERAPPAGOWDA] in the Chair.

ಸಣ್ಣ ಸಣ್ಣ ವ್ಯವಸಾಯಗಾರರನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೀರೆಂದು ತಿಳಿಸಿ ಕಾಲ ಕಡಿಮೆ ಇರುವುದರಿಂದ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಜಿ ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಿಗೆ ಸಂಪೂರ್ಣ ಬೆಂಬಲವನ್ನು ನೀಡಿ ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಬೇಕೆಂದು ನಾನು ಇಚ್ಛಿಸುತ್ತೇನೆ. ರಾಜ್ಯದಲ್ಲಿ ವ್ಯವಸಾಯ ಬಹಳ ಮುಖ್ಯವಾದುದು ಎಂದು ಹೇಳತಕ್ಕದ್ದನ್ನು ನಾನು ಒತ್ತಿ ಹೇಳಬೇಕಾದುದಿಲ್ಲ. ವಿರೋಧಪಕ್ಷದ ಸದಸ್ಯರು ಕೂಡ ಹೇಳುತ್ತಾರೆ, ನಾವು ಕೂಡ ಇದರಲ್ಲಿ ಆಸಕ್ತಿ ಇರಬೇಕೆಂದು ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ. ಆದರೆ ನೀರಾವರಿ ಇಲ್ಲ. ಇಲ್ಲದ ಕಡೆ ಮಳೆಯ ಆಧಾರದ ಮೇಲೆ ಬೆಳೆ ಆಗತಕ್ಕ ವಿಚಾರವನ್ನು ಹೆಚ್ಚಿಗೆ ಗಮನದಲ್ಲಿಡಬೇಕಾದುದು ಸರ್ಕಾರದ ಒಂದು ಕರ್ತವ್ಯವೆಂದು ನಾನು ಹೇಳಲು ಇಚ್ಛೆಪಡುತ್ತೇನೆ. ಶ್ರೀಮಾನ್ ಬಂಗಾರಪ್ಪನವರು ಹೇಳಿದ ಹಾಗೆ ಎರಡು ಬೆಳೆ ತೆಗೆಯತಕ್ಕ ಒಬ್ಬ ರೈತನಿಗೆ ಮಳೆಯ ಆಧಾರದಮೇಲೆ ಬೆಳೆ ಬೆಳೆಯತಕ್ಕ ರೈತನನ್ನು ಹೋಲಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಇದು ಎಲ್ಲರೂ ನಿಜವಾಗಿಯೂ ತಿಳಿದಿರತಕ್ಕ ಅಂಶವಾಗಿದೆ. ಆದರೆ ನಾವು ಯಾವ ರೀತಿಯಲ್ಲಿ ಒಣ ಬೇಸಾಯವನ್ನು ಭೂಮಿಯಲ್ಲಿ ಮಾಡಿದ್ದೇವೆ ಎನ್ನುವುದನ್ನು ಸ್ವಲ್ಪ ಕೂಲಂಕಷವಾಗಿ ವಿಚಾರ ಮಾಡಬೇಕು. ಅಪಾರವಾಗಿ ದೇವರ ದಯೆಯಿಂದ ಭೂಮಿಯಮೇಲೆ ಬೀಳತಕ್ಕ ಮಳೆಯ ನೀರನ್ನು ಸಂಗ್ರಹಿಸಿ ವ್ಯವಸಾಯಕ್ಕೆ ಒದಗಿಸತಕ್ಕಂಥದ್ದು ಸರ್ಕಾರದ ಕರ್ತವ್ಯ. ಇದರಲ್ಲಿ ಅನೇಕ ನೀರಾವರಿ ಕಾಮಗಾರಿಗಳು ಆಗಿವೆ. ಅದು ಇಲ್ಲದ ಕಡೆ ಭೂಮಿಯಮೇಲೆ ಬೀಳತಕ್ಕ ಹನಿಯನ್ನು ಸ್ವಲ್ಪಮಟ್ಟಿಗಾದರೂ ಭೂಮಿ ಹಿಂಗುವಂತೆ ಮಾಡಿ ತೇವಾಂಶವನ್ನು ಹೆಚ್ಚಿಸಿ, ಭೂಮಿಯಲ್ಲಿ ಇರುವ ಶಕ್ತಿಯನ್ನು ಹೆಚ್ಚಿಸಬೇಕು. ಅದನ್ನು ಮಾಡತಕ್ಕ ವಿಧಾನ ಬಹಳ ಮುಖ್ಯ. ಇದನ್ನು ಭೂಮಿಯಲ್ಲಿ ಇರತಕ್ಕ ಸಾರವನ್ನು ಸಂಪೂರ್ಣವಾಗಿ ರಕ್ಷಣೆ ಮಾಡತಕ್ಕ ಕ್ರಮ ಒಳ್ಳೆಯದೆಂದು ನಾನು ತಿಳಿದಿದ್ದೇನೆ. ಇದಕ್ಕೆ ಸರ್ಕಾರದವರಿಗೆ ಕೋಟಿಗಟ್ಟಲೆ ರೂಪಾಯಿ ಹಣವನ್ನು ಉಪಯೋಗಿಸುತ್ತಿದ್ದಾರೆ. ನಾನು ಬಹಳ ದುಃಖದಿಂದ ಹೇಳಬೇಕಾಗಿದೆ ಒಡ್ಡುಗಳನ್ನು ಹಾಕುವ ಬಗ್ಗೆ ಏನು ಒಂದು ಕಾರ್ಯಕ್ರಮ ನಡೆಯುತ್ತಾ ಇದೆ; ಅದು ಶಾಸ್ತ್ರೋಕ್ತವಾಗಿ ನಡೆಯುತ್ತಾ ಇಲ್ಲ. ನಡೆಯುತಕ್ಕ ಕೆಲಸದಮೇಲೆ ಮೇಲಿನ ಅಧಿಕಾರಿಗಳ ಉಸ್ತುವಾರಿ ಖಂಡಿತವಾಗಿಯೂ ಸರಿಯಾಗಿಲ್ಲ. ಎಲ್ಲ ಒಡ್ಡುಗಳನ್ನು ಹಾಕಿ ಗೋಡೆಗಳನ್ನು ಕಟ್ಟುತ್ತಾರೆ, ಆ ಗೋಡೆಗಳು ಶಾಸ್ತ್ರೋಕ್ತವಾಗಿ ಭೂಮಿಯ ಮೇಲೆ ಬೀಳತಕ್ಕ ನೀರು ಹಿಂಗಿ ಹೆಚ್ಚು ನೀರು ಹೊರಗೆ ಹೋಗತಕ್ಕಂತೆ ಇರಬೇಕು, ಇದಕ್ಕಾಗಿ ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ನಲವತ್ತನಾಲ್ಕು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದಾರೆ. ಇದರ ಬಗ್ಗೆ ಖಂಡಿತವಾಗಿಯೂ ಬಹಳ ಸೂಕ್ಷ್ಮವಾಗಿ ಆಲೋಚನೆ ಮಾಡಬೇಕಾಗುತ್ತದೆ.

ಹೈದರಾಬಾದ್‌ನಲ್ಲಿ ಒಣ ಬೇಸಾಯ ಪದ್ಧತಿಯನ್ನು ನ್ಯಾಷನಲ್ ಲೆವಲ್‌ನಲ್ಲಿ ಇಂಟರ್ ನ್ಯಾಷನಲ್ ಆಧಾರದ ಮೇಲೆ ಮಾಡತಕ್ಕಂಥ ಕಾರ್ಯಕ್ರಮವನ್ನು ಮಾಡಿದಾಗ ಅಮೇರಿಕಾದ ಒಬ್ಬ ತಜ್ಞರು ಹೇಳಿದರು ನೀವು ಶಾಸಕರು ಎಂದು ನನಗೆ ತಿಳಿಯಿತು. ನಿಮಗೆ ಒಂದು ಮಾತನ್ನು ಹೇಳಬೇಕೆಂದಿದ್ದೇನೆ, ನಿಮ್ಮ ಸರ್ಕಾರ ಬಹಳ ದುಡ್ಡನ್ನು ಭೂಸಾರ ಸಂರಕ್ಷಣೆಗೆ ಖರ್ಚು ಮಾಡುತ್ತಿದ್ದಾರೆ. ಈ ಖರ್ಚು it is a criminal waste ಎಂದು ಹೇಳಿದರು. ಇದನ್ನು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ನಾವು ಏನು ಖರ್ಚು ಮಾಡುತ್ತೇವೆ ಅದನ್ನು ನಾನು ಸ್ವಾಗತಿಸುತ್ತೇನೆ. ಸರ್ಕಾರದವರು ಹೆಚ್ಚು ಕಾರ್ಯಕ್ರಮವನ್ನು ಮಾಡಿದ್ದಾರೆ. ಆದರೆ ಅದನ್ನು ಸರಿಯಾಗಿ ಮಾಡಿಸತಕ್ಕ ವ್ಯವಸ್ಥೆ ಇಲ್ಲದ್ದರಿಂದ ಹಣ ದುರ್ವಿನಿಯೋಗವಾಗಿದೆ ಎಂದು ಹೇಳುವುದಿಲ್ಲ, ಇದು ಸರಿಯಾಗಿ ಕೆಲಸ ಮಾಡದೆ ಅನ್ಯಾಯವಾಗಿದೆಯೆಂದು ಹೇಳುತ್ತೇನೆ. ನಮ್ಮ ಮಂತ್ರಿಗಳು ವ್ಯವಸಾಯಗಾರರು ಇದ್ದಾರೆ.

4-30 P. M.

Sri N. CHIKKE GOWDA.—They said it is a criminal waste spending on soil conservation. Please elaborate how they have said it.

ಶ್ರೀ ಜಿ. ರಾಮೇಗೌಡ.—ಶಾಸ್ತ್ರೋಕ್ತವಾಗಿ ನೂರು ಅಡಿ ಇರುವಂಥ ಭೂಮಿಗೆ ಎಷ್ಟು ಪಾಟ ಕಟ್ಟಬೇಕೋ ಅಷ್ಟು ಪಾಟಕ್ಕೆ ತಕ್ಕಂಥ ಒಡ್ಡನ್ನು ಹಾಕುವುದಿಲ್ಲ ರೈತರು ಹೇಳಿದಂತೆ ಇವರು ಮಾಡುತ್ತಾರೆಯೇ ಹೊರತು ತಜ್ಞರು ಹೇಳಿದಂತೆ ಇವರು ಮಾಡುವುದಿಲ್ಲ. ವೇಸ್ಟ್‌ವೇರ್‌ಗಳನ್ನು ಕಾಲಕ್ಕೆ ಸರಿಯಾಗಿ ಕಟ್ಟುವುದಿಲ್ಲ ; ಕಟ್ಟಿದರೂ ಕೂಡ ಎಷ್ಟು ನೀರು ನಿಂತು ಹೋಗಬೇಕೋ ಅಷ್ಟನ್ನು ಅನುಸರಿಸಿ ಹಾಕುತ್ತಾ ಇಲ್ಲ. ಈ ಭೂಸಾರ ಸಂರಕ್ಷಣೆಯಲ್ಲಿ ಬ್ಲಾಕ್ ಸಾಯಿಲ್‌ನಲ್ಲಿ ಮಾಡಿರತಕ್ಕ ರೀಸರ್ಚ್ ರೆಡ್ ಸಾಯಿಲ್‌ನಲ್ಲಿ ಮಾಡಿಲ್ಲ. ರಾಜ್ಯದಲ್ಲಿ ಇರತಕ್ಕ ಭೂಮಿಯಲ್ಲಿ 50 ಭಾಗಕ್ಕೆ ನಾವು ಒಡ್ಡು ಹಾಕಲೇಬೇಕಾಗಿದೆ. ಅಂತಹದರಲ್ಲಿ 25 ಭಾಗ ರೆಡ್ ಸಾಯಿಲ್ ಇರುವುದರಿಂದ ಇದನ್ನು ಹಾಕತಕ್ಕ ವಿಧಾನ ಹೇಗೆ ಎಂದು ವಿಚಾರಮಾಡಿ ಎಷ್ಟು ಒಡ್ಡು ಹಾಕಬೇಕೋ ಅಷ್ಟು ಒಡ್ಡು ಹಾಕಿ ಕಾರ್ಯಕ್ರಮವನ್ನು ಮಾಡುತ್ತಾ ಇಲ್ಲ. ಇದನ್ನು ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಆದರೂ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವ ರೀತಿಯಲ್ಲಿ ಸದುಪಯೋಗಪಡಿಸುವ ರೀತಿಯಿಂದ ಮಾಡಿಲ್ಲ. ಮನಸ್ವೇಚ್ಛೆಯಿಂದ ಕೆಲಸ ಮಾಡುವುದರಿಂದ ಸರ್ಕಾರದ ಹಣ ಅನ್ಯಾಯವಾಗಿದೆಯೆಂದು ನಾನು ಒತ್ತಿ ಹೇಳುತ್ತೇನೆ. ಆದಷ್ಟು ಜಾಗ್ರತೆ ಇದನ್ನು ಪರಿಶೀಲನೆ ಮಾಡಿ ಶಾಸ್ತ್ರೋಕ್ತವಾಗಿ ಒಡ್ಡು ಹಾಕುವ ಕ್ರಮವನ್ನು ರೂಪಿಸಬೇಕು. ಆಹಾರಧಾನ್ಯಗಳ ವಿಚಾರದಲ್ಲಿ ನಮ್ಮ ಸ್ನೇಹಿತರು ಹೇಳಿದರು ಎಷ್ಟು ಖರ್ಚಾಗುತ್ತದೆಯೋ ಅಷ್ಟನ್ನು ನೋಡಿಕೊಂಡು ಲಾಭದಾಯಕವಾಗಿ ಆಹಾರಪದಾರ್ಥಗಳ ಬೆಳೆಯನ್ನು ಗೊತ್ತುಮಾಡಬೇಕು ಎಂದು. ಅದನ್ನು ನಾನು ಒಪ್ಪುವುದಿಲ್ಲ. 100 ರೂಪಾಯಿ ಖರ್ಚಾದರೆ 100 ರೂಪಾಯಿ ಆದಾಯವನ್ನು ತರಬೇಕು ಎನ್ನುವುದು ನನ್ನ ಅಭಿಪ್ರಾಯ. ರೈತನಿಗೆ ಒಂದು ವರ್ಷ ಮಳೆಯಾಗಿ ಬೆಳೆ ಆಗಬಹುದು. ಒಂದು ವರ್ಷ ಬೆಳೆ ಆಗದೇ ಇರಬಹುದು. ಯಾವಾಗಲೂ ಆದಾಯ ನಷ್ಟವನ್ನು ಸ್ವಲ್ಪಸ್ವಲ್ಪವಾಗಿ ಅಂದರೆ 5—10 ಪರ್ಸೆಂಟ್ ವರ್ತಕನಿಗೆ ಗೊತ್ತುಮಾಡಿದ ಹಾಗೆ ಮಾಡಿದರೆ ರೈತನಿಗೆ ಪ್ರಯೋಜನವಾಗುವುದಿಲ್ಲ. ನೂರಕ್ಕೆ ನೂರು ಲಾಭ ಬರುವ ಹಾಗೆ ಇದ್ದರೆ ಯಾವತ್ತು ಬೆಳೆ ಹೋಗುತ್ತದೆಯೋ ಅವಾಗ ಲಾಭ ಬಂದಿರತಕ್ಕದ್ದನ್ನು ಉಪಯೋಗಿಸಿಕೊಂಡು ಭೂಮಿಯನ್ನು ಅಭಿವೃದ್ಧಿ ಮಾಡಿ ಜೀವನವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಹಾಗೇನಾದರೂ ಬೆಲೆಯನ್ನು ಗೊತ್ತುಮಾಡುವಾಗ ನೂರಕ್ಕೆ ನೂರು ಲಾಭ ಬರುವ ಹಾಗೆ ಬೆಳೆಗಳನ್ನು ಗೊತ್ತುಮಾಡುವುದು ಬಹಳ ಮುಖ್ಯ ಎಂದು ನಾನು ಹೇಳಬಯಸುತ್ತೇನೆ, ಹಾಗೂ ನಮ್ಮ ಮಾನ್ಯ ಮಂತ್ರಿಗಳಿಗೆ ವ್ಯವಸಾಯ ವಿಚಾರವಾಗಿ ಹೆಚ್ಚು ಹೇಳಬೇಕಾದುದು ಇಲ್ಲ. ಅವರು ತುಂಬಾ ಅನುಭವಸ್ಥರು ಮತ್ತು ವ್ಯವಸಾಯ ಪದವೀಧರರು ಇದ್ದಾರೆ. ವ್ಯವಸಾಯದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡಿರತಕ್ಕವರು ಮತ್ತು ನಮ್ಮ ಅದೃಷ್ಟಕ್ಕೆ ಈ ಸಂಬಂಧವಾಗಿಯೇ ಮಂತ್ರಿಗಳಾಗಿದ್ದಾರೆ. ಇದು ನಮ್ಮ ರಾಜ್ಯದ ಭಾಗ್ಯವೆಂದು ನಾನು ಭಾವಿಸಿದ್ದೇನೆ. ಆದರೆ ಇದರಲ್ಲಿ ಕೆಲವು ವಿಷಯಗಳನ್ನು ಅವರ ಗಮನಕ್ಕೆ ತರಬೇಕೆಂದು ಇಚ್ಛೆಪಡುತ್ತೇನೆ. ಇಲ್ಲಿ ನಾವು ಏನು ಬೆಳೆಯಬೇಕೆಂದು ಇದ್ದೇವೆ. ಒಂದು ಕ್ವಿಂಟಾಲ್ ಬೆಳೆಯುವ ಕಡೆ 8 ಕ್ವಿಂಟಾಲ್ ಬೆಳೆಯಬೇಕೆಂದು ಏನು ಇದ್ದೇವೆ ಆ ಸಮಯದಲ್ಲಿ ರೀಸರ್ಚ್ ಇನ್‌ಸ್ಟಿಟ್ಯೂಷನ್‌ಗಳಿಗೆ ಹೆಚ್ಚು ಸಹಾಯ ಮಾಡಬೇಕಾದುದು ಸರ್ಕಾರದ ಕರ್ತವ್ಯ. ನಮ್ಮ ರಾಜ್ಯದಲ್ಲಿ ಕೃಷಿ ವಿಶ್ವವಿದ್ಯಾಲಯ ಇದೆ. ಇದು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಕೇವಲ 9 ವರ್ಷದಲ್ಲಿ ಇಡೀ ಭಾರತದಲ್ಲಿಯೇ ಇದು ಮೂರನೇ ದೊಡ್ಡ ಸಂಸ್ಥೆಯೆಂದು ಹೆಸರುವಾಸಿ ಪಡೆದಿದೆ. ಇಷ್ಟು ಹೆಸರನ್ನು ಪಡೆದಿರತಕ್ಕ ಸಂಸ್ಥೆಗೆ ಸರ್ಕಾರದವರು ಕೊಡತಕ್ಕ ಪ್ರೋತ್ಸಾಹ ಬಹಳ ಕಡಿಮೆ ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣ ಮಾಧ್ಯಮ ಯಾವುದು ?

ಶ್ರೀ ಜಿ. ರಾಮೇಗೌಡ.—ಇವರ ಶಿಕ್ಷಣ ಮಾಧ್ಯಮ ಇಂಗ್ಲೀಷಿನಲ್ಲಿ ಇದೆ. ಶಿಕ್ಷಣ ಮಾಧ್ಯಮ ಕನ್ನಡ ಆಗಬೇಕು ಎನ್ನುವುದನ್ನು ನಾನು ಬೇಡ ಎನ್ನುವುದಿಲ್ಲ. ಆದರೆ ಈಗಲೇ ಆಗಬೇಕು ಎನ್ನುವ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ನಾವೆಲ್ಲರೂ ಕನ್ನಡ ಆಗಲೇಬೇಕು ಎಂದು ಹೇಳುವುದಾದರೆ, ಅಲ್ಲಿ ಇಂಗ್ಲೀಷಿನಲ್ಲಿ ಪಾಠ ಹೇಳುವಾಗ ಬಂದರೆ ನೀವು ಕನ್ನಡಕ್ಕೆ ತರ್ಜುಮೆ ಮಾಡಿಕೊಟ್ಟರೆ ಆಗಲೇ ಅದನ್ನು ಬದಲಾವಣೆ ಮಾಡಬಹುದು ಎಂಬ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಯೂನಿವರ್ಸಿಟಿಯ ಟೆಕ್ಸ್ಟ್‌ಬುಕ್‌ಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವುದು ನನ್ನ ಜವಾಬ್ದಾರಿ ಇರಲಿ. ಯೂನಿವರ್ಸಿಟಿಯಲ್ಲಿ ಕನ್ನಡ ಮಾಧ್ಯಮ ಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೆಯೇ ?

ಶ್ರೀ ಜಿ. ರಾಮೇಗೌಡ.—ಪಠ್ಯಪುಸ್ತಕಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುತ್ತೇವೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಆದರೆ ಕೆಲವು ತಜ್ಞರ ಅಭಿಪ್ರಾಯಗಳನ್ನು ಕನ್ನಡದಲ್ಲಿ ಮುದ್ರಿಸಿದ್ದಾರೆ. ನಾನು ಒಂದು ಸಂದರ್ಭದಲ್ಲಿ ಪುಸ್ತಕಗಳನ್ನು ನೋಡಿ ಹಲವಾರು ಪುಟಗಳಲ್ಲಿ ಹಲವಾರು ತಪ್ಪುಗಳು ಇರುವುದನ್ನು ನಾನು ತೋರಿಸಿದ್ದೇನೆ. ನಾನು ಕನ್ನಡದಲ್ಲಿ ತಜ್ಞನೇನೂ ಅಲ್ಲ. ಆದರೆ ಕೋಣಂದೂರು ಲಿಂಗಪ್ಪನವರ ಕನ್ನಡ ಬರದಿದ್ದರೂ ಅವರು ಹೇಳುವುದನ್ನು ತಿಳಿದು ಕೊಳ್ಳುವ ಶಕ್ತಿ ಇದೆ. ಹಾಗೆ ನೋಡಿದರೆ ಅವರು ತರ್ಜುಮೆ ಮಾಡಿ ಬರೆಸಿರುವ ಪುಸ್ತಕಗಳಲ್ಲಿ ನೂರಾರು ತಪ್ಪುಗಳನ್ನು ತೋರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕನ್ನಡವನ್ನು ಈ ಒಂದು ದೊಡ್ಡ ವಿಶ್ವವಿದ್ಯಾನಿಲಯದಲ್ಲಿ ಮಾಧ್ಯಮವನ್ನಾಗಿ ತರಬೇಕೆಂಬ ಅಭಿಪ್ರಾಯ ಏನು ಇದೆ ಅದನ್ನು ನಿಧಾನವಾಗಿ ತರಲಿ ಎನ್ನುವುದೇ ನನ್ನ ಅಭಿಪ್ರಾಯ. ನಾನು ಅದನ್ನು ಬೇಡ ಎಂದು ಹೇಳುವವ ನಲ್ಲ. ವಿಶ್ವವಿದ್ಯಾನಿಲಯದಲ್ಲಿ ಮಾತನಾಡುವ ಅವಕಾಶ ಇದ್ದರೂ ಕೂಡ ಕನ್ನಡದಲ್ಲಿಯೇ ಮಾತ ನಾಡುತ್ತೇನೆಯೇ ಹೊರತು ಇಂಗ್ಲಿಷಿನಲ್ಲಿ ಮಾತನಾಡುವುದಿಲ್ಲ. ಆದರೆ ಕನ್ನಡ ಭಾಷೆಗೂ ರೀಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ತಜ್ಞರು ಕಂಡುಹಿಡಿಯತಕ್ಕ ಕೆಲಸಕ್ಕೂ ಬಹಳ ದೂರ ಇದೆ. ಇದು ನಾವು ಪ್ರತ್ಯಕ್ಷವಾಗಿ ಮಾಡತಕ್ಕ ಕೆಲಸ. ನಮ್ಮ ರಾಜ್ಯದಲ್ಲಿ ನೂರಾರು ರಿಸರ್ಚ್ ಇನ್‌ಸ್ಟಿಟ್ಯೂಷನ್ಸ್ ಇವೆ. ನಮ್ಮ ವಿಶ್ವವಿದ್ಯಾನಿಲಯದವರೂ ಕೂಡ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ. ಎಲ್ಲಾ ಫ್ಯಾಕಲ್ಟೀಸ್‌ಗೂ ಕೂಡ ಪೋಸ್ಟ್‌ಗ್ರಾಜ್ಯುಯೇಟ್ ಕೋರ್ಸನ್ನು ಕೊಡುವುದಕ್ಕೆ ಏರ್ಪಾಡು ಮಾಡಿದೆ. ಈಗ 13 ಫ್ಯಾಕಲ್ಟೀಸ್ ಆಗಿದೆ. ಇಲ್ಲಿ ಪಿ.ಎಚ್.ಡಿ. ಕಲ್ಪಿಸುವುದಕ್ಕೂ ಏರ್ಪಾಡು ಮಾಡಿದೆ. ಇಷ್ಟು ಎಲ್ಲಾ ಮಾಡಿ ದೊಡ್ಡ ದೊಡ್ಡ ಅಧಿಕಾರಿಗಳನ್ನು ಇಟ್ಟುಕೊಂಡು, ಹೆಚ್ಚಿನ ಸಂಬಳ ಕೊಡಬೇಕಾದುದು, ಹೆಚ್ಚು ಖರ್ಚು ಆಗಬೇಕಾದುದು ಇರುತ್ತದೆ. ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಬಂಗಾರಪ್ಪನವರು ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಸಾಕಷ್ಟು ಕೈತುಂಬ ಸಂಬಳವನ್ನು ಕೊಡಬೇಕೆಂದು ಹೇಳುತ್ತಾರೆ, ಆರ್ಟಿಸಾನ್ಸ್ ಟ್ರೈನಿಂಗ್ ಕೊಟ್ಟಹಾಗೆ ಅಗ್ರಿಕಲ್ಚರಲ್ ಲೇಬರರ್ಸ್‌ಗೆ ಟ್ರೈನಿಂಗ್ ಕೊಡಬೇಕೇ, ಬೇಡವೇ ಎಂಬ ವಿಚಾರವನ್ನು ಹೇಳುವುದಿಲ್ಲ. ಹೊಲ ಉಳುವವನಿಗೆ, ಹುಲ್ಲು ಕೀಳುವವನಿಗೆ, ಹಾರ್‌ವೆಸ್ಟ್ ಮಾಡುವವನಿಗೆ ಟ್ರೈನಿಂಗ್ ಇಲ್ಲ, ಇದು ಸಹಜವಾಗಿ ಬರುತ್ತದೆ. ಆದರೆ ಟ್ರೈನಿಂಗ್ ಇಲ್ಲದೆ ವೇಜಸ್ ಕೊಡಬೇಕು ಎಂಬುದನ್ನು ನಾನು ಒಪ್ಪುವುದಿಲ್ಲ ಪ್ರತಿಯೊಂದು ಕ್ರಮವಾದ ಉದ್ಯೋಗದಲ್ಲಿ ಟ್ರೈನಿಂಗ್ ಕೊಟ್ಟು ಸರ್ಟಿಫಿಕೇಟ್ ಕೊಟ್ಟು. ಆ ಕೆಲಸಕ್ಕೆ ತಕ್ಕ ಹಾಗೆ ಅಷ್ಟು ವೇಜಸ್ ಎಂದು ಸರ್ಕಾರ ಗೊತ್ತುಮಾಡಿ ದರೆ ಅದನ್ನು ಕೊಡುವುದಕ್ಕೆ ನಾವು ಸಿದ್ಧವಾಗಿದ್ದೇವೆ. ಯೂನಿವರ್ಸಿಟಿ ಒಂದಕ್ಕೆ ಎರಡಾಗಿದೆ. ಹೀಗಿರುವಾಗ 197 –73ನೇ ಸಾಲಿನಲ್ಲಿ ಮಾನ್ಯ ಮಂತ್ರಿಯವರು 140 ಲಕ್ಷ ರೂಪಾಯಿ ಕೊಟ್ಟರು. 3 ವರ್ಷಗಳ ನಂತರ ಗೊಬ್ಬರದ ಬೆಲೆ ಏರಿದೆ, ಅಧಿಕಾರಿಗಳ ಸಂಬಳ ಏರಿದೆ. ಸರ್ಕಾರದವರು ಡಿ.ಎ.ಯನ್ನು 7 ಸಲ ಹೆಚ್ಚಿಸಿದ್ದಾರೆ. ಇಷ್ಟಾದರೂ ಕೂಡ 172 ಲಕ್ಷಕ್ಕೆ ನಿಲ್ಲಿಸಿದ್ದಾರೆ. ನಮಗೆ ಮೂಲಭೂತವಾದ ಪ್ರಾಬ್ಲಮ್ಸ್ ಏನು ಇದೆ ಅದರ ಮೇಲೆ ತಜ್ಞರು ಕೆಲಸ ಮಾಡಿ ಅದಕ್ಕೆ ಬೇಕಾದ ಉಪಾಯವನ್ನು ಹುಡುಕತಕ್ಕಂಥ ಸಂಸ್ಥೆಗೆ ಉತ್ತೇಜನ ಕೊಡದೇ ಇರತಕ್ಕದ್ದು ಬಹಳ ಅನ್ಯಾಯ. ಮಾನ್ಯ ಮಂತ್ರಿಗಳು ಇದನ್ನು ಗಮನಿಸಬೇಕು. ಅದರಲ್ಲೂ ಕೂಡ ಐ.ಸಿ.ಎ. ಆರ್. ಕೊಡತಕ್ಕಂಥ ಹಣವನ್ನು ಬಹಳವಾಗಿ ಉಪಯೋಗಿಸಿಕೊಂಡಿದೆ. ಅದರಲ್ಲೂ ಡೆವಲಪ್‌ಮೆಂಟ್ ಗ್ರಾಂಟನ್ನು ಕೇವಲ 60 ಲಕ್ಷ ಕೊಡುತ್ತಿದ್ದಾರೆ. ಈ ನಮ್ಮ ದೊಡ್ಡ ರಾಜ್ಯದಲ್ಲಿ ಇರತಕ್ಕಂಥ ಹಲವಾರು ಸಮಸ್ಯೆ ಗಳನ್ನು ಚರ್ಚೆಮಾಡಿ ಅದರ ಮೇಲೆ ಪರಿಣಾಮಕಾರಿಯಾಗಿ ಕೆಲಸ ಮಾಡಿ ಪ್ರಯೋಜನವಾಗುವ ರೀತಿಯಲ್ಲಿ ಕೆಲಸ ಮಾಡಬೇಕಾಗಿರುವ ದಿಶೆಯಲ್ಲಿ ನಾವು 40 ಲಕ್ಷ ಹೆಚ್ಚಾಗಿ ಕೊಡುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ ಎಂದರೆ ಖಂಡಿತವಾಗಿಯೂ ಇದು ಬಹಳ ಕಠಿಣವಾದ ವಿಚಾರ. ನಮ್ಮ ತೀರ್ಮಾನ ಏನಾದರೂ ಆಗಿದ್ದರೆ ಅದನ್ನು ಪಾಲಿಸಬೇಕು. ಸಿನಿಮಾ ತಯಾರು ಮಾಡುವವರಿಗೆ 50 ಸಾವಿರ ರೂಪಾಯಿನಿಂದ ಒಂದು ಲಕ್ಷ ರೂಪಾಯಿ ಕೊಟ್ಟಿದ್ದೀರಿ, ಒಂದು ಲಕ್ಷಕ್ಕೆ ಇದ್ದುದು ಒಂದೂವರೆ ಲಕ್ಷ ಕೊಟ್ಟಿದ್ದೀರಿ. ಯಾರು ಕೇಳಿದವರು ಇಲ್ಲ, ಕಣ್ಣಿಗೆ ಆನಂದವಾಗಿ, ಮನಸ್ಸಿಗೆ ಆನಂದವಾಗಿ ಒಂದು ದಿನ ಸಂತೋಷಪಡತಕ್ಕ ಸಿನಿಮಾ ತಯಾರು ಮಾಡುವವರಿಗೆ, ಒಂದು ಸಿನಿಮಾಕ್ಕೆ ಒಂದೂವರೆ ಲಕ್ಷ ರೂಪಾಯಿ ಕೊಟ್ಟರೆ, ಇಡೀ ರಾಜ್ಯದಲ್ಲಿ 80 ಪರ್ಸೆಂಟ್ ಜನ ಏನು ಜೀವನ ಮಾಡುತ್ತಾರೆ, ಆಹಾರ ಒದಗಿಸುತ್ತಾರೆ, ತಾವು ತಿಂದು ನಿಮಗೂ ಕೊಡುತ್ತಾರೆ. ಇಂಥವರ ಶ್ರೇಯಸ್ಸಿಗೆ 70 ಲಕ್ಷ ರೂಪಾಯಿ ಕೊಡುವುದಕ್ಕೆ

ಹಿಂದುಮುಂದು ನೋಡಿದರೆ, ಮುಂದೆ ವ್ಯವಸಾಯ ಹೇಗೆ ಬೆಳೆಯಬೇಕು. 80 ಪರ್ಸೆಂಟ್ ಜನ ಹೇಗೆ ಜೀವನ ಮಾಡಬೇಕು. ಇದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಸುಮ್ಮನೆ ಬೆಳೆಯಿರಿ ಎಂದರೆ ಹಾಗೆ ಬೆಳೆಯುವುದಕ್ಕೆ ಆಗುವುದಿಲ್ಲ, ಮೂರು ಪಲ್ಲ ಬೆಳೆಯುವರು, ಎಂಟು ಪಲ್ಲ ಬೆಳೆಯುತ್ತಿದ್ದಾರೆ, 12 ಕ್ವಿಂಟಾಲ್ ಬೆಳೆಯುವಷ್ಟು ಪ್ರಯತ್ನವನ್ನು ನಾವು ಮಾಡುತ್ತಾ ಇದ್ದೇವೆ. ತಜ್ಞರು ಕಂಡುಹಿಡಿದಿದ್ದಾರೆ, ರಾಗಿಯನ್ನು ಮೂರು ಕ್ವಿಂಟಾಲ್ ಬೆಳೆಯುವ ಕಡೆ, 12 ಕ್ವಿಂಟಾಲ್ ಬೆಳೆಯುವ ವಿಧಾನವನ್ನು ಸರಿಯಾದ ರಾಗಿ ಜಾತಿಯನ್ನು ಕಂಡುಹಿಡಿದುಕೊಟ್ಟಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—" Law of decreasing returns" ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಜಿ. ರಾಮೇಗೌಡ.—ನೂರು ರೂಪಾಯಿ ಖರ್ಚು ಮಾಡಿದರೆ, ನೂರು ರೂಪಾಯಿ ಆದಾಯ ಇರಬೇಕು ಎಂದು ಹೇಳಿದ್ದೇನೆ. ಹಣ ಮುಖ್ಯವಲ್ಲ, ಈಗ ಇರತಕ್ಕ ಪರಿಸ್ಥಿತಿ ಅಭಾವ ಏನು ಇದೆ, ಅದು ಮುಖ್ಯ. ಪರದೇಶದಿಂದ ಕೋಟಿಗಟ್ಟಲೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ಏನು ಆಹಾರವನ್ನು ವಿತರಣೆ ಮಾಡುತ್ತಿದ್ದೇವೆ, ಅದರಲ್ಲಿ ಅರ್ಧ ಭಾಗ ಕೊಟ್ಟರೆ ಯೂನಿವರ್ಸಿಟಿ ನಡೆಸಬಹುದು, ಆಹಾರದ ಅಭಾವ ಇಲ್ಲದಂತೆ ಆಗಬಹುದು. ಆದುದರಿಂದ ಡೆವಲಪ್‌ಮೆಂಟ್ ಗ್ರಾಂಟಿನಿಂದ 60 ಲಕ್ಷ ರೂಪಾಯಿ ಕೊಟ್ಟಾದರೂ ಮಾಡಬೇಕು. ಹೊಸ ಹೊಸ ತಳಿಗಳನ್ನು ಬತ್ತದ ಮೇಲೆ ಕಂಡುಹಿಡಿದಿದ್ದಾರೆ, ರಾಗಿಯಲ್ಲಿ ಕಂಡುಹಿಡಿದಿದ್ದಾರೆ, ಕಬ್ಬಿನಲ್ಲಿ ಕಂಡುಹಿಡಿದಿದ್ದಾರೆ, ಯಾವ ಕಾಲದಲ್ಲಿಯೂ ಹುರುಳಿಯಲ್ಲಿ ಹೊಸ ತಳಿ ಕಂಡುಹಿಡಿದಿರಲಿಲ್ಲ, ಈಗ ಹೊಸ ತಳಿ ಕಂಡುಹಿಡಿದಿದ್ದಾರೆ. ಎರಡು ಪಲ್ಲ ಬೆಳೆಯುವ ಕಡೆ ಆರು ಪಲ್ಲ ಬೆಳೆಯುವ ತಳಿ ಕಂಡು ಹಿಡಿದಿದ್ದಾರೆ. ಇದು ರೈತನ ಮುಂದೆ ಇದೆ, ನಮ್ಮ ದುರಾದೃಷ್ಟ, ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ಇಲಾಖೆಯ ಅಧಿಕಾರಿಗಳಿಗೂ ಹೆಚ್ಚಿನ ಸಂಬಂಧ ಇಲ್ಲದೇ ಇರುವುದು, ವಿಸ್ತರಣಾ ವಿಭಾಗ ಕೆಲಸ ಮಾಡದೇ ಇರುವುದು, ಪ್ರಸಾರ ವಿಭಾಗ ಕೂಡ ಚನ್ನಾಗಿ ಕೆಲಸ ಮಾಡದೇ ಇರುವುದು ತಜ್ಞರು ಕಷ್ಟಪಟ್ಟು ಮಾಡಿದ್ದಾರೆ, ಅದು ಜನಸಮುದಾಯಕ್ಕೆ ತಲುಪದೇ ಇರುವುದು ಕಷ್ಟವಾಗಿದೆ. ಅದಕ್ಕೆ ಹಣದ ಸಹಾಯ ಬೇಕು ಇಲ್ಲದೇ ಇದ್ದರೆ ಕಷ್ಟವಾಗುತ್ತದೆ. ಅದನ್ನು ಮಂತ್ರಿಗಳು ಅರಿತಿದ್ದಾರೆ. ವಿಸ್ತರಣಾ ವಿಭಾಗದಿಂದ ಡೈರೆಕ್ಟರನ್ನು ಬಹಳ ಬುದ್ಧಿವಂತಿಕೆಯಿಂದ ಚುನಾಯಿಸಿ ಮಾಡಿದ್ದರೂ ಒಂದು ವರ್ಷ ಕಾದು ನೋಡಬೇಕು. ಎಷ್ಟರಮಟ್ಟಿಗೆ ತಜ್ಞರು ಕಂಡು ಹಿಡಿದಿರುವ ಫಲಿತಾಂಶ ರೈತನಿಗೆ ಮುಟ್ಟುವಂತೆ ಮಾಡಿದ್ದಾರೆ ಎಂದು ತಿಳಿಯಬೇಕಾದರೆ, ಸ್ವಲ್ಪ ಕಾದು ನೋಡಬೇಕಾಗಿದೆ. ಆದುದರಿಂದ ಇಲ್ಲಿ ಇರತಕ್ಕ ಮಾನ್ಯ ಸದಸ್ಯರು ಎಲ್ಲರೂ ವಿಶ್ವವಿದ್ಯಾನಿಲಯಕ್ಕೆ ಅದರಲ್ಲಿಯೂ ವ್ಯವಸಾಯ ಬಹಳ ಕಷ್ಟಗಳು ಯಾವ ರೀತಿ ಇದೆ, ರೈತ ಮಂತ್ರ ಹಾಕಿ ಬೆಳೆಯುವುದಕ್ಕೆ ಆಗುವುದಿಲ್ಲ. ಅವನು ಮಿಷನರಿ ಅಲ್ಲ. ಹಿಡಿ ಚೆಲ್ಲಿ, ಖಂಡುಗ ಬೆಳೆದು ತಾನು ತಿಂದು ಇನ್ನೊಬ್ಬರಿಗೆ ಕೊಟ್ಟು, ದಾನಧರ್ಮ ಮಾಡಿ, ಬೆಂಗಳೂರಿನಲ್ಲಿರುವವರಿಗೆ ಮಜ ಮಾಡುತ್ತಾರಲ್ಲ, ಅವರಿಗೂ ಕೊಟ್ಟು, ಅವರ ಸೇವೆಯನ್ನು ಒಬ್ಬರು ಅರಿತಿರಲಿಲ್ಲ. ಇಂತವನಿಗೆ ಪ್ರೋತ್ಸಾಹ ಕೊಡಬೇಕಾದರೆ ಬಾಯಿ ಮಾತಿನಲ್ಲಿ ಹೇಳಿದರೆ ಆಗುವುದಿಲ್ಲ. ಕಾರ್ಯತಃ ಮೂರು ವರ್ಷಗಳ ಕಾಲ ಹಗಲು ರಾತ್ರಿ ಪ್ರಯತ್ನ ಮಾಡಿದರೆ ಸಾಧ್ಯವೇ ಹೊರತು, ಬಾಯಿಮಾತಿನಿಂದ ಭಾಷಣ ಮಾಡಿದರೆ ಆಗುವುದಿಲ್ಲ. ಪ್ರಯತ್ನ ಮಾಡುವ ವಿಶ್ವವಿದ್ಯಾನಿಲಯಕ್ಕೆ ಬೆಂಬಲ ಕೊಡಬೇಕು. ಮಾನ್ಯಮಂತ್ರಿಗಳು ಈ ಕಷ್ಟವನ್ನು ಅರಿತೂ ಕೂಡ ಸುಮ್ಮನೆ ಇರುವುದು ನಮ್ಮ ದುರಾದೃಷ್ಟ ಎಂದು ಕಾಣಿಸುತ್ತದೆ. ಅವರು ಸ್ವಲ್ಪ ಒತ್ತಾಯ ಮಾಡಬೇಕು. ಮಂತ್ರಿಮಂಡಲದಲ್ಲಿ ಬಹಳ ಪ್ರಭಾವ ಬೀರತಕ್ಕ ಮಂತ್ರಿಗಳು ಆಗಿದ್ದೂ ಕೂಡ ಹಣ ಸಹಾಯ ಇಲ್ಲ ಎಂದರೆ ಖಂಡಿತ ನನಗಂತೂ ಆಶ್ಚರ್ಯ. ಇದು ಏತಕ್ಕೆ ಹಾಗ ಆಗುತ್ತದೆಯೋ ಗೊತ್ತಿಲ್ಲ. ಯಾರೂ ಸಹ ವ್ಯವಸಾಯಕ್ಕೆ ಹಣ ಕೊಡಬೇಡಿ ಎಂದು ಹೇಳುವವರಿಲ್ಲ. ಮಾನ್ಯ ಸಭೆಯಲ್ಲಿ ಎಲ್ಲರೂ ಸಹಾಯ ಮಾಡಿ ಎಂದು ಹೇಳುವವರೇ ಹೊರತು ಬೇರೆ ಇಲ್ಲ. 270 ಲಕ್ಷ ರೂಪಾಯಿ ಅವರು ಏನು ಕೇಳಿದ್ದಾರೆ, ಡೆವಲಪ್‌ಮೆಂಟ್ ಗ್ರಾಂಟ್ಸ್‌ನಲ್ಲಿ ಈ ಉದ್ದೇಶಕ್ಕಾಗಿ ಕೊಟ್ಟರೆ, ಇನ್ನೂ ಹೆಚ್ಚಿಗೆ ಅಂದರೆ ಒಂದು ಕೋಟಿ ರೂಪಾಯಿ ಕೊಟ್ಟರೆ ನಮ್ಮ ರಾಜ್ಯಕ್ಕೆ ಮುಂದಿನ ಎರಡು ವರ್ಷದಲ್ಲಿ ಆಹಾರದ ಅಭಾವ ಇಲ್ಲದಂತೆ ಮಾಡುವ ಶಕ್ತಿ ವಿಶ್ವವಿದ್ಯಾನಿಲಯ ಹೊಂದಿದೆ, ಅದಕ್ಕೆ ಸಹಾಯ ಬೇಕು ಎಂದು ಈ ಮೂಲಕ ಕೋರುತ್ತೇನೆ.

ಗೊಬ್ಬರದ ವಿಚಾರ ಸ್ವಲ್ಪ ಹೇಳಬೇಕಾಗಿದೆ, ಕೃತಕ ಗೊಬ್ಬರದ ವಿತರಣೆ ಬಹಳ ಕಠಿಣವಾಗಿದ್ದು, ನಾನು ಸೇರಿ ಅನೇಕರು ಮಾನ್ಯ ಚಿಕ್ಕೇಗೌಡರ ಮೇಲೆ ಭಾರೀ ಅಪವಾದ ಮಾಡಿದ್ದೆವು. ಬುದ್ಧಿವಂತಿಕೆಯಿಂದ ಕಾರ್ಡ್ ಸಿಸ್ಟಮ್ ಮಾಡಿದೆವು, ಕಾರ್ಡ್ ಸಿಸ್ಟಮ್‌ನಿಂದ ಕಳ್ಳ ವ್ಯಾಪಾರ ನಿಂತಿದೆ ಎಂದು ಹೇಳುವುದಿಲ್ಲ. ಈಗ ಎಷ್ಟು ಬೇಕಾದರೂ ಗೊಬ್ಬರ ಕೊಡುವಂತ ಪರಿಸ್ಥಿತಿ ಇದೆ. ಬರೀ

ಕೃತಕ ಗೊಬ್ಬರ ಕೊಟ್ಟರೆ ಸಾಲದು, ಮಂಗಳೂರು ಕಾರ್ಖಾನೆಯಿಂದ ಗೊಬ್ಬರ ಬರುವಾಗ, ಶಿವಮೊಗ್ಗದ ನಮ್ಮ ಊರಿಗೆ ಬರುತ್ತದೆ, ಬಂಗಾರಪ್ಪ, ತಿಮ್ಮಪ್ಪ ಹಾಗೂ ಲಿಂಗಪ್ಪನವರು ಗೊಬ್ಬರ ನಮಗೆ ಬರಲಿಲ್ಲ, ಎಲ್ಲಿ ಇಳಿಯಿತು ಎಂದು ಹೇಳುತ್ತಾರೆ, ಅವರು ಉಪಯೋಗಿಸಿ ಮಿಕ್ಕಿದ್ದು ನಮಗೆ ಬಂದರೆ ಸಾಕು. ಅಷ್ಟೇ ನಮ್ಮ ಅಭಿಪ್ರಾಯ. ಆದರೆ, ಪರಿಸ್ಥಿತಿಗೆ ಅನುಗುಣವಾಗಿ ಉತ್ತಮವಾದ ಬೆಳೆ ಬರಬೇಕಾದರೆ, ಭೂಮಿಗೆ ಕೃತಕ ಗೊಬ್ಬರ ಅಲ್ಲದೇ ಕಾಂಪೋಸ್ಟ್ ಗೊಬ್ಬರವನ್ನು ಹಾಕಬೇಕು. ಈ ಬಗ್ಗೆ ತಜ್ಞರು ಒತ್ತಿ ಹೇಳುತ್ತಲೇ ಇದ್ದಾರೆ. ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ನಗರ ಕಾರ್ಪೊರೇಷನ್ನಿನವರು 60 ಲಕ್ಷ ರೂಪಾಯಿ ಸಾಲ ಪಡೆದು, ಒಂದು ಕಾಂಪೋಸ್ಟ್ ಯಂತ್ರ ಪಡೆದು ಇನ್‌ಸ್ಟಾಲ್ ಮಾಡಿ ಗೊಬ್ಬರ ತಯಾರು ಮಾಡಿಕೊಡುತ್ತೇವೆಂದು ಸ್ವಂತ ಮಿಷನ್ ಹಾಕಿದ್ದಾರೆ, ಅವರು ಇನ್ನೂ ಒಂದು ಯಂತ್ರವನ್ನು ತರುತ್ತಾರೆಂದು ಹೇಳಿದರು. 60 ಲಕ್ಷ ರೂಪಾಯಿ ಸಾಲ ತೆಗೆದುಕೊಂಡರೂ ಕೂಡ, ಇದುವರೆಗೆ ಗೊಬ್ಬರವನ್ನು ತಯಾರು ಮಾಡಿಕೊಡಲಿಲ್ಲ ಅದು ಕೊಡದೇ ಇದ್ದರೆ ಬಹಳ ಹೆಚ್ಚಿನ ತಪ್ಪಾಗುತ್ತದೆ. ನಮ್ಮ ನಗರದಲ್ಲಿ ಒಂದು ಲಕ್ಷ ರಾಸುಗಳು ಇದ್ದು, ಒಂದು ರಾಸು ಸರಾಸರಿ 5 ಕೆ. ಜಿ. ಸಗಣಿ ಹಾಕಿದರೆ, ಸುಮಾರು 50 ಲಕ್ಷ ಟನ್ ಕಾಂಪೋಸ್ಟ್ ತಯಾರು ಮಾಡಿ ರೈತರಿಗೆ ಕೊಡಬಹುದು. ಇಂಥ ಸುಲಭವಾಗಿ ರಾಮೆಟೀರಿಯಲ್ಸ್ ಸಿಗುವಾಗ, ಸಿಕ್ಕಸಿಕ್ಕ ಸ್ಥಳದಲ್ಲಿಯೇ ಕಾಂಪೋಸ್ಟ್ ತಯಾರು ಮಾಡತಕ್ಕ ವ್ಯವಸ್ಥೆ ಬಹಳ ಚನ್ನಾಗಿ ಆಗಬೇಕು. ಅದು ಬಹಳ ಮುಖ್ಯವಾದುದು, ಮಂತ್ರಿಗಳು ಆ ಕಡೆ ಗಮನಕೊಟ್ಟು, ಈ ವರ್ಷವಾದರೂ ಅದು ಕಾರ್ಯರೂಪಕ್ಕೆ ಬರುವಂತೆ ಮಾಡಬೇಕೆಂದು ನನ್ನ ಮನವಿ.

ಡೈರಿ ವಿಷಯವಾಗಿ, ಉತ್ಪಾದಕರಿಗೆ ತೊಂದರೆ ಆಗದ......

ಶ್ರೀ ಟಿ. ಆರ್. ಶಾಮಣ್ಣ.—ಕಡಿಮೆ ಬೆಲೆಗೆ ಒಳ್ಳೆ ಹಾಲು ಕೊಡುವುದಕ್ಕೆ ಏನಾದರೂ ಸಹೆಲ ಇದೆಯೇ ?

ಶ್ರೀ ಜಿ. ರಾಮೇಗೌಡ.—ಕನ್ಸೂಮರ್ಸ್ ಎರಡು ರೂಪಾಯಿ ಕೊಡಬಹುದು, ಉತ್ಪತ್ತಿ ಮಾಡುವವರಿಗೆ ನಷ್ಟವಾಗದಂತೆ, ತೊಂದರೆಯಾಗದಂತೆ ಮತ್ತು ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂಬುದನ್ನು ಒಪ್ಪುತ್ತೇನೆ. ಉತ್ಪತ್ತಿ ಮಾಡುವ ರೈತನಿಗೆ ಒಂದು ರೂಪಾಯಿಗೆ ಬದಲಾಗಿ ಒಂದುರೂಪಾಯಿ ಮೂವತ್ತು ಪೈಸೆ ಕೊಡಬಹುದು. ಕನ್ಸೂಮರ್ಸ್‌ಗೆ 70 ಪೈಸೆ, ಓವರ್‌ಆಲ್ ಚಾರ್ಜಸ್ ಅವರದ್ದೇ, ಟ್ರಾನ್ಸ್‌ಪೋರ್ಟೇಷನ್ ಮತ್ತು ಡಿಸ್ಟ್ರಿಬ್ಯೂಷನ್ ಎರಡು ಕಾರ್ಯಕ್ರಮಗಳಿಗೆ ಒಂದು ಲೀಟರಿಗೆ 60 ರಿಂದ 70 ಪೈಸೆ ತೆಗೆದುಕೊಳ್ಳುತ್ತಾರೆ. ಅದು ಖಂಡಿತವಾಗಿಯೂ ಬಹಳ ಹೆಚ್ಚಿನ ಬೆಲೆ. ನನಗೆ ತಿಳಿದಮಟ್ಟಿಗೆ ಎರಡು ಲಕ್ಷ ಲೀಟರ್ ಹಾಲಿನ ಏರ್ಪಾಡು ಮಾರಾಟ ಮಾಡುವ ವ್ಯವಸ್ಥೆ ಇರುವ ಕಡೆ ಕೇವಲ, 50 ಸಾವಿರ ಲೀಟರ್ಸ್ ಹಾಲು ಮಾರುವುದರಿಂದ ಹೆಚ್ಚಿನ ಬೆಲೆ ಆಗುತ್ತದೆ ಎಂದು ನನ್ನ ಅಭಿಪ್ರಾಯ. ಆದುದರಿಂದ ಹಾಲು ಉತ್ಪನ್ನ ಹೆಚ್ಚು ಆಗುವುದಕ್ಕೆ ಮೊದಲೆ ಡೈರಿ ಸ್ಟಾರ್ಟ್ ಮಾಡಿ ಹಾಲಿಗೆ ಪರದಾಟ ಬಂದಿರುವುದರಿಂದ ಇರತಕ್ಕ ಸಿಬ್ಬಂದಿಗೆ ಸಂಬಳ ಸಾರಿಗೆ ಕೊಡಬೇಕಾಗಿರುವುದರಿಂದ ಹೆಚ್ಚು ಖರ್ಚಾಗುತ್ತದೆ ಎನ್ನುವ ಅಭಿಪ್ರಾಯ ಇದೆ, ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ ; ಶಾಮಣ್ಣ ಮತ್ತು ನನ್ನನ್ನು ಇಬ್ಬರನ್ನೂ ಸಮಾಧಾನಪಡಿಸಬೇಕಾದರೆ, ಏನೂ ಓವರ್‌ಹಾಲ್ ಚಾರ್ಜಸ್ ಇದೆ, ಅದನ್ನು ಸರ್ಕಾರ ವಹಿಸಿಕೊಳ್ಳಬೇಕು. ಸಬ್ಸಿಡಿ ರೂಪದಲ್ಲಿ ರೈತರಿಗೆ ಎರಡು ರೂಪಾಯಿ ಕೊಡಬೇಕು. ಕೂತಿರುವವರಿಗೆ 5 ಪೈಸೆ ಕಡಿಮೆ ಆದರೂ ಚಿಂತೆ ಇಲ್ಲ. ನಮಗೂ 5 ಪೈಸೆ ಕಡಿಮೆ ಆದರೂ ಚಿಂತೆ ಇಲ್ಲ, ಓವರ್‌ಹಾಲ್ ಚಾರ್ಜಸ್ ಸರ್ಕಾರ ವಹಿಸಿಕೊಂಡು, ಮಾರುವವರು ಒಂದೇ ಬೆಲೆಗೆ ಮಾರಿದರೆ ಇದು ಸಾಧ್ಯ

ಶ್ರೀ ಎನ್. ಚಿಕ್ಕೇಗೌಡ.—ಕೊಡುತ್ತಾ ಇರುವುದಕ್ಕಿಂತ ಐದು ಪೈಸೆ ಕಡಿಮೆ ಮಾಡಿ ಅಂತ ಹೇಳಿದರೆ ಮಾಡೋಣವೇ ?

ಶ್ರೀ ಜಿ. ರಾಮೇಗೌಡ.—ಎರಡು ರೂಪಾಯಿನಲ್ಲಿ 1-85 ನಮಗೆ ಕೊಡಿ, 1—85 ಅವರಿಗೆ ಮಾಡಿ, ಓವರ್‌ಹಾಲ್ ಚಾರ್ಜಸ್ ಸರ್ಕಾರ ವಹಿಸಿಕೊಳ್ಳಲಿ.

ಶ್ರೀ ಕೆ. ಎಚ್. ಹನುಮೇಗೌಡ.—ನಾಲ್ಕು ವರ್ಷದ ಹಿಂದೆ ಯಾವ ರೇಟ್ ಇತ್ತೋ ಕ್ಯಾಟಲ್ ಫೀಡ್ ಅದನ್ನು ಆ ರೇಟಿನಲ್ಲಿ ಕೊಡಿ.

ಶ್ರೀ ಜಿ. ರಾಮೇಗೌಡ.—ಈಗ ಹಾಲನ್ನು ಉತ್ಪತ್ತಿ ಮಾಡುವವರ ಮೇಲೂ ನಿಮಗೆ ಕರುಣೆ ಇದೆ, ಮತ್ತು ಅದನ್ನು ಕುಡಿಯುವವರ ಮೇಲೂ ಕರುಣೆ ಇದೆ, ಈ ಎರಡು ಕರುಣೆಯೂ ಸೇರಿದರೆ

ಯಾವ ರೀತಿ ಲಾಭವಿಲ್ಲದೆ ಕೆಲಸ ಮಾಡುವುದಕ್ಕಾಗುತ್ತದೆ ? ಕುಡಿಯುವವರ ಬಗ್ಗೆಯೂ ಅಯ್ಯೋ ಎನ್ನುತ್ತೀರಿ, ಉತ್ಪತ್ತಿ ಮಾಡುವವರ ಬಗ್ಗೆಯೂ ಅಯ್ಯೋ ಎನ್ನುತ್ತೀರಿ, ಈ ಎರಡು ಸಮಸ್ಯೆಗಳು ಏಕಕಾಲದಲ್ಲಿ ಬಗೆಹರಿಯಬೇಕೆಂದರೆ ಸರ್ಕಾರದವರು ಸಬ್ಸಿಡಿ ಕೊಟ್ಟರೆ ಸಾಧ್ಯವಾಗುತ್ತದೆ.

ಸರ್ಕಾರದವರು ಫಾಡರ್ ಡೆವಲಪ್‌ಮೆಂಟ್ ಸ್ಕೀಮ್ ಬಗ್ಗೆ ಒಳ್ಳೆಯ ಯೋಜನೆ ಹಾಕಿಕೊಂಡಿದ್ದಾರೆ ಆದರೆ ಸರಿಯಾಗಿ ಕೆಲಸ ಮಾಡದೆ ಮತ್ತು ದಕ್ಷತೆ ಇಲ್ಲದಿರುವ ಕಾರಣ ಅದು ಕಟ್ಟಿದೆ. ಅದು ಚೆನ್ನಾಗಿ ನಡೆಯಬೇಕು. ಸರ್ಕಾರದ ಸ್ಕೀಮುಗಳು ಬಹಳ ಚೆನ್ನಾಗಿವೆ; ಆದರೆ ಅವು ಕಾರ್ಯರೂಪಕ್ಕೆ ಬರುವಾಗ ಕೆಡದಂತೆ ಚೆನ್ನಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಮತ್ತು ಕೆಲವು ಸ್ಕೀಮುಗಳು ಕೇವಲ ಕಾಗದದ ಮೇಲಿವೆಯೇ ಹೊರತು ಕಾರ್ಯರೂಪಕ್ಕೆ ಬಂದಿಲ್ಲ. ಹಸುಗಳು ಚೆನ್ನಾಗಿ ಹಾಲು ಕೊಡಬೇಕಾದರೆ ಚೆನ್ನಾಗಿ ಪೋಷಣೆ ಮಾಡಬೇಕಾಗುತ್ತದೆ. ರೋಗರುಜಿನಗಳು ಇಲ್ಲದಂತೆ ನೋಡಿಕೊಳ್ಳಬೇಕಾಗುತ್ತದೆ. ಅರ್ಕಾವತಿ ನದಿಯಿಂದ ನೀರು ಹರಿದು ಬರುವಂತೆ ಹಸುವಿನಿಂದ ಹಾಲು ಕರೆಯುವುದಿಲ್ಲ; ಅದು ಅಸಾಧ್ಯ ಎಂದು ತಿಳಿದುಕೊಳ್ಳಬೇಕು. ಬೇಸಿಗೆಯಲ್ಲಿ ಹಾಲಿನ ಉತ್ಪತ್ತಿ ಕಡಿಮೆಯಾಗುವುದಕ್ಕೆ ಕಾರಣ ಹಸಿರು ಮೇವು ಸಿಗದಿರುವುದು; ಮಳೆಗಾಲದಲ್ಲಿ ಹಸಿರು ಮೇವು ಸಿಗುವುದರಿಂದ ಮತ್ತು ಹವಾಮಾನ ಚೆನ್ನಾಗಿರುವುದರಿಂದ ಹೆಚ್ಚಿನ ಹಾಲು ಉತ್ಪತ್ತಿಯಾಗುತ್ತದೆಂದು ತಜ್ಞರು ಹೇಳುತ್ತಾರೆ. ಬೇಸಿಗೆಯಲ್ಲಿ ಹಸಿರು ಹುಲ್ಲು ಸಿಗದಿರುವ ಕಾರಣ ಹಾಲಿನ ಉತ್ಪತ್ತಿ ಕಡಿಮೆಯಾಗುತ್ತದೆ. ಮಾನ್ಯ ಮಂತ್ರಿಗಳು ಫುಟ್ ಅಂಡ್ ಮೌತ್ ವ್ಯಾಕ್ಸೀನ್ ಎರಡು ರೂಪಾಯಿ ಬೆಲೆಗೆ ಸಿಗುವಂತೆ ಏರ್ಪಾಡು ಮಾಡಿರುವುದಕ್ಕಾಗಿ ನಾವು ಅವರಿಗೆ ಚಿರಋಣಿಗಳಾಗಿದ್ದೇವೆ. ಆದರೆ ಅವು ಕಾಲಕ್ಕೆ ಸರಿಯಾಗಿ ಅಂದರೆ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಸಿಗುವಂತೆ ವ್ಯವಸ್ಥೆ ಮಾಡಬೇಕು. ಜನವರಿ, ಫೆಬ್ರುವರಿ, ಮಾರ್ಚಿ ತಿಂಗಳುಗಳಲ್ಲಿ ಕೊಟ್ಟರೆ ಆದರಿಂದ ನಮಗೆ ಏನೂ ಪ್ರಯೋಜನವಾಗುವುದಿಲ್ಲ, ಆದಕಾರಣ ಸಕಾಲದಲ್ಲಿ ಅವು ದೊರಕುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಬೆಂಗಳೂರು ನಗರದಲ್ಲಿಯೇ ಈ ಫುಟ್ ಅಂಡ್ ಮೌತ್ ವ್ಯಾಕ್ಸೀನ್ ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಲಾಗುತ್ತದೆಂದು ಮಾನ್ಯ ಮಂತ್ರಿಗಳು ಹೇಳಿದ್ದರು; ಆದರೆ ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ; ಆದಷ್ಟು ಬೇಗ ಆ ಔಷಧವನ್ನು ತಯಾರು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಉತ್ತಮವಾದ ತಳಿ ಹಸುಗಳನ್ನು ಅಭಿವೃದ್ಧಿ ಮಾಡಬೇಕೆಂದು ಬೆಂಗಳೂರು ಮತ್ತು ಇತರ ಜಿಲ್ಲೆಗಳಲ್ಲಿ ಕೃತಕ ವೀರ್ಯ ಗರ್ಭಧಾರಣೆ ಕೇಂದ್ರಗಳನ್ನು ತೆರೆದು ಹಳ್ಳಿಕಾರ್ ಮತ್ತು ಅಮೃತ ಮಹಲ್ ಇವುಗಳ ಏಳಿಗೆಗೆ ಅಡ್ಡ ಬಂದಿದ್ದಾರೆ. ಪ್ರತಿಯೊಂದು ಮನೆಯಲ್ಲಿಯೂ ಎರಡು ಎತ್ತುಗಳು ಇರುವುದು ಅಗತ್ಯವೆಂದು ಮಾನ್ಯ ಬಂಗಾರಪ್ಪನವರು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ 2 ರಿಂದ 5 ಎಕರೆ ಜಮೀನು ಇರುವವರು ಟ್ರ್ಯಾಕ್ಟರ್ ಕೊಳ್ಳುವುದಕ್ಕಾಗುವುದಿಲ್ಲ; ಏನಿದ್ದರೂ 40–50 ಎಕರೆ ಜಮೀನು ಇರುವವರು ಕೊಂಡುಕೊಳ್ಳಬಹುದು; ನಾವು ಸಮಾಜವಾದಕ್ಕೆ ಪ್ರೋತ್ಸಾಹ ಕೊಡುತ್ತಿರುವಾಗ ಮತ್ತು ಹೆಚ್ಚು ಜಮೀನು ಯಾರೂ ಇಟ್ಟುಕೊಳ್ಳಬಾರದೆಂದು ಹೇಳುತ್ತಿರುವಾಗ ಎಲ್ಲ ರೈತರೂ ಸಹ 2 ಎತ್ತುಗಳನ್ನು ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಅಮೃತಮಹಲ್ ಮತ್ತು ಹಳ್ಳಿಕಾರ್ ಈ ಎರಡು ತಳಿಗಳನ್ನು ಗಮನದಲ್ಲಿಟ್ಟುಕೊಂಡು, ಅವುಗಳ ಬೆಳವಣಿಗೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ಮತ್ತು ಇದರ ಬಗ್ಗೆ ಸರ್ಕಾರದವರು ಏನು ಯೋಜನೆ ಹಾಕಿಕೊಂಡಿದ್ದಾರೆ, ಅದು ಚೆನ್ನಾಗಿ ನಡೆಯುವಂತೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊನ್ನೆ ಒಂದು ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಕಳೆದ ವರ್ಷಕ್ಕಿಂತ ಈ ವರ್ಷ ಹಳ್ಳಿಕಾರ್ ತಳಿಗಳ ಪೈಕಿ ಹತ್ತು ಕಡಿಮೆಯಾಗಿವೆ ಎಂದು ಹೇಳಿದರು. ಇದು ಸರಿಯಲ್ಲ; ಪ್ರತಿವರ್ಷವೂ ಅವುಗಳ ಸಂಖ್ಯೆ ಸಹಸ್ರಾರು ಹೆಚ್ಚುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೇಂದ್ರದಲ್ಲಿ ಎನ್. ಪಿ. ಕೆ. ಮಿಕ್ಸ್‌ಚರನ್ನು ಮಾರಾಟ ಮಾಡಲಾಗುತ್ತದೆ. ಆದರೆ ಇದನ್ನು ರೈತರಿಗೆ ಕೊಡುವಾಗ ತೂಕ ಮಾಡಿಕೊಡಲು ಒಂದು ತೂಕದ ಯಂತ್ರವಿಲ್ಲ; ಇದರಿಂದ ರೈತರಿಗೆ ಮೋಸವಾಗುತ್ತಿದೆ ಮತ್ತು ಇದು ಒಂದು ರೀತಿಯ ರೈತರ ಶೋಷಣೆ ಎಂದು ಹೇಳಬಹುದು. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ಮಾಡುವ ಈ ಕೇಂದ್ರದಲ್ಲಿ ಒಂದು ಹಾವೇರಿ ಸ್ಕೇಲ್ ಇಲ್ಲ ಎಂದರೆ, ಅದನ್ನು ಉದ್ದೇಶಪೂರ್ವಕವಾಗಿ ಇಟ್ಟಿಲ್ಲವೋ ಅಥವಾ ರೈತರಿಗೆ ಅನ್ಯಾಯ ಮಾಡಬೇಕೆಂದು ಇಟ್ಟಿಲ್ಲವೋ ಗೊತ್ತಿಲ್ಲ; ಪ್ರತಿಯೊಂದು ಕೇಂದ್ರದಲ್ಲಿಯೂ ಒಂದು ತೂಕ ಮಾಡುವ ಯಂತ್ರವನ್ನಿಟ್ಟು ರೈತರಿಗೆ ಗೊಬ್ಬರ ಕೊಡುವಾಗ ಅದು 50 ಕೆ.ಜಿ. ಇದೆ, ನೂರು ಕೆ.ಜಿ. ಇದೆ ಎಂದು ತೂಕ ಮಾಡಿಕೊಟ್ಟರೆ ರೈತರಿಗೆ ಮಹದ್ ಉಪಕಾರ ಮಾಡಿದಂತೆ ಆಗುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಹೇಳುತ್ತೇನೆ.

ಡೈರಿ ಬಗ್ಗೆ ಕೊನೆಯದಾಗಿ ಒಂದು ಮಾತನ್ನು ಹೇಳುವುದಾದರೆ, ಎಲ್ಲಿಯವರೆಗೆ ಹಾಲನ್ನು ಉತ್ಪಾದನೆ ಮಾಡುವವರಿಗೆ ಸರಿಯಾದ ಬೆಲೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಡೈರಿ ಯೋಜನೆ ಸಫಲವಾಗುವುದಿಲ್ಲವೆಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ಅಂಶವನ್ನು ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ ಮತ್ತು ಯೂನಿಯನ್ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಒಂದು ಪ್ರಭಾವವನ್ನು ಸರ್ಕಾರದ ಮೇಲೆ ಬೀರಿ, ಕೋಆಪರೇಟಿವ್ ಸೊಸೈಟಿಗಳ ಮೂಲಕ ಯಾರು ಹಾಲನ್ನು ಶೇಖರಣೆ ಮಾಡಿ ವಿತರಣೆ ಮಾಡುತ್ತಾರೋ ಅವರುಗಳಿಗೆ ಮತ್ತು ಯಾರು ಹಾಲನ್ನು ಉತ್ಪತ್ತಿ ಮಾಡುತ್ತಾರೋ ಅವರಿಗೆ ಶೋಷಣೆಯಾಗದ ರೀತಿಯಲ್ಲಿ ಬೆಲೆ ಕೊಡಬೇಕು, ಇಲ್ಲದಿದ್ದರೆ ಈ ಯೋಜನೆ ಸಫಲವಾಗುವುದಿಲ್ಲವೆಂದು ಹೇಳಿ ನನಗೆ ಹೆಚ್ಚು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri A. M. BELLIAPPA** (Mercara).—Mr. Speaker, Sir I thank you very much for having given me this opportunity to speak on this demand. While supporting the budget proposals on Agriculture and Animal Husbandry, I wish to make the following submissions.

In the budget I find that the allocation made for continuing the agricultural demonstrations is very meagre. We all know that it is a very important activity to which the Government should give special attention Unfortunately, we find that the Government has not bestowed any attention to it so far. I find that in many a district it is completely neglected. So, I request the Government to give special attention to it.

Coming to plant protection, I find that the allocation made to it is again very meagre. We find that in recent days the supply of chemicals at subsidised rates has been stopped by the Government. We know that even sprayers were supplied previously at 50 per cent concession. Now, on account of the stoppage of subsidy for chemicals I find that it is difficult for the agriculturist to raise good crops. I may submit that in the month of October and November last year in my district Coorg and in my constituency Mercara when I went round I found that many an agriculturist was complaining about plant diseases and in a district like Coorg plant disease is a common occurrence. But when I approached the concerned officers they of course did their best to stop this disease by timely spraying. The poor peasants were not able to purchase the chemicals and only the rich peasants were able to get it. So, I submit that this being an important thing, you must make better allocation of funds for plant protection scheme. Here in the report you say :

> "During the year there was no major incidence of pests and diseases in the State. Never-the less the Department took vigilant measures with regard to plant protection."

5-00 P. M.

I would like to submit in this connection that I come from Mercara constituency and my neighbouring constituency is Somwarpet. In these constituencies the plant diseases are there. So when I read

the report what I am feeling is either the statistics or information given are not correct or there must be some other reason. With utmost respect I may submit that the information given in the report is not correct because I have myself seen in Mercara 40 per cent of the villages being affected by pest. I approached the officers to get relief. Therefore, I request the Government to give speeial attention and make more allocation of funds.

With regard to soil testing laboratories I wish to congratulate the Government for starting 18 laboratories in the entire State. In my district a Soil Testing Laboratory has been started in Kudige. I am submitting that this soil testing laboratory started at Kudige is not in centrally situated place. Kudige is in Somawarapet which is about 75 miles from Virajapet. It is not possible for all the ryots from all areas to derive benefit of this soil testing laboratory. Therefore, I request the Government to start a soil testing laboratory at Mercara which is the centrally situated area. If that is done it will benefit the people in Coorg.

Coming to supply of seeds, as all of you know Coorg is a predominantly paddy growing area. As such we require a better rice research station in the district. We do not have high yielding varieties in our district. For lack of funds the people are contented with old varieties of paddy and therefore my submission to the Government is they must upgrade the paddy breeding station at Ponnampet.

In the last few years in the district of Coorg we have been experiencing great difficulty on account of the vast growth of a sort of weed called Gandhigulabi. It is found wherever this weed grows no other crop can be grown. Even animals cannot live in the areas where this weed is grown. I remember when I was young during the British period lantana was abundantly growing in the district. It was difficult to eradicate the growth of lantana. Therefore, the Government passed a legislation called the Lantana Eradication Act to see that this growth of lantana was eradicated. Therefore my submission to you is, the department should take some action with regard to this growth of weed also. If that is not done, a day may come when ever commercial crops may be affected. I therefore request necessary action may be taken and suitable allocation of funds be made for weed eradication.

With this submission, I will now speak on Animal Hunsbandry services. So far as my district is concerned, except for Kudige farm, there is no other farm. There are places like Galibeedu and Bailnadu where we can start a good dairy. There are large areas of grazing land. I request the Government to consider the suggestion of starting dairies in Galibeedu and Bailnadu. Thank you.

† ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿಚಾರಗಳನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ನಮ್ಮ ದೇಶವು ವ್ಯವಸಾಯಗಾರರಿಂದ ತುಂಬಿರತಕ್ಕ ದೇಶ. ನೂರಕ್ಕೆ ಸುಮಾರು 80 ಭಾಗದ ಜನ ಗ್ರಾಮಾಂತರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ. ವ್ಯವಸಾಯ ಅವರ ಮುಖ್ಯವಾದ ಕೆಲಸ. ಸ್ವಾತಂತ್ರ್ಯ ಬಂದು ಇಲ್ಲಿಗೆ 27 ವರ್ಷಗಳಾದರೂ, ಈ ಸದನದಲ್ಲಿ ಸಾಕಷ್ಟು ಮಂದಿ ವ್ಯವಸಾಯಗಾರರಿದ್ದರೂ, ಸರಕಾರವನ್ನು ನಡೆಸತಕ್ಕವರೂ ಸಹ ಹೆಚ್ಚು ಜನ ವ್ಯವಸಾಯಗಾರರಿದ್ದರೂ, ಈ ನಿರ್ಭಾಗ್ಯ ಗ್ರಾಮಾಂತರ ಪ್ರದೇಶದ ಜನತೆಯ ಆರ್ಥಿಕ ಪರಿಸ್ಥಿತಿ ನಿರೀಕ್ಷಿಸಿದ ಮಟ್ಟದಲ್ಲಿ—ಸ್ವಾತಂತ್ರ್ಯ ಪೂರ್ವದಲ್ಲಿ ರಾಜಕಾರಣಿಗಳ ಏನು ಹೇಳುತ್ತಿದ್ದರು, ಸ್ವಾತಂತ್ರ್ಯ ಬಂದ ಮೇಲೆ ಏನೇನು ಹೇಳಿದ್ದಾರೆ ಎಂಬುದನ್ನೆಲ್ಲಾ ನೋಡಿದರೆ—ಅವರ ಅಭಿವೃದ್ಧಿ ಆಗಿಲ್ಲ ಎಂಬುದು ವೇದ್ಯವಾಗುತ್ತದೆ. ಅವರ ಅಭಿವೃದ್ಧಿ ಬಗ್ಗೆ ನಾವು ಏನು ನಿರೀಕ್ಷಣೆ ಮಾಡಿದ್ದೆವೋ, ಆ ನಿರೀಕ್ಷಣೆಯನ್ನು ನಾವು ಇನ್ನೂ ಮುಟ್ಟಿಲ್ಲ ಬಹುಶಃ ದಿನೇದಿನೇ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯದಲ್ಲಿ ನಿರತರಾಗಿರತಕ್ಕ ಜನ ಬಹಳವಾಗಿ ಆರ್ಥಿಕ ದಿಶೆಯಲ್ಲಿ ಹೀನಸ್ಥಿತಿಗೆ ಹೋಗುತ್ತಿದ್ದಾರೆ; ಅವರ ಜೀವನ ತೀರ ಅಧಃಪತನಕ್ಕೆ ಹೋಗುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಗ್ರಾಮಾಂತರ ಪ್ರದೇಶದ ಜನತೆಯನ್ನು ಒಂದು ಕಡೆ ಸರಕಾರ, ಇನ್ನೊಂದು ಕಡೆ ವ್ಯಾಪಾರಗಾರರು—ಈ ಎರಡೂ ವರ್ಗಗಳೂ ನಿರ್ಭೀತಿಯಿಂದ ಮತ್ತು ನಿರ್ಭಯವಾಗಿ ಶೋಷಣೆ ಮಾಡುತ್ತಾ ಬಂದಿದ್ದಾರೆ ಎಂದು ಹೇಳಿದರೆ ಅದು ತಪ್ಪಾಗಲಾರದು. ದೇಶವು ಹೆಚ್ಚು ಅಭಿವೃದ್ಧಿಗೆ ಬರಬೇಕಾದರೆ, ಸ್ವಾವಲಂಬನೆಯಾಗಬೇಕಾದರೆ ಮತ್ತು ದೇಶದಲ್ಲಿ ಸ್ಥಾಪನೆಯಾಗಿರತಕ್ಕ ಕೈಗಾರಿಕೆಗಳಿಗೆ ಕಚ್ಚಾಪದಾರ್ಥಗಳು ದೊರಕಬೇಕಾದರೆ ಗ್ರಾಮಾಂತರ ಪ್ರದೇಶದ ಜನರು ಅವಲಂಬಿಸಿರುವ ವ್ಯವಸಾಯದ ಕಸುಬು ಏನು ಇದೆ, ಅದು ಹೆಚ್ಚು ಫಲಪ್ರದವಾಗಬೇಕು. ಇವೆಲ್ಲಕ್ಕಿಂತ, ದೇಶ ಹೆಚ್ಚು ಸಂಪದ್ಭರಿತವಾಗಿದೆ ಎಂದು ಹೇಳಬೇಕಾದರೆ, 100ಕ್ಕೆ 80 ಭಾಗ ಏನು ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದಾರೆ, ಅವರ ಅಭಿವೃದ್ಧಿ ಆಗಬೇಕು. ಅವರ ಅಭಿವೃದ್ಧಿ ಆಗಬೇಕಾದರೆ ಈಗ ವ್ಯವಸಾಯಗಾರರಿಗೆ ಕಸುಬಿಗೆ ಸಾಕಷ್ಟು ರಕ್ಷಣೆ ಮತ್ತು ಒಂದು ಪ್ರೋತ್ಸಾಹ ಇರಬೇಕಾದ್ದು ಅತಿಮುಖ್ಯವಾದುದು. ಈ ಖಾತೆಯನ್ನು ಮೊದಲಿನಿಂದಲೂ ಸ್ವಲ್ಪ ಹೆಚ್ಚುಕಡಿಮೆ ವ್ಯವಸಾಯಗಾರರ ಮನೆಯಿಂದ ಬಂದಿರುವವರೇ ನೋಡಿಕೊಂಡು ಬಂದಿದ್ದಾರೆ, ಈಗಲೂ ಸಹ ಮಾನ್ಯ ಮಂತ್ರಿಗಳು ವ್ಯವಸಾಯಗಾರರ ಮನೆಯಿಂದ ಬಂದಿರುವವರೇ ಆಗಿದ್ದಾರೆ. ಆದರೂ ಈಗ ವ್ಯವಸಾಯ ಮಾಡತಕ್ಕ ಜನಗಳಿಗೆ ಸಾಕಷ್ಟು ಉತ್ತೇಜನ ದೊರೆತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಮಾನ್ಯ ಚಿಕ್ಕೇಗೌಡರು ಮಂತ್ರಿಗಳಾದಮೇಲೆ ಹೆಚ್ಚು ಬೆಲೆ ಈ ರೈತರಿಗೆ ದೊರೆಯುತ್ತದೆ ಎಂದು ತಿಳಿದಿದ್ದೆವು. ಏಕೆಂದರೆ ಅವರು ಸಹ ವ್ಯವಸಾಯ ಮಾಡಿರುವವರು ಈಗ ಅವರು ನಿರೀಕ್ಷಿಸಿದ ಮಟ್ಟದಲ್ಲಿ ಉತ್ತೇಜನ ದೊರೆತಿಲ್ಲ ಎನ್ನುವ ಅಭಿಪ್ರಾಯವನ್ನು ಸೂಚಿಸಬೇಕಾಗಿದೆ. ಇದರ ಬಗ್ಗೆ ಪರಿಶೀಲಿಸಬೇಕು ಎಂದು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಅನಂತರ ಈ ವ್ಯವಸಾಯ ಒಂದು ಆಕರ್ಷಣೀಯವಾದ ಸುಧಾರಣೆಯಾಗಬೇಕು, ಆಗ ಈ ದೇಶದಲ್ಲಿರತಕ್ಕ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಆಗುತ್ತದೆ. ಅಲ್ಲದೆ ಈ ದೇಶದಲ್ಲಿ ಇರತಕ್ಕ ಕಸುಬುಗಳಿಗೂ ಕೂಡ ಇಷ್ಟೇ ಪರ್‌ಸೆಂಟೇಜ್ ಲಾಭ ಬರಬೇಕು ಎಂದು ಮಿತಿ ಇಟ್ಟುಕೊಂಡು ರೇಟ್ ಫಿಕ್ಸ್ ಮಾಡಬೇಕು. ಈಗ ಫ್ಯಾಕ್ಟರಿಯಲ್ಲಿ ಉತ್ಪಾದನೆ ಮಾಡಿದಾಗ, ಅಲ್ಲಿಯ ಪದಾರ್ಥಗಳು ಕಬ್ಬಿಣ ಆಗಲಿ, ಸಿಮೆಂಟ್ ಆಗಲಿ; ಎಲ್ಲದಕ್ಕೂ ಕೂಡ ಒಂದು ಲೆಕ್ಕ ಹಾಕಿ ಅಂದರೆ 10 ರಿಂದ 15 ಪರ್‌ಸೆಂಟ್ ವರೆಗೆ ಲಾಭ ಬರುವಂತೆ ಮಾಡುತ್ತಾರೆ, ಆದರೆ ವ್ಯವಸಾಯಗಾರರು ಉತ್ಪಾದನೆ ಮಾಡತಕ್ಕ ಪದಾರ್ಥಗಳಿಗೆ ರೇಟ್ ನಿಗಧಿ ಮಾಡುವುದು ಯಾರು ನಮ್ಮ ಮುಖ್ಯಮಂತ್ರಿ ಡಿ. ದೇವರಾಜ್ ಅರಸು ಅವರು ಮತ್ತು ಮಾನ್ಯ ಚಿಕ್ಕೇಗೌಡರು ಅಲ್ಲ. ದೆಹಲಿ ಸೆಕ್ರೆಟರಿಯೇಟ್‌ನಲ್ಲಿ ಕುಳಿತು ನಾಲ್ಕಾರು ಸಾವಿರ ರೂಪಾಯಿ ಸಂಬಳ ತೆಗೆದುಕೊಂಡು ವ್ಯವಹಾರ ಮಾಡುವ ಮನುಷ್ಯ ರೇಟ್ ಫಿಕ್ಸ್ ಮಾಡುವುದು. ಅವನಿಗೆ ಈ ಜಮೀನಿನ ಬಗ್ಗೆ ಯಾವ ವಿಧವಾದ ಅರಿವು ಇರುವುದಿಲ್ಲ, ಮತ್ತೆ ಈ ಜಮೀನಿನ ಬಗ್ಗೆ ಮಾಹಿತಿ ಇರುವುದಿಲ್ಲ, ಯಾರೋ ಒಬ್ಬರು ಕೊಟ್ಟ ಅಂಕಿ ಅಂಶದ ಮೇಲೆ ರೇಟನ್ನು ನಿಗಧಿ ಮಾಡುತ್ತಾರೆ. ಈ ರೀತಿಯಾಗಿ ಈ ಬಡ ರೈತರನ್ನು ಅಸಹಾಯಕ ಜನರನ್ನಾಗಿ ಮಾಡಿ ತೊಂದರೆಗೆ ಈಡುಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಹೇಳುತ್ತಾರೆ ನಾವು ಅವರಿಗೆ ಹೇಳಿದ್ದೇವೆ ಎಂದು. ಆದರೆ ಈವರೆಗೂ ರೈತರಿಗೆ ಯಾವ ರೇಟು ದೊರೆಯಬೇಕಾಗಿತ್ತು ಆ ರೇಟು ಯಾವ ರೈತರಿಗೂ ದೊರೆತಿಲ್ಲ. ಉದಾಹರಣೆ ಹೇಳುವುದಾದರೆ ರಾಗಿ, ಭತ್ತ, ಕಾಟನ್ ಇವುಗಳಿಗೆ ಎಲ್ಲಾ ಸರಿಯಾದ ರೇಟ್ ಸಿಕ್ಕುತ್ತಾ ಇಲ್ಲ. ಸ್ವಾಮಿ, ನೀವು ವ್ಯವಸಾಯಗಾರರ ಮನೆಯಿಂದ ಬಂದಿರುವವರು ಈ ಸರ್ಕಾರದ ರೇಟನ್ನು ಒಪ್ಪುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮಲ್ಲಿ ರಾಗಿ ರೇಟ್ ಹೇಗಿದೆ ?

ಶ್ರೀ ಕೆ. ಎಚ್. ಹನುಮೇಗೌಡ.—ರೈತರು ಬೆಳೆಯುತಕ್ಕ ಪದಾರ್ಥಗಳ ಮೇಲೆ ರೇಟ್ ಫಿಕ್ಸ್ ಮಾಡುವಾಗ, ರೈತರನ್ನು ಯಾವ ವಿಧವಾದ ಸಲಹೆ ಕೇಳುವುದಿಲ್ಲ. ಅವರು ಕುಳಿತಲ್ಲೇ ರೇಟ್ ಫಿಕ್ಸ್ ಮಾಡುತ್ತಾರೆ. ಅವರನ್ನು ಹೊಲ ಉತ್ತು-ಬಿತ್ತು ರೇಟ್ ಫಿಕ್ಸ್ ಮಾಡಿ ಎಂದು ಹೇಳುವ ಧೈರ್ಯ ನಿಮಗೆ ಇಲ್ಲ. ವ್ಯವಸಾಯಗಾರರ ವ್ಯವಸ್ಥೆಯನ್ನು ಅವರು ಇಲ್ಲಿ ಬಂದು ನೋಡಿದರೆ ಆಗ ಅರ್ಥವಾಗುತ್ತದೆ, ಅವರಿಗೆ ಇಲ್ಲಿ ಜಮೀನು ಕೊಟ್ಟು ಉತ್ತುವುದಕ್ಕೆ ಹೇಳಿ, ಆದರೆ ಶ್ರೀರಂಗಪಟ್ಟಣದ ಹತ್ತಿರ ಗದ್ದೆಯನ್ನು ಕೊಡಬೇಡಿ, ಬೇರೆ ಕಡೆ ಕಲ್ಲುಮಣ್ಣು ತುಂಬಿರುವ ಕಡೆ ಉತ್ತುವುದಕ್ಕೆ ಹೇಳಿದರೆ ಆಗ ಸರಿಬರುತ್ತದೆ ಎಂದು ಹೇಳಲಿಕ್ಕೆ ಈ ಸಂದರ್ಭದಲ್ಲಿ ಇಷ್ಟಪಡುತ್ತೇನೆ. ಇನ್ನೊಂದು ವಿಚಾರ ಅಧ್ಯಕ್ಷರ ಮುಖಾಂತರ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಈಗ ವೃತ್ತಿಯಲ್ಲಿ ಉಪ ಕಸಬು ಮಾಡುತ್ತಾರೆ, ವ್ಯಾಪಾರಗಾರರ ಗೋಡನ್‌ಗೆ ಬೆಂಕಿ ಬಿದ್ದರೆ ಅವನಿಗೆ ಇನ್‌ಷೂರೆನ್ಸ್ ಇರುತ್ತದೆ ಅವನು ಕಳೆದುಕೊಂಡಂತ ಹಣ ಮತ್ತೆ ವಾಪಸ್ಸು ಬರುತ್ತದೆ. ಫ್ಯಾಕ್ಟರಿಯವರು ಕೂಡ ಇನ್‌ಷ್ಯೂರೆನ್ಸ್ ಮಾಡಿಸಿರುತ್ತಾರೆ, ಒಂದು ವೇಳೆ ಫ್ಯಾಕ್ಟರಿ ಸುಟ್ಟು ಹೋದರು ಅವರಿಗೆ ದುಡ್ಡು ಬರುತ್ತದೆ. ಆದುದರಿಂದ ಅವನಿಗೆ ನಿರ್ಭೀತಿಯಿಂದ ಖರ್ಚುಮಾಡುವುದಕ್ಕೆ ಧೈರ್ಯ ಮತ್ತು ಹುಮಸ್ಸು ಇದೆ. ಅದೇ ಒಬ್ಬ ಬಡ ರೈತ ಕೈ ಸುಟ್ಟುಕೊಂಡ ಅಂದರೆ ಅವನ ರಕ್ಷಣೆಗೆ ಸಹಾಯಕ್ಕೆ ಯಾರು ಹೋಗುವುದಿಲ್ಲ. ಅವನು ಯಾವ ಧೈರ್ಯದಿಂದ ವ್ಯವಸಾಯ ಮಾಡಬೇಕು ಎಂದು ಕೇಳುತ್ತೇನೆ. ದುರಾದೃಷ್ಟವಶಾತ್ ಅನಾಹುತವಾಯಿತು ಎಂದರೆ ಅವನು ಹೇಗೆ ಚೇತರಿಸಿಕೊಳ್ಳಬೇಕು. ಕಳೆದ 28 ವರ್ಷದಿಂದ ಸರ್ಕಾರ ತೀರ್ಮಾನಕ್ಕೆ ಬಂದು ರೈತರ ಸಹಾಯಕ್ಕೆ ಹೋಗಲಿಲ್ಲ ಎಂದರೆ ನನಗೆ ಅನಿಸುತ್ತದೆ, ರೈತರ ಹಿತಚಿಂತನೆ ಎಷ್ಟುಮಟ್ಟಿಗೆ ಆಗಿದೆ ಕೇಂದ್ರ ಸರ್ಕಾರದವರಾಗಲಿ, ರಾಜ್ಯಸರ್ಕಾರದವರಾಗಲಿ, ಈ ಬಗ್ಗೆ ಯಾವರೀತಿ ಕ್ರಮ ತೆಗೆದುಕೊಂಡಿಲ್ಲ ಎಂದು ಅರ್ಥವಾಗುತ್ತದೆ, ರೈತರ ಮೇಲೆ ಸಹಾನುಭೂತಿ ತೋರಿಸಬೇಕು ಅವನು ಬಾಳಿ ಬದುಕಬೇಕು, ದೇಶದಲ್ಲಿ ಸ್ವಾವಲಂಬಿಯಾಗಬೇಕು. ಎನ್ನುವುದು ಇದ್ದರೆ ಈ ಇನ್‌ಷ್ಯೂರೆನ್ಸ್ ಸ್ಕೀಮ್ ಜಾರಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ನಿಮ್ಮ ಕೈಯ್ಯಲ್ಲಿ ಇರುವಾಗಲೇ ಮಾಡಬೇಕು, 27 ಜನರನ್ನು ಇಲ್ಲಿಂದ ಕಳುಹಿಸಿಕೊಟ್ಟಿದ್ದೀರಿ, ಕೇಂದ್ರಕ್ಕೆ ದಯಮಾಡಿ ಇದನ್ನು ಮೆಚ್ಚಿಸಬೇಕು. ಇನ್ನು ಎರಡನೆ ವಿಚಾರ ಬೆಳಿಗ್ಗೆ ಪ್ರಸ್ತಾಪ ಬಂತು, ಮುಖ್ಯಮಂತ್ರಿಗಳು ಇರಲಿಲ್ಲ, ಕಂದಾಯ ಸಚಿವರು ಇದ್ದರು ಏನಾದರೂ ಸಕಾಲದಲ್ಲಿ ಸಾಕಷ್ಟು ಮಳೆ ಬಾರದೇ ಬೆಳೆ ಹಾಳಾಗಿ ಹೋದರೆ ರೈತರು ಕೊಡತಕ್ಕ ಹಣ ಬಡ್ಡಿ ಸೇರಿ 25 ಪರ್‌ಸೆಂಟ್ ಆಗುತ್ತದೆ. ಮೂರು ವರ್ಷ ಬೆಳೆ ಹೋದರೆ ಅವನ ಹೆಂಡತಿ ಮಕ್ಕಳನ್ನು ಹರಾಜು ಹಾಕಿದರು ದುಡ್ಡು ತೀರುವುದಿಲ್ಲ, ಅವನು ಚಿಕ್ಕನಾಯಕನಹಳ್ಳಿ ಗಂಟ್ಟು ಹಿಡಿದುಕೊಂಡು ಹೋಗಬೇಕಾಗುತ್ತದೆ. ಎಂಟ್ಟು ಪರ್‌ಸೆಂಟ್ ಬಡ್ಡಿ ಹಾಕುತ್ತೀರಿ, ಪೀನಲ್ ಇಂಟರೆಸ್ಟ್ ಹಾಕಬೇಡಿ, ಒಂದೆರಡು ಪರ್‌ಸೆಂಟ್ ಬಡ್ಡಿ ಹಾಕಿ ಎಂದು ಹೇಳುತ್ತೇನೆ. ರೈತರು ಸಾಲ ತೆಗೆದುಕೊಂಡಿರುತ್ತಾರೆ ಅವರು ಆ ಸಾಲವನ್ನು ಸಕಾಲದಲ್ಲಿ ಕೊಡದೇ ಹೋದರೆ 18 ಪರ್‌ಸೆಂಟ್ ಬಡ್ಡಿ ಮತ್ತು ಖರ್ಚು ಸೇರಿ 24 ಪರ್‌ಸೆಂಟ್ ಬರುತ್ತದೆ. ಆವಾಗ ಅತ ಏನು ಮಾಡಬೇಕು ?

ಶ್ರೀ ಡಿ. ದೇವರಾಜ್ ಅರಸ್.—ಬಡ್ಡಿ ಇಲ್ಲವಿದ್ದರೂ ಪರವಾಇಲ್ಲ, ತಕಾವಿಸಾಲ ವಾಪಸ್ಸು ಕೊಟ್ಟುಬಿಡಿ. ತಕಾವಿ ಲೋನ್ ಅಲ್ಲದೆ ಕೊ ಆಪರೇಟೀವ್ ಡಿಪಾರ್ಟ್‌ಮೆಂಟ್‌ನಿಂದ, ಅಪೆಕ್ಸ್ ಸೊಸೈಟಿಯಿಂದ ಕೊಟ್ಟಿರುವುದು ಏನಿದೆ ಅದಕ್ಕೆ ನಾನು ಹೊಣೆಯಲ್ಲ. ತಕಾವಿ ಸಾಲ ನಿಮ್ಮಂಥ ಬಡ ರೈತರು ತೆಗೆದುಕೊಂಡಿದ್ದಾರೆ, ಕೈಮುಗಿಯುತ್ತೇನೆ ದಯಮಾಡಿ ಅದನ್ನು ವಾಪಸ್ಸು ಕೊಡಿ.

ಶ್ರೀ ಕೆ. ಎಚ್. ಹನುಮೇಗೌಡ.—ರೈತರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಹೇಳುತ್ತಿದ್ದೇನೆ. ತೆರಿಗೆ ಮತ್ತು ಬಡ್ಡಿ ಹೊರೆ ಜಾಸ್ತಿ ಬೀಳಬಾರದು ಎಂದು ಹೇಳುತ್ತೇನೆ. ಜಾಸ್ತಿ ಬೀಳಬೇಕು ಎನ್ನುವ ಭಾವನೆ ಇದ್ದರೆ ಎನ್‌ಕರೇಜ್‌ಮೆಂಟ್ ಇನ್‌ಸೆಂಟೀವ್ ಯಾವ ಯಾವುದೋ ಇಲಾಖೆಗಳಿಗೆ ಕೊಡುತ್ತಿದ್ದೀರಿ, ವ್ಯವಸಾಯಗಾರರಿಗೆ ಕರೆಂಟ್ ಕೊಟ್ಟರೆ 25 ಪೈಸೆ ಜಾಸ್ತಿ ಚಾರ್ಜ್ ಮಾಡುತ್ತೀರಿ, ಅದೇ ಇಂಡಸ್ಟ್ರೀಸ್‌ಗೆ ಕೊಟ್ಟಿರುವುದು ಒಂದು ಯೂನಿಟ್‌ಗೆ 5 ಪೈಸೆ. 20 ಪೈಸೆ ಯೂನಿಟ್‌ಗೆ ರಿಯಾಯಿತಿ ಕೊಡುತ್ತೀರಿ ರೈತರ ಪ್ರಶ್ನೆ ಬಂದಾಗ ಏತಕ್ಕೆ ಕೊಡಬಾರದು? ಇಂತಹ ಅನೇಕ ಸಲಹೆಗಳನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಕೆಮಿಕಲ್ ಮೆನ್ಯೂರ್ ಬಗ್ಗೆ ಹೇಳುವುದಾದರೆ, ಅಮೇರಿಕಾದೇಶದಿಂದ ತರಿಸಿಕೊಳ್ಳುವುದಕ್ಕೆ ಕ್ವಿಂಟಾಲ್‌ಗೆ 180 ರೂಪಾಯಿ ಕೊಡುತ್ತಾರೆ. ಮೊನ್ನೆ ಕೇಂದ್ರಸರ್ಕಾರದ ಆಹಾರ ಮಂತ್ರಿಗಳು ಒಂದು ರೂಪಾಯಿ ಜಾಸ್ತಿಮಾಡಿದ್ದೇವೆ ಎಂದು ಹೇಳಿದ್ದಾರೆ. ಹೊರ ದೇಶದ ರೈತರ ಬಗ್ಗೆ ನೀವು ಕನಿಕರ ಪಡುತ್ತೀರಿ, ಆದರೆ ನಮ್ಮ ದೇಶದ ರೈತರ ಬಗ್ಗೆ ಏಕೆ ಕನಿಕರ ಪಡುವುದಿಲ್ಲ? ಅದೇ ರೀತಿ ನಮ್ಮ ದೇಶದ ರೈತರ ಬಗ್ಗೆ ಕನಿಕರ ಪಟ್ಟರೆ ಬಹಳ ಸಂತೋಷವಾಗುತ್ತದೆ.

Mr. Deputy Speaker in The Chair

ಇನ್ನೊಂದು ಮುಖ್ಯವಾದ ವಿಷಯ ಏನೆಂದರೆ, ವರಲಕ್ಷ್ಮಿ ಕಾಟನ್ ಈಜಿಪ್ಷಿಯನ್ ಕಾಟನ್ ಗುಣಮಟ್ಟದಲ್ಲಿರತಕ್ಕ ಬೆಳೆ. ಯಾರೋ ಒಬ್ಬ ಕೃಷಿ ವಿದ್ಯಾನಿಲಯದ ಸಂಶೋಧಕ ಇದನ್ನು ಕಂಡು ಹಿಡಿದ, ಇದು ಒಂದು ವರ ಎಂದು ಹೇಳಿದರೆ ತಪ್ಪಾಗಲಾರದು ಹೋದ ವರ್ಷ ಇದಕ್ಕೆ 900ರೂಪಾಯಿ ಇತ್ತು, ಆಗ ಪರದೇಶದಿಂದ ಕೇಂದ್ರಸರ್ಕಾರದವರು 1500 ರೂಪಾಯಿಗೆ ಇಂಪೋರ್ಟ್ ಮಾಡಿಕೊಂಡರು, ನಮಗೆ 900 ರೂಪಾಯಿಗೆ ಸಿಕ್ಕಿತು. ಈ ವರ್ಷ 450-350ಕ್ಕೆ ಇಳಿದಿದೆ. ಪಾಕಿಸ್ಥಾನದಿಂದ ಕೇಂದ್ರಸರ್ಕಾರದವರು 1200 ರೂಪಾಯಿಗೆ ಇಂಪೋರ್ಟ್ ಮಾಡಿಕೊಂಡರು. ಈಜಿಪ್ಷಿಯನ್ ಕಾಟನ್‌ಗೆ 1500 ರೂಪಾಯಿ ಕೊಟ್ಟು ಇಂಪೋರ್ಟ್ ಮಾಡಿಕೊಳ್ಳುತ್ತಿದ್ದಾರೆ. ಅದೇ ಗುಣಮಟ್ಟದಲ್ಲಿರತಕ್ಕ ಕಾಟನನ್ನು ಬೆಳೆಯುತಕ್ಕ ರೈತರಿಗೆ 250 ರೂಪಾಯಿ ಕೊಡುತ್ತಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.— ಶ್ರೀಮಾನ್ ಜಗಜೀವನರಾಂ ಅವರು, ಮತ್ತು ನಮ್ಮ ಮುಖ್ಯಮಂತ್ರಿಗಳು ಹೊರದೇಶದಿಂದ ಇಂಪೋರ್ಟ್ ಮಾಡಿಕೊಳ್ಳುವುದನ್ನು ನಿಲ್ಲಿಸಬೇಕು, ನಮ್ಮ ದೇಶದ ರೈತರಿಗೆ ಪ್ರೋತ್ಸಾಹ ಕೊಡಬೇಕು ಎಂದು ಹೇಳಿದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.— ಶ್ರೀಮಾನ್ ಕೊಣಂದೂರು ಲಿಂಗಪ್ಪನವರ ಭಾಷೆಯಲ್ಲಿ ಹೇಳುವುದಾದರೆ ಪ್ರಾರ್ಥನೆ, ಕೀರ್ತನೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ಎದೆಕೊಟ್ಟು ಹೋರಾಡುವಂಥ ಚೈತನ್ಯ ನಮ್ಮ ಮುಖ್ಯ ಮಂತ್ರಿಗಳಿಗೆ ಬಂದಿಲ್ಲ. ಪ್ರಾರ್ಥನೆ ಕೀರ್ತನೆ ಬಿಟ್ಟು ಮಾತನಾಡಬೇಕು. ಅವರ ಮುಂದೆ ನೀವು ನಿಂತುಕೊಳ್ಳುತ್ತೀರಾ? ನಾನು ಹೆಸರು ಹೇಳುವುದಿಲ್ಲ.

ಶ್ರೀ ಡಿ. ದೇವರಾಜ್ ಅರಸ್.— ಶ್ರೀಮಾನ್ ಹನುಮೇಗೌಡರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಪಾಕಿಸ್ಥಾನದಿಂದ ಅಥವಾ ಬೇರೆ ಕಡೆಯಿಂದ ಹತ್ತಿಯನ್ನು ತರಿಸಿಕೊಳ್ಳುತ್ತೇವೆ. There is what is called trade agreement. It is not as if at our sweet will and pleasure either we can get it or do not. They enter into agreements with foreign countries, Trade agreements are of certain duration 4 ವರ್ಷ, 5 ವರ್ಷ, 3 ವರ್ಷ ಇರುತ್ತದೆ. The cotton that is being got from Pakistan or elsewhere is in accordance with the Agreement which we cannot so easily brush aside, In turn ನಾವು ಇಷ್ಟು ಕೊಡುವುದು ಇರುತ್ತದೆ, ಅವರು ಇಷ್ಟು ಕೊಡುವುದು ಇರುತ್ತದೆ.

I have gone into this question even with the Central Government in detail and this is the true state of affairs. We cannot at our pleasure and will stop importing saying that at we are not going to import. We are bound by agreements to that certain quantities. ಇದನ್ನು ಅವರು ತಿಳಿದುಕೊಳ್ಳಬೇಕು.

ಶ್ರೀ ಕೆ. ಎಚ್. ಹನುಮೇಗೌಡ.— ಅವರ ಜೊತೆಯಲ್ಲಿ ನೀವು ಏನಾದರೂ ಅಗ್ರಿಮೆಂಟ್ ಮಾಡಿಕೊಳ್ಳಿ ನನಗೆ ಸಂಬಂಧವಿಲ್ಲ. ಹೊರಗಿನವರಿಗೆ ಏನು ರೇಟ್ ಕೊಡುತ್ತೀರೋ ಅದರಲ್ಲಿ ಅರ್ಧ ನಮಗೆ ಕೊಡಿ ಎಂದು ಹೇಳುವುದು.

Mr. DEPUTY SPEAKER.—That is what is known as International Trade and Commerce obligation.

ಶ್ರೀ ಕೆ. ಎಚ್. ಹನುಮೇಗೌಡ.— ಇಂಟರ್‌ನ್ಯಾಷನಲ್ ಟ್ರೇಡ್ ಆದರೂ ಮಾಡಿಕೊಳ್ಳಲಿ, ಏನಾದರೂ ಮಾಡಿಕೊಳ್ಳಲಿ, ಅದು ದೊಡ್ಡ ವಿಚಾರ, ಅದಕ್ಕೆ ನಾನು ಬರುವುದಿಲ್ಲ, ಹೋಗಲಿ, ನಮಗೆ ರೇಟನ್ನು ಸರಿಯಾಗಿ ಕೊಡಿ ಎಂದು ನಾನು ಕೇಳುವುದು.

ಶ್ರೀ ಎಸ್. ಬಂಗಾರಪ್ಪ.— ವರಲಕ್ಷ್ಮಿ ಕಾಟನ್ ಬಗ್ಗೆ ನಾನು ಭಾಷಣ ಮಾಡುವಾಗ ಹೇಳಿದೆ. ವರಲಕ್ಷ್ಮಿ ಹತ್ತಿಯನ್ನು ಇವತ್ತು ಸಾವಿರಾರು ಎಕರೆಯಲ್ಲಿ ಬೆಳೆಯುತ್ತಿದ್ದಾರೆ. ಕಳೆದ ಸಾರಿ ಇದರ ಬೆಲೆ 1500 ರೂಪಾಯಿಯವರೆಗೂ ಹೋಗಿತ್ತು. ಈ ಸಾರಿ 202 ಚಿಲ್ಲರೆವರೆಗೆ ಹೋಗಿದೆ. ಅದಕ್ಕೋಸ್ಕರ I had given a notice Under Rule 312 about this. I think it is not necessary to raise it again. ಸೀ ಐಲಂಡ್ ಕಾಟನ್ ಏನಿದೆ ಅದರ ಮೇಲೆ ಜೀವನ ಮಾಡತಕ್ಕ ಸಾವಿರಾರು ಕುಟುಂಬಗಳಿವೆ. ಇವತ್ತು ಸಾರಾರು ರೂಪಾಯಿ ಬೆಲೆ ಬಾಳತಕ್ಕ ಹತ್ತಿ ಗೋಡೌನ್‌ನಲ್ಲಿ ಬಿದ್ದಿದೆ,

Mr. DEPUTY SPEAKER.— The hon. member had given a notice Under Rule 312. We may treat it as disposed of now.

ಶ್ರೀ ಕೆ. ಎಚ್. ಹನುಮೇಗೌಡ.— ನಾನು ಹೇಳುವುದಿಷ್ಟೆ, ಬೆಳೆಯತಕ್ಕ ರೈತನಿಗೆ ನ್ಯಾಯವಾದ ಬೆಲೆ ಕೊಡಿ ಎಂದು. ಇಂಟರ್‌ನ್ಯಾಷನಲ್ ಮಾರ್ಕೆಟ್ ಆದರೂ ಇಟ್ಟುಕೊಳ್ಳಿ ಏನಾದರೂ ಇಟ್ಟುಕೊಳ್ಳಿ. ಅವನು ಕಷ್ಟಪಟ್ಟು ಬೆಳೆದಿರುತ್ತಾನೆ, ಅವನ ಖರ್ಚು ಕಳೆದು ಅವನು ಹಾಕಿದ ದುಡ್ಡಿಗೆ 10 ಪರ್ಸೆಂಟ್ ಆದರೂ ಸಿಗುವ ಹಾಗೆ ಮಾಡಿ ಎಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ನೀವು ಗೊಬ್ಬರದ ವಿತರಣೆ ವಿಚಾರದಲ್ಲಿ ಹೇಳುವುದಾದರೆ, ಬಹಳ ಹೇಳಬಹುದು. 4 ವರ್ಷದ ಹಿಂದೆ ತ್ರೀ ಟೈರ್ ಸಿಸ್ಟಂ ಇತ್ತು. ತಾಲ್ಲೂಕು ಸೊಸೈಟಿಯವರು ಗೊಬ್ಬರ ತೆಗೆದುಕೊಂಡರೆ, ಆಯಾಯ ಸೇವಾ ಸಹಕಾರ ಸಂಘಗಳು ಡೋರ್ ಡೆಲಿವರಿ ಕೊಡುತ್ತಿದ್ದರು. ಮಧ್ಯೆ ಹೆಗ್ಗಣಗಳಿಗೆ ಅವಕಾಶ ಇರಲಿಲ್ಲ. ಈಗ ಟು ಟೈರ್ ಸಿಸ್ಟಂ ತಂದು ಫೂಲ್ ಮೆನ್ಯೂರ್, ನಾನ್ ಫೂಲ್ ಮೆನ್ಯೂರ್, ಕಮಾಡಿಟಿ ಇವೆಲ್ಲಾ ಹೆಸರು ಹಾಕಿಕೊಂಡ ಕೊಡುತ್ತಿರುವುದರಿಂದ ಮಧ್ಯೆ ಬೇಕಾದಷ್ಟು ಹೆಗ್ಗಣಗಳು ತಿಂದು ಹಾಕುತ್ತಿವೆ. 2-3 ವರ್ಷಗಳಿಂದ ಪದೇ ಪದೇ ಮಾನ್ಯ ಮುಖ್ಯ ಮಂತ್ರಿಗಳ ಮತ್ತು ಅಗ್ರಿಕಲ್‌ಚರ್ ಮಂತ್ರಿಗಳ ಗಮನಕ್ಕೆ ತಂದರೂ ಇದುವರೆಗೂ ಏನೂ ಮಾಡಿಲ್ಲ. ಮೇಲ್ಗಡೆ ತಕ್ಕಡಿ ಹಾಕಿದ್ದೀರಿಲ್ಲ ಅದರಲ್ಲಿ ನಿಮ್ಮ ಪಾಪವನ್ನು ತೂಗತಕ್ಕ ಕಾಲ ಬರುತ್ತದೆ. ದೇವರಿದ್ದಾರೆ ದೇವರು ನೋಡಿಕೊಳ್ಳುತ್ತಾನೆ. ದೇವರು ಇದ್ದಾನೆ ಎಂದು ನಿಮ್ಮ ಗಮನಕ್ಕೆ ಬರುವುದಿಲ್ಲ ಬಿಡಿ.

ಒಬ್ಬ ಸದಸ್ಯರು.—23 ವರ್ಷಗಳಿಂದ ನೀವು ತೂಗಿದಿರಲ್ಲ

ಶ್ರೀ ಎಸ್. ಬಂಗಾರಪ್ಪ.—ಹಿಂದೆ ಮುಖ್ಯ ಮಂತ್ರಿಗಳು ಆಗಿದ್ದರಲ್ಲ ಅವರಿಗೆಲ್ಲ ಏನಾಯಿತರಿ?

ಶ್ರೀ ಕೆ. ಎಚ್. ಹನುಮೇಗೌಡ.— ಅವರಿಗೆ ಇಲ್ಲದೇ ಹೋದರೆ ಅವರ ವಂಶದವರು ಅನುಭವಿಸಿಕೊಳ್ಳುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಯಾರು ಅನುಭವಿಸುತ್ತಾರೆ?

ಶ್ರೀ ಕೆ. ಎಚ್. ಹನುಮೇಗೌಡ.— ಅವರ ಮೊಮ್ಮಕ್ಕಳು ಅನುಭವಿಸಿಕೊಳ್ಳುತ್ತಾರೆ. ಅವರ ಫಾಲೋಯರ್ಸ್‌ಗೆ ಎನ್‌ಕರೇಜ್ ಮಾಡುವುದಾದರೆ, ಏನಾದರೂ ಮಾಡಿಕೊಳ್ಳಲಿ, ನಾನು ನಿಮ್ಮ ಪಕ್ಷದ ಬಗ್ಗೆ ಮಾತನಾಡುವುದಿಲ್ಲ. ಆದರೆ ರೈತರ ಹೆಸರು ಹೇಳಿ ವಂಚನೆ ಮಾಡುತ್ತಿದ್ದಾರೆ.

ಶ್ರೀ ಡಿ. ದೇವರಾಜ್ ಅರಸ್.— ಅಂಥಾದ್ದು ಏನಾದರೂ ಇದ್ದರೆ ನಿರ್ದಿಷ್ಟವಾಗಿ ಹೇಳಿ. ನಾನು, ನನ್ನ ಫಾಲೋಯರ್ಸ್ ಯಾರಿಗೂ ಕೊಡುವುದಕ್ಕೆ ಹೋಗಿಲ್ಲ, ಅವರು ತೆಗೆದುಕೊಂಡೂ ಇಲ್ಲ. ಸುಮ್ಮನೆ ಊಹೆ ಮಾಡಿ ಹೇಳುವುದಕ್ಕಿಂತ ನಿರ್ದಿಷ್ಟವಾಗಿ ಅಂಥಾದ್ದು ಏನಾದರೂ ಇದ್ದರೆ ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ.— ಸಮಯ ಬಂದಾಗ ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್.— ನಿರ್ದಿಷ್ಟವಾಗಿ ಏನಾದರೂ ಹೇಳುವುದಕ್ಕೆ ಇದ್ದರೆ ಹೇಳಿ.

5-30 P. M.

ಶ್ರೀ ಕೆ. ಎಚ್. ಹನುಮೇಗೌಡ.— ಗೊಬ್ಬರದ ವ್ಯವಹಾರದ ಬಗ್ಗೆ ಹೇಳುವುದಾದರೆ ತಾವು ಜನಗಳ ಬಗ್ಗೆ ಅನುಕಂಪವನ್ನು ಇಟ್ಟುಕೊಂಡು ಅವರಿಗೆ ಸರಿಯಾಗಿ ಗೊಬ್ಬರ ದೊರಕುವ ಹಾಗೆ ವ್ಯವಸ್ಥೆ ಮಾಡಿ. ತ್ರೀ ಟೈರ್ ಸಿಸ್ಟಂ ಇಂಟ್ರಡ್ಯೂಸ್ ಮಾಡಿ. ಈ ಮಧ್ಯೆ ಬಿಲ್ ನಾನ್ ಬಿಲ್ ಏನು ಇದೆ ಅದನ್ನು ದಯಮಾಡಿ ಇವತ್ತಿನಿಂದ ಅಬಾಲಿಷ್ ಮಾಡಿಸಿ ಸ್ವಾಮಿ. ಆದುದರಿಂದ ಈ ರೀತಿಯ ಅವ್ಯವಹಾರಗಳಿಗೆ ದಯಮಾಡಿ ಅವಕಾಶವನ್ನು ಕೊಡಬೇಡಿ. ಯಾರಾದರೂ ಈ ರೀತಿ ಅವ್ಯವಹಾರ ಮಾಡಿದರೆ, ಅಥವಾ ಮಾಡಲು ಪ್ರಯತ್ನ ಮಾಡಿದರೆ ಅವರ ಬಗ್ಗೆ ನಿರ್ಭಯವಾಗಿ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮಗೆ ಈ ಸಂದರ್ಭದಲ್ಲೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ರೈತರ ಬಗ್ಗೆ ಇನ್ನೊಂದು ವಿಚಾರ ಹೇಳಬೇಕಾದರೆ ಪಂಜಾಬ್ ಗೌರ್ನಮೆಂಟ್‌ನಲ್ಲ ಯಾವರೀತಿ ಇದೆ ಎಂದು ಕೇಳಿ ತಿಳಿದುಕೊಂಡಿದ್ದೇನೆ. ಅಂಡರ್ ಗ್ರ್ಯಾಂಡ್ ವಾಟರ್ ಲಿಫ್ಟಿಂಗ್ ಕಾರ್ಪೊರೇಷನ್ ಎಂದು ಮಾಡಿ 100 ಕೋಟಿ ರೂಪಾಯಿ ಬಂಡವಾಳವನ್ನು ಕೊಟ್ಟು ಹೈ ಪವರ್ ರಿಗ್ಸ್ ಮಿಷನ್ಸ್ ಕೊಟ್ಟು, ಟೆಕ್ನಿಕಲ್ ಎಕ್ಸ್‌ಪರ್ಟಸ್ ಕೊಟ್ಟು ಒಂದು ಕಡೆ

ಯಿಂದ ಸರ್ವೆ ಮಾಡಿಕೊಂಡು ಭಾವಿಗಳನ್ನ ಹಾಕಿಕೊಂಡು ಹೋಗುತ್ತಿದ್ದಾರೆ. ಇದು ನಮ್ಮ ಮಾನ್ಯ ವ್ಯವಸಾಯ ಮಂತ್ರಿಗಳಿಗೂ ಗೊತ್ತಿದೆಯೆಂದು ನನಗನ್ನಿಸುತ ದೆ. ಇವತ್ತಿನ ದಿವಸ ತಾವು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಮಾಡಿ ಅದು ಏನೇನು ವ್ಯವಹಾರಗಳನ್ನು ಮಾಡ ಬೇಕೋ ಅದಕ್ಕೆಲ್ಲಾ ಬಿಟ್ಟುಬಿಟ್ಟಿದ್ದೀರಿ. ರೈತರಿಗೆ ಸಂಬಂಧಪಟ್ಟ ಬೀಜ, ಗೊಬ್ಬರ, ಔಷಧಿಗಳನ್ನು ಮಾರುವುದಕ್ಕೆ ಎಂದು ಸಾವಿರಾರು ರೂಪಾಯಿಗಳ ಸಂಬಳಗಳನ್ನು ಕೊಟ್ಟು ಅಧಿಕಾರಿಗಳನ್ನು ಇಟ್ಟಿದ್ದೀರಿ. ಈ ಕೆಲಸವನ್ನು ಮಾಡುವುದಕ್ಕೆ ಅಷ್ಟು ಸಂಬಳವನ್ನು ಅಧಿಕಾರಿಗಳಿಗೆ ಕೊಡಬೇಕಾಗಿಲ್ಲ. ಆ ಕೆಲಸವನ್ನು ಯಾರು ಬೇಕಾದರೂ ಮಾಡಬಹುದು. ಎಲ್ಲಿ ಬರಗಾಲ ಪ್ರದೇಶದಲ್ಲಿ ನೀರಿಲ್ಲ, ಎಲ್ಲಿ ಭೂ ಗರ್ಭದಲ್ಲಿ ಜಲ ಇದೆ, ಅಂಥ ಕಡೆ ಅಂಡರ್ ಗ್ರೌಂಡ್ ವಾಟರ್ ಲಿಫ್ಟಿಂಗ್ ಕಾರ್ಪೊರೇಷನ್ ಎಂದು ಮಾಡಿ ಅದಕ್ಕೆ ಸಾಕಷ್ಟು ಬಂಡವಾಳವನ್ನು ಕೊಟ್ಟು, ತಜ್ಞರನ್ನು ಕೊಟ್ಟು ನೀವೂ, ನಿಮ್ಮ ಕಡೆಯವರೂ ಅದಕ್ಕೆ ಇಂಟರ್‌ಫಿಯರ್ ಆಗದಹಾಗೆ ಒಂದು ವ್ಯವಸ್ಥೆ ಮಾಡಿದರೆ ಅದರಿಂದ ಬಹಳ ಉಪಕಾರವಾಗುತ್ತದೆ. ಒಂದು ಕಡೆಯಿಂದ ಈ ರೀತಿ ಸರ್ವೆ ಮಾಡಿಕೊಂಡು ಎಲ್ಲಿ ನೀರು ಕಾಣುತ್ತದೆ ಅಲ್ಲಿ ಬೋರ್ ಹಾಕಿ ಮಿಷನ್ ಫಿಕ್ಸ್ ಮಾಡಿ, ಕರೆಂಟ್ ಎಳೆದು ಕೊಟ್ಟು, ಅದಕ್ಕೆ ಎಷ್ಟು ಹಣ ಖರ್ಚಾಗಿದೆ ಎಂಬುದಕ್ಕೆ ಜನಗಳಿಂದ ಬರೆಸಿಕೊಂಡು ಅನಂತರ ಜನಗಳಿಂದ ವಸೂಲು ಮಾಡಿ ಕೊಳ್ಳುತ್ತಾರೆಂದು ಕೇಳಿದ್ದೇನೆ. ಇದು ಪಂಜಾಬ್‌ನಲ್ಲಿ ನಡೆಯುತ್ತಿರುವುದು. ತಾವು ಈ ರೀತಿ ಇಲ್ಲೂ ಮಾಡಿದರೆ ಬರಗಾಲ ಪರಿಸ್ಥಿತಿ ಬಹಳ ಕಡಿಮೆಯಾಗಬಹುದು. ಈ ಇಂಥ ಒಂದು ಅನುಕಂಪದ ಕೊಡುಗೆಯನ್ನು ನಮ್ಮ ವ್ಯವಸಾಯಗಾರರಿಗೆ ಕೊಟ್ಟಹಾಗೆ ಆಗುತ್ತದೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಷೀಪ್ ಡೆವಲಪ್‌ಮೆಂಟ್ ಬಗ್ಗೆ ಹೇಳುವುದಾದರೆ, ನಮ್ಮ ಕಡೆಯಲ್ಲೂ ಕುರಿಗಳನ್ನು ಸಾಕುತ್ತೇವೆ, ಮಾನ್ಯ ಚಿಕ್ಕೇಗೌಡರ ಕ್ಷೇತ್ರದಲ್ಲೂ ಕೂಡ ಕುರಿಗಳನ್ನು ಸಾಕುತ್ತಾರೆ. ಈ ಕುರಿ ಗಳಿಂದ ಗೊಬ್ಬರ ಮಾಡುವುದು ಇರಲಿ, ಕುರಿಯ ಉಣ್ಣೆಯಲ್ಲಿ 1 ರೂಪಾಯಿಯಿಂದ ಎರಡೂವರೆ ರೂಪಾಯಿಯವರೆಗೂ ಬರುತ್ತದೆ. ಪಂಜಾಬ್ ದೇಶದಲ್ಲಿ ಆಸ್ಟ್ರೇಲಿಯಾದಿಂದ ಕುರಿಗಳನ್ನು ತರಿಸಿ ಸಾಕುತ್ತಾರೆ, ಈ ಕುರಿಗಳಿಂದ ಏನು ಉಣ್ಣೆ ಬರುತ್ತದೆ ಅದನ್ನು ಮಾರಿದರೆ 100-150 ರೂಪಾಯಿವರೆಗೂ ಬರುತ್ತದೆ.

ಶ್ರೀ ಎನ್. ಚಿಕ್ಕೇಗೌಡ.— ನಮ್ಮ ಚಳ್ಳಕೆರೆಯಲ್ಲೂ ಕೂಡ ಆಸ್ಟ್ರೇಲಿಯಾ ದೇಶದಿಂದ ತರಿಸಿದ ಕುರಿಗಳನ್ನು ಇಟ್ಟಿದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ತಾವು ಎಲ್ಲೋ ಒಂದು ಕಡೆ ಹೀಗೆ ಮಾಡಿದರೆ ಏನೂ ಪ್ರಯೋಜನವಿಲ್ಲ. ಹತ್ತಾರುಕಡೆ ಈ ರೀತಿ ಸಾಕುವಂತಾಗಬೇಕು. ಇಲಾಖೆಯ ಅಧಿಕಾರಿಗಳಿಗೆ ವ್ಯಾನುಗಳು, ಮನೆ, ಜೀಪು, ಫೋನು ಇತ್ಯಾದಿಗಳನ್ನು ಕೊಡುವುದರಲ್ಲಿಯೇ ದುಡ್ಡೆಲ್ಲಾ ಮುಗಿದು ಹೋಗುತ್ತದೆ. ಆದುದರಿಂದ ಈ ಸೌಕರ್ಯಗಳೆಲ್ಲಾ ರೈತರ ಮನೆಯ ಬಾಗಿಲಿಗೆ ಹೋಗುವಂತೆ ವ್ಯವಸ್ಥೆ ಮಾಡಬೇಕು. ಮಳೆ ಬಾರದೆ ವ್ಯವಸಾಯ ಮಾಡಲು ರೈತರಿಗೆ ಕಷ್ಟವಾದಾಗ ಅಂಥ ಕಡೆ ಕೊನೆ ಪಕ್ಷ ಕುರಿಸಾಕುವ ವ್ಯವಸ್ಥೆಯನ್ನಾದರೂ ಮಾಡಿದರೆ ಅದರಿಂದ ರೈತರಿಗೆ ಅನುಕೂಲ ವಾಗುತ್ತದೆ.

ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡು ತ್ತೇನೆ. ಇಲ್ಲಿ ಅನೇಕ ಉಪಯುಕ್ತವಾದ ಕೆಲಸಗಳನ್ನು ಮಾಡುತ್ತಿದ್ದಾರೆ, ಅನೇಕ ಸಂಶೋಧನೆ ಗಳನ್ನು ಮಾಡಿದ್ದಾರೆ. ನಮ್ಮ ಮಾನ್ಯ ವ್ಯವಸಾಯ ಮಂತ್ರಿಗಳು ಈ ವಿಶ್ವವಿದ್ಯಾನಿಲಯದಲ್ಲಿ ಕೆಲವು ದಿವಸಗಳ ಕಾಲ ಸದಸ್ಯರಾಗಿದ್ದರು. ಮುಂದುವರಿದ ದೇಶಗಳಲ್ಲಿ ದೇಶದ ಒಟ್ಟು ಉತ್ಪತ್ತಿಯಲ್ಲಿ 1 ಪರ್ಸೆಂಟನ್ನು ವ್ಯವಸಾಯ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಪರಿಶೋಧನೆಗಳಿಗೆ ದುಡ್ಡು ಹಾಕುತ್ತಾರೆಂದು ಕೇಳಿದ್ದೇನೆ. ಆದರೆ ನಮ್ಮ ದೇಶದಲ್ಲಿ 400 ಕೋಟಿ ರೂಪಾಯಿ ಉತ್ಪತ್ತಿ ಇದ್ದರೂ ಕೂಡ ವ್ಯವಸಾಯಕ್ಕೆ ಮತ್ತು ವ್ಯವಸಾಯದ ಬೆಳೆಗಳ ಸಂಶೋಧನೆಗೆ ಇಟ್ಟಿರತಕ್ಕ ಹಣ ಕೇವಲ ಹನ್ನೊಂದೂವರೆ ಕೋಟಿ ರೂಪಾಯಿ. ಇದರಲ್ಲಿ ಅಧಿಕಾರಿಗಳ ಸಂಬಳ, ಟಿ. ಎ, ಡಿ. ಎ, ಜೀಪ್‌ಗಳಿಗೆ ಪೆಟ್ರೋಲ್ ಇತ್ಯಾದಿಗಳಿಗೆ 6-7 ಕೋಟಿ ರೂಪಾಯಿ ಖರ್ಚಾಗಿ ಹೋಗುತ್ತದೆ. ಉಳಿದ ಹಣ ಯಾವ ಡೆವಲಪ್‌ಮೆಂಟ್ ಕೆಲಸಕ್ಕೂ ಕೂಡ ಆಗುವುದಿಲ್ಲ. ಹೀಗಾದರೆ ದೇಶ ಕಷ್ಟದ ಪರಿಸ್ಥಿತಿ ಯಲ್ಲಿ ಸಿಕ್ಕಬೇಕಾಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ವ್ಯವಸಾಯದ ಸಂಶೋಧನೆಗಳಿಗೆ ಹೆಚ್ಚು ಗಮನ ಕೊಡಬೇಕೆಂಬ ದೃಷ್ಟಿಯಿಂದ ಹೀಗೆ ಹೇಳುತ್ತಿದ್ದೇನೆ.

ಶ್ರೀ ಜಿ. ರಾಮೇಗೌಡ.— ಟೋಟಲ್ ಬಡ್ಜೆಟ್‌ನಲ್ಲಿ 1 ಪರ್ಸೆಂಟ್, ವ್ಯವಸಾಯಕ್ಕೆ ಇಟ್ಟಿರು ವುದರಲ್ಲಿ 10 ಪರ್ಸೆಂಟ್.

ಶ್ರೀ ಕೆ. ಎಚ್. ಹನುಮೇಗೌಡ.— ವ್ಯವಸಾಯ ವಿಶ್ವವಿದ್ಯಾನಿಲಯ ಸ್ಥಾಪನೆ ಆದಮೇಲೆ ಮೊದಲು 140 ಲಕ್ಷ ರೂಪಾಯಿ ಕೊಡುತ್ತಿದ್ದೀರಿ, ಅಂದರೆ 1 ಕೋಟಿ 40 ಲಕ್ಷ ರೂಪಾಯಿ ಕೊಡುತ್ತಿದ್ದೀರಿ. ಆಗ್ಗೆ ಅದು ಸಾಕಾಗಿತ್ತು ಆದರೆ ಈಗ ಅದಕ್ಕೆ ಕಷ್ಟ ಜಾಸ್ತಿಯಾಗಿದೆ, ಸಂಶೋಧನೆಗಳೂ ಜಾಸ್ತಿಯಾಗಿದೆ, ಅದೇರೀತಿ ರೀಸರ್ಚ್ ಕೆಲಸ ಕೂಡ ಜಾಸ್ತಿಯಾಗಿದೆ ಎಂದು ಅವರ ಡಿಮ್ಯಾಂಡ್ 2 ಕೋಟಿ 22 ಲಕ್ಷ ರೂಪಾಯಿಗೆ ಬಂದಿದೆ. ಇಲಾಖೆಯ ಅಧಿಕಾರಿಗಳು ಮಾರ್ವಾಡಿಗಳಂತೆ ಚೌಕಾಸಿ ಮಾಡುತ್ತಾರೆ. ಈ ಚೌಕಾಸಿ ಮಾಡುವ ಪ್ರವೃತ್ತಿ ವ್ಯವಸಾಯ ಇಲಾಖೆ ಮತ್ತು ಅರ್ಥ ಇಲಾಖೆಯಲ್ಲಿರುವ ಅಧಿಕಾರಿಗಳಲ್ಲಿದೆ. ಈ ಪ್ರವೃತ್ತಿಯನ್ನು ಕಂಡು ನನ್ನ ಮನಸ್ಸಿಗೆ ಬಹಳ ನೋವಾಯಿತು. ಆದುದರಿಂದ ಈ ವ್ಯವಸಾಯ ಇಲಾಖೆಯ ಸಂಶೋಧನೆಗಳಿಗೆ ಎಷ್ಟು ದುಡ್ಡು ಅವಶ್ಯಕತೆ ಇದೆ ಎಂಬುದನ್ನು ನೋಡಿ ಅವರಿಗೆ ದುಡ್ಡು ಕೊಡಿ. ಅದು 172 ಲಕ್ಷ ರೂಪಾಯಿಗಳಿಗೇ ನಿಂತು ಹೋಯಿತು. ಕೃಷಿ ವಿಶ್ವವಿದ್ಯಾನಿಲಯಕ್ಕೆ 2 ಕೋಟಿ 22 ಲಕ್ಷ ರೂಪಾಯಿ ಬೇಕಾಗುತ್ತದೆ. ನೀವು ಸಿನಿಮಾ ತೆಗೆಯುವವರಿಗೆ ಪ್ರೋತ್ಸಾಹ ಕೊಡುತ್ತೀರಿ. ಈ ಸಿನಿಮಾದವರಿಗೆ ತೋರಿಸುವ ಉದಾರತೆಯನ್ನು ರೈತರಿಗೋಸ್ಕರ, ಇರುವ ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಡಿ. ಅವರಿಗೆ ಎಷ್ಟು ಹಣ ಬೇಕಾಗುತ್ತದೆ ಎಂಬುದನ್ನು ನೋಡಿ ಕೊಡಿ. ಡೆವಲಪ್‌ಮೆಂಟ್ ಸ್ಕೀಂಗೆ 1 ಕೋಟಿ ರೂಪಾಯಿ ಬೇಕಾಗುತ್ತದೆಂದು ಕೇಳಿದರೆ ಅದಕ್ಕೆ 60 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ರೀತಿ ಚೌಕಾಸಿ ಮಾಡುವುದು ಸರಿಯಲ್ಲ. ಇದನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿದ್ದೇನೆ. ಇದು ಹೀಗಾಗಬಾರದು. ಇದು ದುರ್ದೈವದ ಸಂಗತಿ. ಸಂಶೋಧನೆಗಳನ್ನು ಮಾಡುವವರಿಗೆ ಉದಾರ ಸಹಾಯವನ್ನು ಮಾಡಬೇಕು. ಬೇಕಾದರೆ ತಾವು ಹಣ ಕೊಟ್ಟ ಮೇಲೆ ಅವರು ಯಾವ ರೀತಿ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಇನ್‌ಸ್ಪೆಕ್ಷನ್ ಮಾಡಿ, ಚೆಕ್ ಮಾಡಿ. ಅದನ್ನು ನಾನು ಬೇಡವೆಂದು ಹೇಳುವುದಿಲ್ಲ.

ಇನ್ನೊಂದು ವಿಷಯ ಹೇಳಬೇಕೆಂದರೆ, ಲಕ್ಷಾಂತರ ಎಕರೆಯಲ್ಲಿ ಸಣ್ಣ ಸಣ್ಣ ಹುಳುಗಳು ಕಾಣಿಸಿಕೊಳ್ಳುತ್ತವೆ. ಅವು ನಮ್ಮ ಹೊಲದಲ್ಲೂ ಕೂಡ ಬಿದ್ದವು. ಅವನ್ನು ಹೋಗಲಾಡಿಸಲು ಏನೂ ಮಾಡುವುದಕ್ಕಾಗಲಿಲ್ಲ. ಅದು ಹೊಲದೊಳಗೆ ಒಂದು ಮೂಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಒಂದು ವಾರದೊಳಗೆ ಅದರ ಸುತ್ತಮುತ್ತ ಎಷ್ಟು ಜಮೀನು ಇರುತ್ತದೋ ಅಷ್ಟನ್ನೂ ಮುಗಿಸಿ ಬಿಡುತ್ತವೆ. ಈ ಬಗ್ಗೆ ವ್ಯವಸಾಯ ಇಲಾಖೆಯವರಿಗೆ ಹೇಳಿದಾಗ ಅವರು ತಕ್ಷಣ ಔಷಧಿ ಹೊಡೆಸಿ ಎಂದು ಹೇಳಿದರು. ಆ ಕಾಯಿಲೆ ಡ್ಯುರೇಷನ್ 15 ದಿವಸ. ಆದರೆ ತಕ್ಷಣ ಎಲ್ಲರಿಗೂ ಅಂದರೆ ಪ್ರತಿಯೊಬ್ಬರಿಗೂ ಔಷಧಿ ಸ್ಪ್ರೇ ಪಂಪ್‌ಗಳು ಸಿಕ್ಕುವುದಿಲ್ಲ. ಮಳೆ ಬಂದಾಗ ಔಷಧಿ ಹೊಡೆಸಿದರೆ ಅದು ಕೊಚ್ಚಿಹೋಗುತ್ತದೆ. ಮಳೆ ನಿಂತಮೇಲೆ ಔಷಧಿ ಹೊಡೆಸಿದರೆ ಆ ಭಾಗದ ಹುಳು ಇನ್ನೊಂದು ಕಡೆಗೆ ಹೋಗಿ ಕ್ಯಾಂಪ್ ಮಾಡುತ್ತವೆ. ಇದನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಮಲೇರಿಯ ಅಥವಾ ಕಾಲರ ಯಾವುದಾದರೂ ಬಂದರೆ ಹೆಲ್ತ್ ಡಿಪಾರ್ಟ್‌ಮೆಂಟ್‌ನವರು ಅಲ್ಲಿ ಕ್ಯಾಂಪ್ ಹಾಕಿ ಯಾರು ಸಿಕ್ಕಿದರೆ ಅವರಿಗೆ ಚುಚ್ಚುತ್ತಾರೆ.

ಅವರು ಶ್ರದ್ಧೆಯಿಂದ ಕೆಲಸ ಮಾಡಬೇಕು. ಏನೇನು ಶಕ್ತಿ ಇದೆಯೋ, ಏನೇನೆಲ್ಲ ರಿಸೋರ್ಸಸ್ ಇದೆಯೋ ಅದನ್ನು ಮೊಬಿಲೈಸ್ ಮಾಡಿಕೊಂಡು ಪ್ರತಿಯೊಂದು ಏರಿಯಾಕ್ಕೆ ಹೋಗಿ ಇಲಾಖೆಯ ಅಧಿಕಾರಿಗಳು ಕಂಟ್ರೋಲ್ ಮಾಡಿದರೆ ಕಾಲರಾ ಮುಂತಾದ ರೋಗಗಳು ಬೇರೆ ಕಡೆ ಸ್ಪ್ರೆಡ್ ಆಗುವುದು ತಪ್ಪಿಹೋಗುತ್ತದೆ. ರೋಗ ಬರುವುದಕ್ಕಿಂತ ಮುನ್ನ ಕ್ರಮ ತೆಗೆದುಕೊಳ್ಳದೇ ಕಾಲರ ಬಂದಾಗ ಓಡೋಡಿ ಹೋಗಿ, ರೋಗಿಗಳು ಮಲಗಿದ್ದರೂ ಬಿಡುವುದಿಲ್ಲ, ಅವರಿಗೆ ಚುಚ್ಚಿ ಕಳಿಸುತ್ತಾರೆ. ರೋಗ ಬಾರದ ಹಾಗೆ ಕ್ರಮವನ್ನು ತೆಗೆದು ಕೊಳ್ಳಬೇಕು. ನಿಮ್ಮ ಇಲಾಖೆ ಬೃಹದಾಕಾರವಾಗಿ ಬೆಳೆದು ಹೋಗಿ ಜವಾಬ್ದಾರಿ ಕಡಿಮೆಯಾಗಿದೆ. ಈ ಇಲಾಖೆಯಲ್ಲಿ ಗೊಬ್ಬರ ವಿತರಣೆ ಮಾಡುವವರು ಸ್ಪ್ರೇಪಂಪ್ಸ್ ಕೊಡುವವರು ಅವರ ಕೆಲಸವನ್ನು ಮಾಡುತ್ತಿದ್ದಾರೆ. ಇಲಾಖೆಯಲ್ಲೇ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಿದ್ದಾರೆ. ಇದರಲ್ಲೇ ಶೇಕಡ 10 ಭಾಗ ಪುಣ್ಯಾತ್ಮರು ಇರಬಹುದು. ಇನ್ನು 90 ಪರ್ಸೆಂಟ್ ಎಲ್ಲೋ ಕುಳಿತುಕೊಂಡು ಸುಳ್ಳು ಲೆಕ್ಕವನ್ನು ಬರೆಯುತ್ತಾರೆ. ರೋಡ್ ಪಕ್ಕದಲ್ಲಿ ಬೆಳೆ ಬೆಳೆದರೆ ಅಲ್ಲೇ ಬೋರ್ಡ್ ಹಾಕುತ್ತಾರೆ. ಅವರು ಶ್ರದ್ಧೆಯಿಂದ ಕೆಲಸ ಮಾಡಿದರೆ ಜನಗಳು ಯಾರು ದುಡಿಯುತ್ತಾರೆ ಅವರಿಗೆ ತಲೆಬಾಗುತ್ತಾರೆ ಶ್ರದ್ಧೆಯಿಂದ ಕೆಲಸಮಾಡುವ ಪ್ರವೃತ್ತಿಯನ್ನು ಬೆಳೆಸಬೇಕು. ಚೆನ್ನಾಗಿ ಕೆಲಸ ಮಾಡುವವರಿಗೆ ಪ್ರೊಮೋಷನ್ ಕೊಡಿ. ಕೆಲಸ ಮಾಡದೆ ಸುಳ್ಳು ಹೇಳುವವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡಿ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಕೃಷ್ಣರಾವ್ (ಗೌರೀಬಿದನೂರು).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಮಾನ್ಯ ವ್ಯವಸಾಯ ಮಂತ್ರಿಗಳು ಇಟ್ಟಿರತಕ್ಕ ಬೇಡಿಕೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಕೆಲವಾರು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೆ ನಮ್ಮ ಭಾರತದ ದೇಶ ವ್ಯವಸಾಯ ದಿಂದ ಇರತಕ್ಕ ದೇಶ. ಸುಮಾರು 70 ಪರ್ಸೆಂಟ್ ಜನ ವ್ಯವಸಾಯದ ಮೂಲಕಸಬಾಗಿರತಕ್ಕ ರಾಜ್ಯ. ಇಂತಹ ರಾಜ್ಯದಲ್ಲಿ, ವ್ಯವಸಾಯಕ್ಕೆ ಎಷ್ಟರಮಟ್ಟಿಗೆ ನಮ್ಮ ದೇಶದಲ್ಲಿ ಅಧ್ಯತೆ ಇದೆ, ನಮ್ಮ ದೇಶದ ಪರಿಸ್ಥಿತಿ ಏನು ಇದೆ ಎಂಬುದನ್ನು ನಾವು ಸ್ಥೂಲವಾಗಿ ವಿಚಾರ ಮಾಡ ಬೇಕಾದುದು ನಮ್ಮ ಕರ್ತವ್ಯ, ನಮ್ಮ ದೇಶವನ್ನು ಅಮೇರಿಕಾ ದೇಶಕ್ಕೆ ಹೋಲಿಸಿ ಕೊಂಡರೆ ಸುಮಾರು 7 ರಿಂದ 7 1/2 ಪರ್ಸೆಂಟ್ ಇರತಕ್ಕ ರಾಷ್ಟ್ರದಲ್ಲಿ ಅವರು ಬೇಕಾದಷ್ಟು ಬೆಳೆ ಬೆಳೆದು ಅವರು ತಿಂದು ಉಳಿದಿರತಕ್ಕಂಥಾದ್ದನ್ನು ಪ್ರಪಂಚದ ಇತರ ಭಾಗಗಳಿಗೆ ಕಳಿಸುವುದು ನಮಗೆಲ್ಲರಿಗೂ ತಿಳಿದಿರತಕ್ಕ ವಿಷಯವಾಗಿದೆ. ಇಂತಹ ಸಂದರ್ಭ ದಲ್ಲಿ ನಾವುಗಳು ಸುಮಾರು 20 ಪರ್ಸೆಂಟ್ ಇದ್ದುಕೊಂಡು ಕೂಡ ಬೇರೆ ರಾಷ್ಟ್ರಕ್ಕೆ ಹೋಲಿಸಿದಾಗ ಇಷ್ಟೊಂದು ಹಿಂದೆ ಇರುವುದಕ್ಕೆ ಕಾರಣ ಏನು ಎಂಬುದನ್ನು ಕೊನೆಯಪಕ್ಷ ಅಂಕಿ ಅಂಶಗಳಿಂದ ತಿಳಿದುಕೊಂಡರೆ ಸೆಲ್ಫ್ ಸಫಿಷಿಯೆಂಟ್ ಆಗುತ್ತದೆ. ಇಷ್ಟಾದರೆ ಸಾಲದು. ನೂರಕ್ಕೆ 70 ಜನ ಇದ್ದಂಥ ಸಂದರ್ಭದಲ್ಲಿ ಇತರ ರಾಷ್ಟ್ರಗಳಿಗೂ ಕೂಡ ಕಳಿಸತಕ್ಕಂಥ, ಬೇರೆ ಕಷ್ಟದಲ್ಲಿರ ತಕ್ಕ ದೇಶಗಳಿಗೆ ಕೂಡ ಕೊಡತಕ್ಕ ಶಕ್ತಿಯನ್ನು ಹೊಂದತಕ್ಕ ದೇಶ ಭಾರತದೇಶ ಆಗಬೇಕಾದರೆ ಸರ್ಕಾರ ಬಹಳ ಮಟ್ಟಿಗೆ ಹೆಚ್ಚಿನ ಸೌಕರ್ಯ ಮತ್ತು ಸಹಾಯವನ್ನು ವ್ಯವಸಾಯಕ್ಕೆ ಕೊಡ ತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ನಮ್ಮ ವ್ಯವಸಾಯ ಮಂತ್ರಿಯವರು ದೊಡ್ಡ ರೈತರ ಕುಟುಂಬದಲ್ಲಿ ಹುಟ್ಟಿ ಬೆಳೆದು ಮೊದಲಿನಿಂದಲೂ ವ್ಯವಸಾಯಗಾರರಾಗಿ ಬೆಳೆದು ಬಂದು ಇವತ್ತಿನದಿವಸ ಅದೇ ಖಾತೆಯಲ್ಲಿ ಇದ್ದು ನಮ್ಮ ಕರ್ನಾಟಕ ರಾಜ್ಯಕ್ಕೆ ಬಹಳ ಸೇವೆಯನ್ನು ಸಲ್ಲಿಸುವುದರಲ್ಲಿ ಸಂಶಯ ಇಲ್ಲ. ಆದರೆ ಅವರಿಗೆ ಅದಷ್ಟು ಶಕ್ತಿಯನ್ನು ಸರ್ಕಾರ ಕೂಡಬೇಕು. ಅದಷ್ಟು ಕುಮ್ಮಕ್ಕನ್ನು ಅವರಿಗೆ ಬದಗಿಸಿ ಕೊಡಬೇಕು. ಈಗ ರೈತನ ಪರಿಸ್ಥಿತಿ ಏನಾಗಿದೆ ಎಂದರೆ ರೈತನು ಬಡತನದ ಜೋಳಿಗೆಯಲ್ಲಿ ಇದ್ದಾನೆಯೇ ಹೊರತು ನಿಜವಾಗಿಯೂ ಅತನು ಮುಂದೆ ಬಂದಿಲ್ಲ. 10—15 ವರ್ಷಗಳ ಆವರೇಜ್ ತೆಗೆದುಕೊಂಡರೆ ವ್ಯವಸಾಯಗಾರರ ಪರಿಸ್ಥಿತಿ ಎಷ್ಟರಮಟ್ಟಿಗೆ ಇದೆ ಎಂದರೆ ಹಿಂದೆ 5 ಸಾವಿರ ರೂಪಾಯಿ ಸಾಲ ಇದ್ದವನು ಇವತ್ತಿನ ದಿವಸ 20 ಸಾವಿರ ರೂಪಾಯಿ ಸಾಲವನ್ನು ಹೊತ್ತಿದ್ದಾನೆ ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಏತಕ್ಕೆಂದರೆ ರೈತನ ಕಷ್ಟಗಳು ಏನೆಂಬುದು ರೈತನಾಗಿ ಹುಟ್ಟಿ ಬೆಳೆದಂಥಹವನಿಗೆ ಗೊತ್ತೇ ವಿನಹ ಬೇರೆಯವರಿಗೆ ಗೊತ್ತಾಗುವುದಿಲ್ಲ. ಕೇವಲ ಅಂಕಿ ಅಂಶಗಳಿಂದ ರೈತನನ್ನು ಅಳತೆ ಮಾಡುವುದಕ್ಕೆ ಸಾಧ್ಯ ಇಲ್ಲ. ಒಬ್ಬ ಸಾಮಾನ್ಯ ರೈತನ ಕುಟುಂಬದಲ್ಲಿ ಅವನಿಗೆ ಇರತಕ್ಕ ಪರಿಸ್ಥಿತಿ ಏನೆಂದರೆ ಒಂದು ವರ್ಷ ಮಳೆ ಹೋದ ಪಕ್ಷದಲ್ಲಿ ಪುನಃ ಆತನು ಮನುಷ್ಯನಾಗಬೇಕಾದರೆ 3 ವರ್ಷವಾದರೂ ಸುಧಾರಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಬೇರೆ ಉದ್ಯಮಗಳ ಹಾಗೆ ಇದರಲ್ಲಿ ಎಷ್ಟು ಲಾಭವನ್ನು ನಿರೀಕ್ಷಿಸುತ್ತಾರೋ ಅಷ್ಟೊಂದು ಲಾಭವನ್ನು ಈ ವ್ಯವಸಾಯದಲ್ಲಿ ನಿರೀಕ್ಷಿಸುವುದು ಸಾಧ್ಯ ಇಲ್ಲ. ಈ ವ್ಯವಸಾಯ ದಲ್ಲಿ ಒಂದು ವರ್ಷ ಲಾಭ ಸ್ವಲ್ಪಮಟ್ಟಿಗೆ ಬಂದರೆ ಇನ್ನೊಂದು ವರ್ಷ ಏರುಪೇರು ಆಗತಕ್ಕ ಪ್ರಸಂಗಗಳು ಅನೇಕ ಇವೆ. ಒಂದು ಬೆಳೆಯೂ ಸಂಪೂರ್ಣವಾಗಿ ಕೈಗೆ ಬರುತ್ತದೆ ಎನ್ನತಕ್ಕ ಭರವಸೆ ಇಲ್ಲ, ಮಳೆ ಇಲ್ಲದೆ ಬೆಳೆ ಹೋದರೂ ಹೋಯಿತು, ಕ್ರಿಮಿಕೀಟಗಳ ಹಾವಳಿಯಿಂದ ಬೆಳೆ ಕೆಟ್ಟುಹೋದರೂ ಹೋಯಿತು. ಅಥವಾ ಇನ್ನು ಇತರೇ ಕಾರಣಗಳಿಂದ ರೈತನು ತೊಂದರೆಗೆ ಈಡಾಗತಕ್ಕ ಸಂದರ್ಭ ಇದೆ. ಇದಕ್ಕಿಂತ ಹೆಚ್ಚಿಗೆ ಮಾರ್ಕೆಟ್‌ನಲ್ಲಿ ರೈತನು ಬೆಳೆದಂಥ ಬೆಳೆಗೆ ಸೆರಿಯಾದ ಬೆಲೆ ಸಿಕ್ಕುತ್ತಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ರೈತನ ಬದುಕು ಸಾಗುತ್ತಿರುವುದು ನಿಜವಾಗಿಯೂ ಕೂಡ ಬಹಳ ಶೋಚನೀಯ ಎಂದು ನಾನು ತಿಳಿದುಕೊಂಡಿದ್ದೇನೆ. ಇಂತಹ ಸಂಧರ್ಭದಲ್ಲಿ ವ್ಯವಸಾಯದ ಇಲಾಖೆಯವರು ಮುಖ್ಯವಾಗಿ ಮಾಡಬೇಕಾದ ಕೆಲಸ ಏನೆಂದರೆ ಅತಿ ಮುಖ್ಯವಾಗಿ ರೈತನಿಗೆ ಬೇಕಾಗಿರತಕ್ಕದ್ದು ಏನೆಂದರೆ ನೀರಿನ ಸೌಲಭ್ಯವನ್ನು ಒದಗಿಸುವುದು; ಎಲ್ಲಕ್ಕಿಂತಲೂ ಮುಖ್ಯವಾಗಿ ಬೇಕಾಗಿರತಕ್ಕ ನೀರಿನ ವ್ಯವಸ್ಥೆ ಇಲ್ಲದಿದ್ದರೆ ರೈತನು ಖಂಡಿತ ಗಿಯೂ ಅಭಿವೃದ್ಧಿಗೆ ಬರಲು ಸಾಧ್ಯ ಇಲ್ಲ. ನೀರಿನ ವ್ಯವಸ್ಥೆ ಎಷ್ಟರಮಟ್ಟಿಗೆ ಆಗಿದೆ ಎನ್ನುವ ವಿಷಯದ ಬಗ್ಗೆ ಈಗಾಗಲೇ ಪಿ.ಡಬ್ಲ್ಯು.ಡಿ ಬಜಟ್‌ನಲ್ಲಿ ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಇದು ನಾವು ಎಷ್ಟು ನಿರೀಕ್ಷೆ ಮಾಡಿದ್ದೇವೆಯೋ ಅಷ್ಟರಮಟ್ಟಿಗೆ ಆಗಿಲ್ಲ. ಬೇರೆ ರಾಷ್ಟ್ರಗಳನ್ನು ಮತ್ತು ನೆರೆಯ ರಾಜ್ಯಗಳನ್ನು ಹೋಲಿಸಿ ನೋಡಿದಾಗ, ಅಂದರೆ ಆಂಧ್ರಪ್ರದೇಶ, ತಮಿಳುನಾಡು ಇವು ಗಳನ್ನು ಹೋಲಿಸಿ ನೋಡಿದಾಗ ಕರ್ನಾಟಕ ರಾಜ್ಯ ಬಹಳ ಹಿಂದುಳಿದಿದೆ ಎಂದು ಸಂಕಟದಿಂದ ಹೇಳಬೇಕಾಗಿದೆ. ಅನೇಕ ಮೈನರ್ ಇರಿಗೇಷನ್ ಕೆಲಸ ಆಗುವವರೆಗೆ ಕೂಡ ಈ ವ್ಯವಸಾಯದ

ಅಭಿವೃದ್ಧಿ ಸಾಧ್ಯ ಇಲ್ಲ. ಮೈನರ್ ಇರಿಗೇಷನ್ ಕೆಲಸಗಳನ್ನು ಅತಿ ಜಾಗ್ರತೆಯಾಗಿ ತೆಗೆದುಕೊಳ್ಳಬೇಕು. ಮೈನರ್ ಇರಿಗೇಷನ್ ಕೆಲಸ ಆಗದೇ ಇದ್ದ ಪಕ್ಷದಲ್ಲಿ ವ್ಯವಸಾಯದ ಉತ್ಪತ್ತಿಯನ್ನು ಜಾಸ್ತಿ ಮಾಡುವುದಕ್ಕೆ ಸಾಧ್ಯ ಇಲ್ಲ. ಅದರ ಜೊತೆಗೆ ಹಿಂದೆ ತಾಲ್ಲೂಕು ಬೋರ್ಡ್‌ಗಳ ಮುಖಾಂತರ ಬೀಜ ಹಾಗೂ ಕ್ರಿಮಿನಾಶಕ ವಸ್ತುಗಳನ್ನು 50 ಪರ್ಸೆಂಟ್ ಇನ್‌ಸೆಂಟೀವ್ ಆಗಿ ರೈತರಿಗೆ ಕೊಡುತ್ತಿದ್ದರು. ಈಗ ಅದನ್ನು ತಪ್ಪಿಸಿದ್ದಾರೆ. ಅದನ್ನಾದರೂ ಕೂಡ ರೈತರಿಗೆ ಪ್ರೋತ್ಸಾಹ ಕೊಡುವುದಕ್ಕೋಸ್ಕರ ಕ್ರಿಮಿನಾಶಕ ವಸ್ತುಗಳಾದ ಸ್ಪ್ರೇಯರ್ಸ್ ಮತ್ತು ಡಸ್ಟರ್ಸ್‌ಗಳನ್ನು ಕೊಡಿಸಿಕೊಟ್ಟು ಆಗಾಗ ಬರತಕ್ಕ ಕಾಯಿಲೆಗಳನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಹಳ್ಳಿಗಳಲ್ಲಿ ಗ್ರಾಮಸೇವಕರ ಒಂದು ಸರ್ಕಲ್ ಮಾಡಿದ್ದಾರೆ ಅವರು ಹಳ್ಳಿಹಳ್ಳಿಗೆ ಹೋಗಿ ಎಷ್ಟರಮಟ್ಟಿಗೆ ಅವರು ಕೆಲಸ ಮಾಡುತ್ತಾರೆಯೋ, ಎಷ್ಟು ಕಡೆ ಕೆಲಸ ಸರಿಯಾಗಿ ಆಗುತ್ತಿದೆ, ಎಷ್ಟು ಕಡೆ ಡಸ್ಟರ್ಸ್ ಮತ್ತು ಸ್ಪ್ರೇಯರ್ಸ್‌ಗಳ ಉಪಯೋಗ ಆಗುತ್ತಿದೆ, ಎಷ್ಟು ಕಡೆ ರೈತರು ಕ್ರಿಮಿನಾಶಕ ವಸ್ತುಗಳನ್ನು ಉಪಯೋಗಿಸುತ್ತಿದ್ದಾರೆ, ಇವೆಲ್ಲವನ್ನೂ ಕೂಡ ಸಮರ್ಪಕವಾಗಿ ವಿಚಾರಣೆ ಮಾಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎನ್ನುವುದು ಏನಿದೆ ಅದರ ಮೂಲಕ ನಾವು ಎಷ್ಟು ಕೆಲಸವನ್ನು ನಿರೀಕ್ಷೆ ಮಾಡಬೇಕೋ ಅಷ್ಟು ಕೆಲಸವನ್ನು ನಿರೀಕ್ಷೆ ಮಾಡಬೇಕಾಗಿತ್ತು. ಅಲ್ಲಿ ಕೆಟ್ಟು ಹೋಗಿರತಕ್ಕ ಟ್ರಾಕ್ಟರ್ಸ್, ನಿಂತುಹೋಗಿರತಕ್ಕ ಬುಲ್ಡೋಜರ್‌ಗಳೇ ಜಾಸ್ತಿಯಾಗಿದೆ. ಇದನ್ನು ಆದಷ್ಟು ಜಾಗ್ರತೆ ರಿಪೇರಿ ಮಾಡಿ ಸಣ್ಣ ಸಣ್ಣ ರೈತರಿಗೆ ಕೊಟ್ಟು ಆ ಮೂಲಕ ವ್ಯವಸಾಯದ ಅಭಿವೃದ್ಧಿಯನ್ನು ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಬೇಕು. ಅವುಗಳು ಕೆಟ್ಟುಹೋಗಿ ವರ್ಷಗಳಾದರೂ ಕೂಡ ರಿಪೇರಿ ಆಗದೇ ಇರತಕ್ಕ ಸಂದರ್ಭ ಇದೆ. ಕೆಲವು ಟ್ರಾಕ್ಟರ್‌ಗಳನ್ನು ರೈತರಿಗೆ ಕೊಟ್ಟಿದ್ದಾರೆ. ರೈತರಿಗೆ ಕೊಟ್ಟಿರತಕ್ಕ ಟ್ರಾಕ್ಟರುಗಳನ್ನು ತೆಗೆದುಕೊಂಡು ಬಂದು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಆಫೀಸ್ ಮುಂದೆ ವರ್ಷಾನುಗಟ್ಟಲೆ ನಿಂತಿರತಕ್ಕ ನಿದರ್ಶನ ಇದೆ. ಆದಷ್ಟು ಜಾಗ್ರತೆ ಯಾವುದಾದರೂ ರೂಪದಲ್ಲಿ ಇದನ್ನು ಡಿಸ್‌ಪೋಸ್ ಮಾಡಿದರೆ ಒಳ್ಳೆಯದು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ವ್ಯವಸಾಯಕ್ಕೆ ಮುಖ್ಯವಾಗಿ ಬೇಕಾದುದು ಗೊಬ್ಬರ, ಕಾಂಪೋಸ್ಟ್ ಗೊಬ್ಬರ ಮಾಡುತ್ತೇವೆಂದು ಅನೇಕ ವಿಧವಾದ ಸೆಮಿನಾರ್‌ಗಳಲ್ಲಿ, ಬರೀ ಭಾಷಣಗಳಲ್ಲಿ ಕಾಂಪೋಸ್ಟ್ ಗೊಬ್ಬರ ನಿಂತಿದೆಯೇ ಹೊರತು, ಕಾಂಪೋಸ್ಟ್ ಗೊಬ್ಬರ ಆಗಲಿಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ಕೂಡ ಕಾಂಪೋಸ್ಟ್ ಗೊಬ್ಬರದ ವ್ಯವಸ್ಥೆ ಮಾಡಬೇಕು. 'ಆರ್ಟಿಫಿಷಿಯಲ್' ಗೊಬ್ಬರ ಒಂದಕ್ಕೆ 2—3 ಪಟ್ಟು ಬೆಲೆ ಜಾಸ್ತಿ ಆಯಿತು. 'ಆರ್ಟಿಫಿಷಿಯಲ್ ಮೆನ್ಯೂರ್' ಮಾಡಲಿಲ್ಲ. ಅದು ಬಹಳ ಕಷ್ಟವಾಗುತ್ತದೆ. ನಮ್ಮ ಹಿರಿಯರ ಕಾಲದಲ್ಲಿ ಯಾವರೀತಿ ಹೆಚ್ಚಿಗೆ ಕೊಟ್ಟಿರೆ ಗೊಬ್ಬರ ಉಪಯೋಗಿಸುತ್ತಿದ್ದರು, ಅದೇ ರೀತಿ ಕೊಟಿಗೆ ಗೊಬ್ಬರ ಉಪಯೋಗ ಮಾಡುವ ಕಡೆ ಹೊರಡಬೇಕು. ಈ ಬಗ್ಗೆ ಹೊರಡಬೇಕಾದರೆ, ವ್ಯವಸ್ಥೆ ಮಾಡಬೇಕಾದರೆ, ಕಟ್ಟುನಿಟ್ಟಾದ ನಿರ್ಬಂಧ ಹಾಕಬೇಕು. ಒಂದು ಕಾನೂನನ್ನು ತರಬೇಕು. ಪ್ರತಿಯೊಬ್ಬ ರೈತನು ಕಾಂಪೋಸ್ ಗೊಬ್ಬರ ಗುಣಿಯನ್ನು ಊರ ಮುಂದೆ ಮಾಡಬೇಕೆಂದು ಕಾನೂನು ತರಬೇಕು. ಇದಕ್ಕೋಸ್ಕರ ಅಮೆಂಡ್‌ಮೆಂಡ್ ಮಾಡಬೇಕು ಎಂದು ಸಂದರ್ಭದಲ್ಲಿ ಸೂಚಿಸುತ್ತೇನೆ. ಗ್ರಾಮದ ಪಕ್ಕದಲ್ಲಿ ಅಕ್ವಿಜಿಷನ್ ಪ್ರಶ್ನೆ ಬರುತ್ತದೆ. ನಾವು ಎಲ್ಲಿಗೆ ತೆಗೆದುಕೊಂಡು ಹೋಗುವುದಕ್ಕೆ ಆಗುತ್ತದೆ, ಬಹಳ ದೂರ ತೆಗೆದುಕೊಂಡು ಹೋಗಬಹುದು. ಹಾಗೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ತಾತನ ಕಾಲದಿಂದ ಇದೇ ರೀತಿ ಮಾಡುತ್ತಿದ್ದೇವೆ ಎನ್ನುವ ವಾಡಿಕೆ ಇದೆ. ಊರಪಕ್ಕದಲ್ಲಿ 2-3 ಎಕರೆಯನ್ನು ಗ್ರಾಮಕ್ಕೆ ಅನುಸಾರವಾಗಿ ಅಕ್ವೈರ್ ಮಾಡಿ ಕಾಂಪೋಸ್ಟ್ ಗೊಬ್ಬರವನ್ನು ಪ್ರತಿಯೊಬ್ಬರ ರೈತನು ಕಡ್ಡಾಯವಾಗಿ ಮಾಡುವಂತೆ ಈ ಸಂದರ್ಭದಲ್ಲಿ ಜಾರಿಗೆ ತರಬೇಕೆಂದು ಒತ್ತಾಯ ಮೂಲಕವಾಗಿ ತಿಳಿಸುತ್ತೇನೆ.

ಮಾನ್ಯ ಅಧ್ಯಕ್ಷರೇ ಕಷ್ಟದಲ್ಲಿರತಕ್ಕ ರೈತನಿಗೆ ಸಹಿಸಲಾರದಷ್ಟು ಹೊರೆ ಎಂದರೆ ಲೆವಿ ಮತ್ತು ವಾಟರ್‌ರೇಟ್. ನ್ಯಾಯವಾಗಿ ಬೆಳೆ ಆಗಿರುವ ಕಡೆ ಕೇಳಲಿ, ನೀರು ಇರುವ ಕಡೆ, ಎರಡು ಬೆಳೆ ಬೆಳೆದಿರುವ ಕಡೆ ಹಾಕಿ ಬೇಡ ಎಂದು ಹೇಳುವುದಿಲ್ಲ. ಆದರೆ ಕೋಲಾರದಂಥ ಜಿಲ್ಲೆಯಲ್ಲಿ, 16—20 ಇಂತು ಮಳೆ ಬರತಕ್ಕ ಜಿಲ್ಲೆಯಲ್ಲಿ, ಸಣ್ಣ ಸಣ್ಣ ಕೆರೆ ಇರತಕ್ಕ ಜಿಲ್ಲೆ, ಎರಡೂ ತಿಂಗಳು ನೀರು ಸಹ ನಿಲ್ಲದೇ ಇರತಕ್ಕ ಕೆರೆಗಳು, ಒಂದು ಬೆಳೆ ಪೂರ್ತಿ ಆಗದೇ ಇರತಕ್ಕ ಕೆರೆಗಳು ಅನೇಕ ಇವೆ, ಇಂಥ ಕಡೆ ವಾಟರ್ ರೇಟ್ ಹಾಕುವುದು ಬಹಳ ಅನ್ಯಾಯ ಅದನ್ನು ತಪ್ಪಿಸಬೇಕು. ಲೆವಿ ಮತ್ತು ವಾಟರ್ ರೇಟ್ ಎರಡನ್ನೂ ಅನುಕೂಲ ಇರುವ

ಕಡೆ ವಸೂಲಿ ಮಾಡಿ ಅದಕ್ಕೆ ಅಡ್ಡಿಬರುವುದಿಲ್ಲ. ಯಾವ ಅನುಕೂಲವೂ ಇಲ್ಲದೇ ಇರತಕ್ಕ ಕಡೆಗಳಲ್ಲಿ ಖಂಡಿತವಾಗಿ ಲೆವಿ ಮತ್ತು ವಾಟರ್ ರೇಟ್ ವಜಾ ಮಾಡಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ. ಎಲ್ಲಾ ಸಂಸ್ಥೆಗಳಲ್ಲೂ ಇವತ್ತಿನ ದಿವಸ ಬಾರ್‌ಬರ್‌ಷಾಪ್ ನಿಂದ ಹಿಡಿದು ಸ್ಕಾವೆಂಜರ್ಸ್ ಅಫಿಷಿಯಲ್ ಎಲ್ಲರಲ್ಲಿಯೂ ಸಂಘ ಸಂಸ್ಥೆಗಳು ಇವೆ. ರೈತರಲ್ಲಿ ಸಂಘ ಇಲ್ಲ, ಸಂಘ ಸಂಸ್ಥೆಗಳನ್ನು ಮಾಡುವುದಕ್ಕೆ ತಾವೇ ಒಂದು ಇನ್‌ಸೆಟೀವ್ ಮಾಡಿದರೂ ಕೂಡ ಒಳ್ಳೆಯದು, ನಮ್ಮ ಮೂಲಕ ಇಂಥ ಒಂದು ಸಂಘ ಬೆಳೆಯಲಿ ಎಂದು ಹೇಳಿ ತಾವು ಇದಕ್ಕೆ ಪ್ರಯತ್ನಪಡಬೇಕು. ರೈತರ ಕಷ್ಟಸುಖಗಳನ್ನು ಸರಿಯಾಗಿ ಅರಿತು ರೆಪ್ರಸೆಂಟ್ ಮಾಡತಕ್ಕ ಬಾಡಿ ಆಗಬೇಕು ಎಂದು ಈ ಸಂಧರ್ಭದಲ್ಲಿ ಅತಿ ವಿನಯವಾಗಿ ಬೇಡಿಕೊಳ್ಳುತ್ತೇನೆ.

ಡೈರಿ ವಿಷಯವಾಗಿ ನಾನು ಹೆಚ್ಚಿಗೆ ಹೇಳಬೇಕಾದುದು ಏನೂ ಇಲ್ಲ, ಗೌರಿಬಿದನೂರು ದೊಡ್ಡ ತಾಲ್ಲೂಕು, ಒಂದು ಚಿಲ್ಲಿಂಗ್ ಸೆಂಟರ್ ಮಾಡಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ. ಗೌರಿಬಿದನೂರು ತಾಲ್ಲೂಕಿನಲ್ಲಿ 500—600 ಟೊಬ್ಯಾಕೋ ಬ್ಯಾರನ್ಸ್ ಇದೆ, ವರ್ಜೀನಿಯಾ ತಯಾರುಮಾಡತಕ್ಕ ಗೌರಿಬಿದನೂರು ತಾಲ್ಲೂಕು. ಪರದೇಶದಲ್ಲಿ ಗೌರಿಬಿದನೂರು ಟೊಬ್ಯಾಕೋಗೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಹೊಗೆಸೊಪ್ಪು ಕಂಪ್ಲೀಟ ಆಗಿ ನಿಂತಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಏನು ಕಾರಣ, ಏತಕ್ಕೋಸ್ಕರ ಹೊಗೆ ಸೊಪ್ಪಿನ ಬೆಳೆ ಕೆಟ್ಟಿದೆ ಎಂದು ಸಂಬಂಧ ಪಟ್ಟ ತಜ್ಞರನ್ನು ಕರೆಸಿ, ಹೊಗೆಸೊಪ್ಪು ಬೆಳೆ ಉದ್ಧಾರ ಮಾಡಿ, ಸರಿಯಾಗಿ ಆಗತಕ್ಕ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಅತಿವಿನಯವಾಗಿ ಬೇಡಿಕೊಂಡು, ಮಾನ್ಯ ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಾನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂದಿಗಿ).—ಮಾನ್ಯ ಸಭಾಧ್ಯಕ್ಷರೇ, ನನ್ನ ಮೊದಲನೇ ಮಾನ್ಯ ಮುಖ್ಯಮಂತ್ರಿಗಳು ನನ್ನ ಭಾಷಣವನ್ನು ಲಕ್ಷ್ಯಕೊಟ್ಟು ಕೇಳಬೇಕು. ನಮ್ಮನ್ನು ನೋಡುವುದು ಲಗ್ನ ಸಮಾರಂಭದಲ್ಲಿ. ನನಗೆ ಒಂದು ಮಾತು ಮುಖ್ಯವಾಗಿ, ಕಾಂಗ್ರೆಸ್ ಶಬ್ದದ ಬಗ್ಗೆ (ಓ) ಇರಲಿ (ಆರ್) ಇರಲಿ ಓ ಕಾಂಗ್ರೆಸ್ಸಿನಲ್ಲಿ ಶಬ್ದದ ಭೇದ ಆಗುವುದಿಲ್ಲ. ಯಾರು ಗಾಂಧಿ ಕಾಲದಲ್ಲಿ ಈ ಸಂಸ್ಥೆಯಲ್ಲಿ ಬಂದಿದ್ದಾರೆ, ಈ ಶಬ್ದಕ್ಕೆ ಏನಾದರೂ ತುಚ್ಛೀಕರಣ ಮಾಡಿದರೆ ಬಹಳ ವೇದನೆಯಾಗುತ್ತದೆ. ಉಪಮೇ, ಉಪಮೇಯ ಕೊಡಬೇಕು. ಕಾಂಗ್ರೆಸ್ ಶಬ್ದದ ಮೇಲೆ ಉಪಮೇಯ ಉಪಮೆ ಕೊಡುವುದಕ್ಕೆ ಹೋಗಬೇಡಿ. ಮುಖ್ಯವಾಗಿ ವಕ್ಕಲುತನ ಖಾತೆ ಮೇಲೆ ಸರ್ಕಾರಕ್ಕೆ ಕೆಲವು ಅಂಶಗಳನ್ನು ಕೊಡಬೇಕಾಗಿದೆ. ವಕ್ಕಲುತನ ಮಂತ್ರಿಗಳನ್ನು ಅಭಿನಂದಿಸ ಬೇಕಾಗುತ್ತದೆ. ಅಭಿನಂದಿಸಬೇಕು ಎಂದರೆ, ಎಲ್ಲಾ ಕೆಲಸ ಒಳ್ಳೆಯದು ಮಾಡಿರಿ ಎಂದು ತಿಳಿದು ಕೊಳ್ಳುವುದಕ್ಕೆ ಕಾರಣ ಇಲ್ಲ, ಟೆಂಪೊರರಿಯಾಗಿ ಸ್ವಲ್ಪ ಅಭಿನಂಧಿಸುತ್ತೇನೆ. ನಮ್ಮ ಉತ್ತರ ಕರ್ನಾಟಕದಲ್ಲಿ ಗುಲಬರ್ಗಾ ಮತ್ತು ಬೆಳಗಾಂ ಎಂದು ಎರಡು ವಿಭಾಗ ಏನು ಇತ್ತು, ಅದನ್ನು ತಿಳಿದುಕೊಳ್ಳುವ ಸಲುವಾಗಿ ನಾಲ್ಕು ವಿಭಾಗಗಳನ್ನು ಮಾಡಿ ವರಲಕ್ಷ್ಮಿ ಬಗ್ಗೆ ಆಸ್ತೆ ವಹಿಸಿ ಪ್ರಯತ್ನ ಮಾಡಿದ್ದು. ಬಿಜಾಪುರ ಜಿಲ್ಲೆಯಲ್ಲಿ ಕಿಣಕಿ ಬಗ್ಗೆ ಅಗ್ರಿಕಲ್ಚರ್ ಮಿನಿಷ್ಟರ್‌ಗೆ ಹೇಳಿದ ಕೂಡಲೇ ವಿಚಾರ ಮಾಡಿ ಪ್ರಶ್ನೆ ಬಿಡಿಸಿದ್ದಾರೆ. ಸಹಾನುಭೂತಿಯಿಂದ ಹೇಳಿದ ಮಾತಿಗೆ ಆಭಾರಿಯಾಗಿದ್ದಾರೆ. ಸರ್ಕಾರದ ರಿಪೋರ್ಟ್ ಏನು ಇದೆ ಮುಖ್ಯವಾಗಿ ಹೇಳತಕ್ಕ ವಿಷಯವನ್ನು ಹೇಳುವುದರ ಕಡೆಗೆ ಹೋಗುತ್ತದೆ. ಮುಖ್ಯ ಮಂತ್ರಿಗಳು ಮತ್ತು ಸುಬ್ಬಯ್ಯ ಶೆಟ್ಟರೂ ಈ ಕಡೆ ಲಕ್ಷ್ಯ ಕೊಡಬೇಕು ನಾವು ಮಾತನಾಡಲಿಕ್ಕೆ ಒಂದು ಲಕ್ಷ ಜನರು ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ವಕೀಲರು ಕೋರ್ಟಿನಲ್ಲಿ ಆರ್ಗ್ಯುಮೆಂಟ್ ಮಾಡುವ ಕಾಲಕ್ಕೆ ಪ್ಲೀಡರ್ ಆರ್ಗುಮೆಂಟ್ ಮಾಡಿದರೆ ಬಿಜಾಪುರದಲ್ಲಿ ಉರ್ದು ಪೇಪರ್ ಓದುತ್ತಾರೆ.

ನಮ್ಮ ಭಾಷಣ ಹಾಗೆ ಆಗಬಾರದೆಂದು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ. ಅಸೆಂಬ್ಲಿ ನಡೆಯುವಾಗ ನಾನು ಹೆಚ್ಚಿಗೆ ಮಾತನಾಡುತ್ತಾ ಇರುವುದಿಲ್ಲ, ಸರ್ಕಾರವನ್ನು ಟೀಕಿಸುವುದಕ್ಕೆ ಬರುವುದಿಲ್ಲ ಎಂದು ಅಲ್ಲ, ಲೈಸೆನ್ಸ್ ವಿಚಾರ ಇದೆ ಅದು ಗೊತ್ತಿದೆ. ಸರ್ಕಾರ ಏನಾದರೂ ನಮಗೆ ಕಲ್ಯಾಣ ಮಾಡಬೇಕು ಅವರ ವಿರುದ್ಧ ಮಾತನಾಡಬಾರದು ಎಂದು ಇದ್ದೇವೆ. ರಾಥೋಡ್‌ರವರು ಲಕ್ಷ್ಯ ಕೊಟ್ಟು ಕೇಳಬೇಕು. ನಾವುಗಳು ಅಸೆಂಬ್ಲಿಗೆ ಬಂದು ಮೂರು ವರ್ಷ ಆಯಿತು, ಬಹಳ ಸಾರಿ ಮಾತನಾಡುತ್ತೇವೆ ಆದರಿಂದ ಪ್ರಯೋಜನವಾಗುವುದಿಲ್ಲ, ಮೂರು ವರ್ಷದಲ್ಲಿ ವಕ್ಕಲುತನ ಸಲುವಾಗಿ ಏನು ಮಾಡಿದ್ದೀರಿ ? ಆದನ್ನು ಸರ್ವೆ ಮಾಡಿ ಹೇಳಬೇಕು ಎಂದು ಅಪೇಕ್ಷೆಪಡುತ್ತೇನೆ. ಕೇವಲ ವಕ್ಕಲುತನ ಮಂತ್ರಿಗಳನ್ನು ಟೀಕಿಸುವುದರಿಂದಾಗಲೀ, ಸಣ್ಣಪುಟ್ಟ ಮಾತುಗಳನ್ನು ಹೇಳುವುದರಿಂದ ಪ್ರಯೋಜನ ಆಗುವುದಿಲ್ಲ. ಇವತ್ತು ನಿಮ್ಮನ್ನು ಬಿಟ್ಟು ನಮಗೆ ಬೇರೆ ಸರ್ಕಾರ ಇಲ್ಲ

ಅಸೆಂಬ್ಲಿ ಮುಗಿದು ಕೂಡಲೇ 9–11ರೊಳಗೆ ಪ್ರೋಗ್ರಾಂ ಹಾಕಿಕೊಂಡು ಮುಖ್ಯಮಂತ್ರಿಗಳು, ಅಗ್ರಿಕಲ್ಚರ್ ಮಿನಿಸ್ಟರ್, ಡೆವಲಪ್‌ಮೆಂಟ್ ಮಿನಿಸ್ಟರ್ ಎರಡು ದಿವಸ ಬಿಜಾಪುರ ಜಿಲ್ಲೆಯಲ್ಲಿ ಕಳೆಯಿರಿ. ಅಲ್ಲಿಯೂ ಬೇಕಾದಂಥ ಬಂಗಲೆಗಳು ಇವೆ. ಸರ್ಕಾರದ ಚೀಫ್ ಸೆಕ್ರೆಟರಿಯವರನ್ನೂ ಕರೆದುಕೊಂಡು ಬನ್ನಿ, ಎರಡು ದಿವಸ ಇದ್ದು ಸಮಸ್ಯೆಗಳನ್ನು ಚೆನ್ನಾಗಿ ತಿಳಿದುಕೊಂಡು ಬರಲಿ, ತಿಳಿದಿಲ್ಲ ಎಂದು ಚಾರ್ಜ ಇದೆ. ನಮ್ಮ ಮೇಲೆ ಸಾಕಷ್ಟು ಪ್ರೀತಿ ಇದ್ದರೂ ವಿಶ್ವಾಸದ ಮೇಲೆ ಪ್ರೀತಿ ಇಲ್ಲ, ತಿಳಿದುಕೊಂಡಿಲ್ಲ ನಾನು ಆ ಸ್ಟೇಟ್‌ಮೆಂಟ್ ಮಾಡಿ ತಿಳಿಸುತ್ತೇನೆ. ನಮಗೆ ಏನು ಮಾಡಲಿಕ್ಕೆ ಸಾಧ್ಯವಿದೆ, ಅದನ್ನು ಮಾಡಿರಿ, ಹಣದ ಕೊರತೆ ಇದೆಯೇ ಅದನ್ನು ಹೇಳಿರಿ, ನಾನು ಅಪ್ಪರ್ ಕೃಷ್ಣ ಮೇಲೆ ಮಾತನಾಡುವುದಿಲ್ಲ, ಮಲಪ್ರಭಾ ನಡೆದಿದೆ, ತುಂಗಾ ಭದ್ರಾ ಇದೆ.

6-00 P.M.

ಸರ್ಕಾರದವರು ಕೊಟ್ಟಿರುವ ವರದಿಯಲ್ಲಿ ಮುಂಗಾರು ಮಳೆ ಸಾಕಷ್ಟು ಬರದ ಕಾರಣ ಪೀಕು ಸರಿಯಾಗಿ ಬರಲಿಲ್ಲವೆಂದು ಹೇಳಿದ್ದಾರೆ. ಆದರೆ ದೈವೀ ಕೃಪೆಯಿಂದ ನಮ್ಮ ಭಾಗದಲ್ಲಿ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಮಳೆ ಸಾಕಷ್ಟು ಬಂದಿದ್ದರಿಂದ ಬಾವಿಗಳಲ್ಲಿ ನೀರು ಬಂದಿದೆ. ಆದರೆ ಹಿಂಗಾರು ಪೀಕು ಬಾರದ ಕಾರಣ ನಮ್ಮ ಭಾಗದಲ್ಲಿ ದುಷ್ಕಾಲ ಪರಿಸ್ಥಿತಿ ಬಂದಿದೆ. ಜೋಳ ನಮ್ಮಲ್ಲಿ ಸಿಗುತ್ತಿಲ್ಲ; ಈ ಕಾರಣದಿಂದ ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ನಮ್ಮ ಭಾಗದಲ್ಲಿರುವ ಬಾವಿಗಳನ್ನು ಸುಧಾರಣೆ ಮಾಡಿ ಅವುಗಳ ಮೂಲಕ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕು. ವರ್ಲ್ಡ್ ಬ್ಯಾಂಕ್ ಸ್ಕೀಮಿನಿಂದ ನಮ್ಮ ಸಿಂಧಗಿಗೆ ಅನುಕೂಲವಾಗುವುದಿಲ್ಲ ; ಅಪ್ಪರ್‌ಕೃಷ್ಣ ಯೋಜನೆ ಈಗಲೇ ಮುಗಿಯುವ ಸಂಭವವಿಲ್ಲ ; ಆದಕಾರಣ ಬಾವಿ ನೀರನ್ನೇ ನಾವು ಆಶ್ರಯ ಮಾಡಬೇಕಾಗಿದೆ. ಈಗ ನಮ್ಮಲ್ಲಿ ಯಾವ ಬೆಳೆಯನ್ನೂ ಬೆಳೆದಿಲ್ಲ ; ಈ ಕಾರಣದಿಂದ ಅಧಿಕಾರಿಗಳು ಬಂದು ಲೆವಿ ವಸೂಲಿ ಮಾಡುತ್ತಾರೆಂಬ ಭಯವೂ ಸಹ ನಮಗೆ ಇಲ್ಲ. ರೈತರು ತಕಾವಿ ಲೋನ್ ತೆಗೆದುಕೊಂಡಿದ್ದಾರೆ. ಆದರೆ ಅದನ್ನು ತೀರಿಸುವುದಕ್ಕೆ ಅವರಿಗೆ ಸಾಧ್ಯವಾಗಿಲ್ಲ ; ಸರ್ಕಾರದವರು ಆ ಸಾಲವನ್ನು ಬಡ್ಡಿಯಿಲ್ಲದೆ ವಸೂಲಿ ಮಾಡಬೇಕು. ಆಗ ನಾನೇ ನಿಂತು ಆ ಸಾಲವನ್ನು ವಸೂಲಿ ಮಾಡುತ್ತೇನೆ, ಹೊಲ ಮಾರಿ ಆ ಸಾಲ ತೀರಿಸಿ ಸಾಲದಿಂದ ಋಣಮುಕ್ತರಾಗಿ ಎಂದು ನಾನು ರೈತರಿಗೆ ಹೇಳುತ್ತೇನೆ. ಆದಕಾರಣ ಇದರ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. ಮಾನ್ಯ ರೆವಿನ್ಯೂ ಮಂತ್ರಿಗಳು ಅದು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಕೂಸಿಗೆ ಕುಡಿಯಲು ಹಾಲೇ ಇಲ್ಲ ಎಂದರೆ, ಅದು ಹಾಗೆಯೇ ಸಾಯಲಿ ಎಂದರೆ ಹೇಗೆ ? ಕೊಅಪರೇಟಿವ್ ಸೊಸೈಟಿಗಳಲ್ಲಿ ಸಾಲ ತೆಗೆದು ಕೊಂಡರೆ 20 ರಿಂದ 24 ಪರ್ಸೆಂಟ್ ಬಡ್ಡಿ ಹಾಕುತ್ತಾರೆ; ಆದರೂ ಸಹ ಕೆಲವು ರೈತರು ವಿದ್ಯುಚ್ಛಕ್ತಿ ಬರುತ್ತದೆಂದು ಕಿರ್ಲೋಸ್ಕರ ಪಂಪ್‌ಸೆಟ್ಟುಗಳನ್ನು ಹಾಕಿಸಿದ್ದಾರೆ. ಆದಕಾರಣ ನಾನು ಮಾನ್ಯ ಶ್ರೀಕಂಠಯ್ಯನವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಆ ಭಾಗಕ್ಕೆ ಜಾಗ್ರತೆ ವಿದ್ಯುಚ್ಛಕ್ತಿ ಒದಗಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಭೂಕಂದಾಯ ವಸೂಲಿ ಮಾಡಿ, ನಾನು ಬೇಡ ಎಂದು ಹೇಳುವುದಿಲ್ಲ ; ಅಧಿಕಾರಿಗಳಿಗೆ ಪಗಾರ ಕೊಡಬೇಕಾದರೆ ಸರ್ಕಾರಕ್ಕೆ ಹಣ ಬೇಕಾಗುತ್ತದೆ ಆದಕಾರಣ ಭೂಕಂದಾಯ ವಸೂಲಿ ಮಾಡಿ; ಆದರೆ ನಮ್ಮನ್ನು ಅನ್ನದ ತೊಂದರೆಯಿಂದ ಮಾತ್ರ ದೂರ ಮಾಡಿ. ಈ ಅಸೆಂಬ್ಲಿ ಮುಗಿದ ಮೇಲೆ 8 ಅಥವಾ 5 ದಿವಸಗಳು ಕಳೆದ ಮೇಲೆ ವ್ಯವಸಾಯ ಮಂತ್ರಿಗಳು, ಮಾನ್ಯ ಮುಖ್ಯ ಮಂತ್ರಿಗಳು, ಮತ್ತು ಒಕ್ಕಲುತನಕ್ಕೆ ಸಂಬಂಧಪಟ್ಟ ಇತರೇ ಮಂತ್ರಿಗಳು ಮತ್ತು ಅಧಿಕಾರಿಗಳು ನಮ್ಮ ಭಾಗಕ್ಕೆ ಬಂದು ಎರಡು ದಿವಸಗಳ ಕಾಲ ಅಲ್ಲಿಯೇ ಇದ್ದು, ಬಾವಿ ನೀರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬಹುದು, ವ್ಯವಸಾಯ ಕ್ಷೇತ್ರದಲ್ಲಿ ಯಾವ ರೀತಿ ಮುಂದೆ ಬರಬೇಕು ಎಂಬ ಬಗ್ಗೆ ಸಲಹೆಗಳನ್ನು ಕೊಡಿ. ಎಂ. ಎಲ್. ಎ. ಗಳಿಗೆ ಬಸ್ ಪಾಸ್ ಇರುವುದರಿಂದ ಎಲ್ಲ ಪಾರ್ಟಿಯ ಮುಖಂಡರು ಮತ್ತು ನಮ್ಮ ವಿರೋಧಪಕ್ಷದ ನಾಯಕರೂ ಸಹ ಆ ಸಮಯದಲ್ಲಿ ಅಲ್ಲಿಗೆ ಬಂದು ಸಲಹೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ನಾನು ಅಲ್ಲಿಗೆ ಖಚಿತ ಬರುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ತಾವು ಬಂದು ಎರಡು ದಿವಸ ಅಲ್ಲಿಯೇ ಇರಬೇಕು ; ಒಂದೆರಡು ತಾಸು ಇದ್ದರೆ ನಮ್ಮ ಅಹಾರದ ಸಮಸ್ಯೆ ಬಗೆಹರಿಯುವುದಿಲ್ಲ ; ಮಾನ್ಯ ದೇವೇಗೌಡರು ಎಲ್ಲ ವಿಷಯಗಳ ಮೇಲೂ ಮಾತನಾಡುತ್ತಾರೆ ; ಆದರೆ ನಾನು ವ್ಯವಸಾಯದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಆದಕಾರಣ ಅಲ್ಲಿಯ ರೈತರ ಕಷ್ಟವನ್ನು ತಾವು ತಿಳಿದು ಕೊಳ್ಳಬೇಕು. ಇಂದು ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಎಂಬ ಭೇದ ಇಲ್ಲದೆ ಮಂತ್ರಿ ಸ್ಥಾನಕ್ಕೆ ಬರಬೇಕೆಂದು

ಹೋರಾಟ ಮಾಡುತ್ತಾರೆ ; ಆದರೆ ನಮ್ಮ ಇಂಡಿ ಮತ್ತು ಸಿಂದಿಗಿಯ ಸಮಸ್ಯೆಯನ್ನು ತಿಳಿದುಕೊಳ್ಳುವುದಕ್ಕೆ ಯಾರೂ ಸಹ ಮುಂದೆ ಬರುತ್ತಿಲ್ಲ ; ನಮಗೆ ಇಂದು ಕನ್ನಡ ಶಾಲೆಗಳ ಅವಶ್ಯಕತೆ ಇಲ್ಲ ; ಪೋಲೀಸಿರ ಉಪಯೋಗ ನಮಗೆ ಬೇಕಾಗಿಲ್ಲ ; ನಮಗಿರುವುದು ಅನ್ನದ ಸಮಸ್ಯೆ ಒಂದೇ ; ಆದಕ್ಕೆ ಏನಾದರು ಒಂದು ದಾರಿ ತೋರಿಸಿ ಕೊಡಿ ; ಇಲ್ಲವೇ ನಮ್ಮ ಜನರಿಗೆ ಸಾಯುವಷ್ಟು ವಿಷವನ್ನು ಒದಗಿಸಲು ಸಪ್ಲಿಮೆಂಟರಿ ಡಿಮ್ಯಾಂಡ್ ನಲ್ಲಿ ಹಣ ಒದಗಿಸಿ. ಈಗಿನ ಮುಖ್ಯಮಂತ್ರಿಗಳನ್ನು ಆ ಸ್ಥಾನದಿಂದ ತಗೆಯಬೇಕೆಂದು ನಾವು ಮನಸ್ಸು ಮಾಡಿದೆವು. ಆದರೆ ಅವರು ಆ ಸ್ಥಾನದಲ್ಲಿ ಭದ್ರವಾಗಿ ಕುಳಿತಿದ್ದಾರೆ. ಇರಲಿ ; ಬೇಕಾದಷ್ಟು ದಿವಸ ಇರಲಿ ; ಆದರೆ ಅವರಿಗೆ ನಮ್ಮ ಬಗ್ಗೆ ಕನಿಕರ ಇಲ್ಲದಿದ್ದರೆ ಏನು ಮಾಡುವುದು ? ಅವರು ನಮ್ಮ ಬಗ್ಗೆ ಕನಿಕರ ಇಟ್ಟುಕೊಂಡು ಅಸೆಂಬ್ಲಿ ಮುಗಿದ ನಂತರ ಅಲ್ಲಿಗೆ ಬಂದು ಎರಡು ದಿವಸ ಇದ್ದು ಅಲ್ಲಿಯ ಸಮಸ್ಯೆಗಳನ್ನು ತಿಳಿದುಕೊಂಡು ಒಂದು ಪರಿಹಾರ ಸೂಚಿಸಬೇಕೆಂದು ತಮ್ಮಲ್ಲಿ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ಇದು ನನ್ನ ಮಿನಿಮಮ್ ಚಾಲೆಂಜ್; ತಾವು ನಮ್ಮ ಊರಿಗೆ ಬಂದು ಮೊಲೆಯಲ್ಲಿ ಹಾಲಿದ್ದರೆ ಕುಡಿಸಿ, ಇಲ್ಲದಿದ್ದರೆ ಮೊಲೆಗೆ ಹಾಲನ್ನು ತಂದು ಹಾಕಿ ಎಂದು ಹೇಳಿ ನನ್ನ ಮಾತನ್ನು ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ನಂಜೇಗೌಡ (ಗಂಡಸಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪಶುಪಾಲನ ಇಲಾಖಾ ಮಂತ್ರಿಗಳು ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳಿಗೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಒಂದೆರಡು ಸೂಚನೆಗಳನ್ನು ಹೇಳಬಯಸುತ್ತೇನೆ. ಮಾನ್ಯ ಶ್ರೀ ರಾಮೇಗೌಡ ಅವರು ಹೇಳುತ್ತಾ, ರಾಷ್ಟ್ರದ ಮತ್ತು ರಾಜ್ಯದ ಬೆನ್ನೆಲುಬು ಆದ ರೈತರ ಮತ್ತು ಬಡವರ್ಗದ ಹಾಗೂ ಅಮೃತಮಹಲ್ ಕಾವಲಿನ ಅಭಿವೃದ್ಧಿಯನ್ನು ಕಡೆಗಣಿಸಿರತಕ್ಕದ್ದನ್ನು ಬಹಳ ತೀವ್ರವಾಗಿ ಆಕ್ಷೇಪಿಸಿದ್ದಾರೆ. ಅದು ಸತ್ಯ. ನಾನು, ಕಳೆದ ಮೂರು ವರ್ಷಗಳಿಂದ ಸತತವಾಗಿ ಮಾನ್ಯ ಪಶುಪಾಲನೆ ಇಲಾಖಾ ಮಂತ್ರಿಗಳನ್ನು ಈ ನಮ್ಮ ರಾಜ್ಯದಲ್ಲಿ ವಿಪುಲವಾಗಿರತಕ್ಕ ಅವಕಾಶಗಳನ್ನು ಒದಗಿಸಿಕೊಂಡು ಹಳ್ಳಿಗಾಡಿನ ದನಗಳ ಅಭಿವೃದ್ಧಿಗಾಗಿ ಒಂದು ಫಾರಂ ಮಾಡಬೇಕೆಂದು ಬೇಡಿಕೆಯನ್ನು ಮುಂದೆ ಇಟ್ಟರೂ ಕೂಡ ಆ ಬಗ್ಗೆ ಸರಕಾರ ತಾತ್ಸಾರದಿಂದ ಇರತಕ್ಕದ್ದು ಸರಿಯಲ್ಲ. ಅದುದರಿಂದ, ಇದರ ಬಗ್ಗೆ ಯೋಚನೆ ಮಾಡಿ, ದನಗಳ ಅಭಿವೃದ್ಧಿ ಆಗುವ ರೀತಿಯಲ್ಲಿ ರೈತರ ಬೇಡಿಕೆಗಳನ್ನು ಪೂರೈಸತಕ್ಕ ರೀತಿಯಲ್ಲಿ ದನಗಳ ಅಭಿವೃದ್ಧಿ ಆಗಬೇಕಾದರೆ, ಹಳ್ಳಿಗಾಡಿನ ಅಭಿವೃಬ್ಧಿ ಕ್ಷೇತ್ರ ವಿಸ್ತಾರವಾಗಬೇಕು. ಆದುದರಿಂದ, ಈ ಬಗ್ಗೆ ಈಗಲಾದರೂ ತುರ್ತು ಗಮನಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಸರಕಾರದಲ್ಲಿ ಸುಮಾರು 50—60 ಸಾವಿರ ವಿಸ್ತಾರವಾಗಿರತಕ್ಕ ಮತ್ತು ಅತಿ ಉತ್ಕೃಷ್ಟವಾಗಿರತಕ್ಕ ಜಮೀನು ವಶದಲ್ಲಿದೆ. ಆದರೆ ಆಡಳಿತ ಏನಾಗಿದೆ ಎಂದರೆ, ಇವತ್ತಿನ ದಿವಸ ಖಾಸಗೀ ಕ್ಯಾಟ್ಲ್ ಬ್ರೀಡರ್ಸ್‌ಗೆ ಕೊಟ್ಟಿರತಕ್ಕ ಜಮೀನಿನಲ್ಲಿ ಸುಮಾರು ಎಪ್ಪತ್ತೈದು ಭಾಗದಷ್ಟು ಅನಧಿಕೃತವಾಗಿ ಸಾಗುವಳಿ ಆಗುತ್ತಾ ಇದೆ, ಹೀಗೆ 5—6 ವರ್ಷಗಳಿಂದ ಸಾಗುವಳಿ ಮಾಡುತ್ತಾ ಇದ್ದರೂ ಕೂಡ ಸರಕಾರದವರು ಇವತ್ತಿನವರಿಗೂ ಅವರನ್ನು ಬಿಡಿಸಿ, ಆದರಿಂದ ಸದುಪಯೋಗ ಮಾಡಿಕೊಳ್ಳತಕ್ಕ ಕಡೆ ಏಕೆ ಉದಾಸೀನದಿಂದ ಇದ್ದೀರಿ ಎಂದು ನಾನು ಸರಕಾರದವರಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಹಿಂದೆ, 1—2 ಎಕರೆಗಳು ಹೆಚ್ಚು ಮಾಡಿದಂಥ ಸಂದರ್ಭದಲ್ಲಿ ಅಂಥವರಿಗೆ ಪ್ರಾಸಿಕ್ಯೂಷನ್ ಕ್ರಮಗಳನ್ನು ತೆಗೆದುಕೊಂಡು, ಅವರು ಆದನ್ನು ಕೂಡಲೇ ಬಿಡುಗಡೆ ಮಾಡುವಂಥ ಕ್ರಮ ಕಟ್ಟುನಿಟ್ಟಾಗಿ ನಡೆಯುತ್ತಿತ್ತು. ಅದರೆ, ಇವತ್ತಿನ ದಿವಸ, ಏನಾಗಿದೆ ಎಂದರೆ, ಹೆಚ್ಚಾಗಿ ಕಾವಲುಗಳ ವಿಚಾರಗಳನ್ನೇ ತಿಳಿದುಕೊಳ್ಳದೇ ಇರತಕ್ಕಂಥ ಒಂದು ಉದಾಸೀನ, ಭಾವನೆ ಇರುವುದು ಸರಿಯಾದುದಲಲ್ಲ ; ದಯವಿಟ್ಟು ಇದನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಕೆಲವಾರು ಕಡೆಗಳಲ್ಲಿ ಕಾವಲು ಜಮೀನನ್ನು 100—120 ಜನ ಕಾವಲುಗಾರರು ರಕ್ಷಣೆ ಮಾಡುತ್ತಾ ಇದ್ದಾರೆ. ಆದರೆ, ವಂಶಪಾರಂಪರ್ಯವಾಗಿ, ಈ ಕಾವಲನ್ನು ಅಲ್ಲಿನ ರೈತರು ನಿರ್ವಹಣೆ ಮಾಡುತ್ತಾ ಇದ್ದರೂ ಕೂಡ ಕೇವಲ 30 ಎಕರೆ ಜಮೀನನ್ನು ದನಗಳು ಮೇಯುವುದಕ್ಕೆ ಕೊಟ್ಟಿದ್ದಾರೆ. ಆದರಲ್ಲಿ ನಾಲ್ಕು ಎಕರೆ ಜಮೀನೊಳಗೆ ಸಾಗುವಳಿ ಮಾಡಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಟ್ಟಿದ್ದಾರೆ. ನಾವು ಈಗ ಒಂದು ಪ್ರಗತಿಪರವಾದ ಕಾನೂನನ್ನು ತರತಕ್ಕ ಸಂದರ್ಭದಲ್ಲಿ, ಈ ಕಾವಲುದಾರರ ಮೇಲೆ ಸಣ್ಣ ಸಣ್ಣ ಅರೋಪ ಮಾಡಿ ಅವರನ್ನು ತೆಗೆದು ಮನೆಗೆ ಕಳುಹಿಸತಕ್ಕ ನಿರ್ದಯ ನೀತಿ ಇವತ್ತಿನ ದಿವಸ ಈ ಇಲಾಖೆಯಲ್ಲಿ ಇದೆ. ಆ ರೀತಿ ಆಗಬಾರದು ಎಂದು ಹೇಳುತ್ತೇನೆ. ಅನೇಕ ವರ್ಷಗಳಿಂದ ಕಾವಲುಗಾರರು ಈ ಕಾವಲುಗಳ ಉಸ್ತುವಾರಿ ನೋಡಿಕೊಂಡು ಬಂದಿರತಕ್ಕ ಇವರನ್ನು ಈ ಒಂದು ಕ್ರಮದಿಂದ ರಕ್ಷಣೆ ದೊರೆಯಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಅವರು ಉತ್ತಿರತಕ್ಕ ಜಮೀನನ್ನು ಸರಕಾರದವರು ಮಂಜೂರು ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಇವತ್ತು 60 ಸಾವಿರ ಎಕರೆ ಜಮೀನು ಇರತಕ್ಕ ಅಮೃತಮಹಲ್ ಇಲಾಖೆ, ದನಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ತಾವು ಕೊಟ್ಟಿರತಕ್ಕ ಉತ್ತರದಲ್ಲಿ ನೋಡಿದರೆ ಎರಡು ಸಾವಿರ ದನಗಳನ್ನು ಮೀರಿ ಏರಿದಂತೆ ಪರಿಸ್ಥಿತಿ ಕಂಡುಬರುತ್ತಾ ಇಲ್ಲ. ತಮ್ಮ ಇಲಾಖೆಯಲ್ಲಿ, ಈ ದನಗಳಿಗಾಗಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡುತ್ತಾ ಇದ್ದೀರಿ. ಈ ಅಮೃತಮಹಲ್ ದನಗಳನ್ನು ಮಾರುವುದರಿಂದ ಎರಡು ಲಕ್ಷ ರೂಪಾಯಿಗಳು ಬರುತ್ತವೆ. ಒಂದು ಜೊತೆ ಕರುವಿನ ಬೆಲೆ 50 ರೂಪಾಯಿ ಇದುದು ಈಗ ಅದೇ ಒಂದು ಜೊತೆ ಕರುಗಳಿಗೆ ಐದು ಸಾವಿರ ರೂಪಾಯಿಯಷ್ಟು ಏರಿದೆ. ಇದರಿಂದಲೇ ವೇದ್ಯವಾಗುತ್ತದೆ—ಇವತ್ತಿನ ದಿವಸ ಅಮೃತಮಹಲ್ ಜಾತಿಯ ತಳಿಗಳಿಗೆ ರೈತಬಾಂಧವರಲ್ಲಿ ಎಷ್ಟು ಬೇಡಿಕೆ ಇದೆ ಎಂಬುದು. ಒಂದೂವರೆ ವರ್ಷದ ಕರುವಿಗೆ ಇಷ್ಟು ಬೆಲೆ ಕೊಡತಕ್ಕ ಕಾಲದಲ್ಲಿ ಅದರ ಪೂರ್ಣತೆ ಏನು ಇದೆ ಎಂಬುದನ್ನು ಸರಕಾರ ಅರ್ಥ ಮಾಡಿಕೊಂಡು, ಇನ್ನು ಮುಂದಾದರೂ ಅತಿ ಹೆಚ್ಚಿನ ನಿರುಪಯುಕ್ತವಾಗಿರತಕ್ಕ ಕಾವಲುಗಳನ್ನು ಉಪಯೋಗಿಸಿಕೊಂಡು ಈ ರಾಸುಗಳನ್ನು ಹೆಚ್ಚು ಮಾಡುವುದಕ್ಕೆ ಗಮನ ಕೊಡಬೇಕೆಂದು ತಮ್ಮಲ್ಲಿ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಅಯ್ಯನಾಗರಿ ಕಾವಲ್ ಮತ್ತು ಇನ್ನೂ ಇತರ ಅನೇಕ ಕಾವಲುಗಳನ್ನು ಕೆಲವು ಪ್ರಭಾವಶಾಲಿ ಜನಗಳು ಅನಧಿಕೃತವಾಗಿ ಸಾಗುವಳಿ ಮಾಡುತ್ತಾ ಇದ್ದಾರೆ. ಇದರ ಬಗ್ಗೆ ಈ ಇಲಾಖೆಯ ಅಧಿಕಾರಿಗಳಾಗಲೀ, ಸಂಬಂಧಪಟ್ಟ ಮಂತ್ರಿಗಳಾಗಲೀ, ಆ ಸ್ಥಳಕ್ಕೆ ಭೇಟಿ ಮಾಡಿ ನೋಡಿದರೆ, ಅದರ ಪೂರ್ಣ ವಿವರ ಗೊತ್ತಾಗುತ್ತದೆ. ಕಳೆದ ಮೂರು ವರ್ಷಗಳಿಂದ ಆ ಕಡೆಗೆ ಹೆಚ್ಚು ಗಮನ ಕೊಟ್ಟು ಇದನ್ನು ತಿಳಿದುಕೊಳ್ಳತಕ್ಕ ಪ್ರಯತ್ನ ಮಾಡಿದರೂ ಕೂಡ, ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಇನ್ನೂ ಇದರ ಬಗ್ಗೆ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಎಂದು ಆಕ್ಷೇಪಣೆಯನ್ನು ಮಾಡಬೇಕಾಗುತ್ತದೆ. ತಾವು ಇನ್ನುಮುಂದೆ ಈ ಬೇಸಿಗೆ ಕಾವಲುಗಳ ಬಗ್ಗೆ ಕಟ್ಟುನಿಟ್ಟಾಗಿ ವ್ಯವಹರಿಸಬೇಕಾಗಿದೆ. ಈ ಕಾವಲುಗಳನ್ನು ಅಮೃತಮಹಲ್ ದನಗಳಿಗೆ ದೊರಕಿಸಿಕೊಡದೇ ಹೋದರೆ, ಅವುಗಳನ್ನು ಸಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಂದೆ, ಈ ದನಗಳನ್ನು ಅಭಿವೃದ್ಧಿ ಮಾಡಬೇಕೆಂಬ ದೃಷ್ಟಿಯಿಂದ, ಎರಡು ಮೂರು ಸಾರಿ ಆ ದನಗಳ ಪರಿಸ್ಥಿತಿಯನ್ನು ನೋಡತಕ್ಕ ಒಂದು ಪದ್ಧತಿ ಇದ್ದು ಇವತ್ತಿನ ದಿವಸ ಅದಕ್ಕೆ ತಿಲಾಂಜಲಿಯನ್ನು ಇಟ್ಟಿದ್ದಾರೆ; ಇದು ಸರಿಯಲ್ಲ ಎಂದು ಹೇಳುತ್ತೇನೆ. ಆದುದರಿಂದ ಇಲಾಖಾ ಅಧಿಕಾರಿಗಳು ಇನ್ನು ಮುಂದೆ ದನಗಳ ಬಗ್ಗೆ ತಾತ್ಸಾರ ಮಾಡದೆ, ಪ್ರತೀ ಮೂರು ತಿಂಗಳಿಗೆ ಒಂದು ಸಾರಿ ಹೋಗಿ ಆ ದನಗಳನ್ನು ನೋಡಿ, ಅವುಗಳ ಕಂಡೀಷನ್ಸ್ ಏನಿದೆ, ಮತ್ತು ಅವುಗಳ ಕರುಗಳನ್ನು ಸಾಕುವ ಬಗ್ಗೆ ಸೂಕ್ತವಾದ ಎಚ್ಚರಿಕೆ ಮತ್ತು ಸಲಹೆಗಳನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತಿನ ದಿವಸ ಏನಾಗಿದೆ ಎಂದರೆ, ಅಮೃತಮಹಲ್ ದನಗಳಿಗೆ ಅಷ್ಟೊಂದು ಬೇಡಿಕೆ ಇದ್ದರೂ ಕೂಡ, ಹಳ್ಳಿಗಾಡಿನ ದನಗಳಿಗೆ ಅಷ್ಟೊಂದು ಬೇಡಿಕೆ ಇದ್ದರೂ ಕೂಡ; ಖಾಸಗೀಯವರೂ ಕೂಡ ಇವತ್ತಿನ ದಿವಸ ದನಗಳ ಪರಿಪಾಲನೆಯನ್ನು ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ ಅಮೃತಮಹಲ್ ತಳಿಯ ಒಂದು ಹಸುವನ್ನು ಸಾಕಬೇಕಾದರೆ, ಸರಕಾರದವರು 250 ಖರ್ಚು ಮಾಡುತ್ತಾ ಇದ್ದಾರೆ. ಇದೇ ರೀತಿ ಖಾಸಗೀ ಪಶುಪಾಲಕರೂ ಕೂಡ ಈ ಅಮೃತಮಹಲ್ ತಳಿಯ ಹಸುಗಳನ್ನು ಸಾಕುತ್ತಾ ಇದ್ದಾರೆ. ನಾನು ಕೇಳುತ್ತೇನೆ ಸರಕಾರದವರು ಅವರಿಗೆ ಏನು ಅನುಕೂಲ ಕಲ್ಪಿಸಿಕೊಟ್ಟಿದ್ದಾರೆ ಎಂದು. ಈ ದನಗಳಿಗೆ ಹೆಚ್ಚಿನ ಬೇಡಿಕೆ ಇರತಕ್ಕ ಕಾಲದಲ್ಲಿ, ಖಾಸಗೀ ಪಶುಪಾಲಕರಿಗೂ ಕೂಡ ಯಾವುದಾದರೊಂದು ಯೋಜನೆಯಿಂದ 250 ರೂಪಾಯಿ ಖರ್ಚು ಬರತಕ್ಕ ರೀತಿಯಲ್ಲಿ ಕಾವಲುಗಳಲ್ಲಿರತಕ್ಕ ಹುಲ್ಲನ್ನು ಮೇಯಿಸುವುದಕ್ಕೆ ಕೊಡುವುದರ ಮೂಲಕ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಈಗ ಖಾಸಗೀಯವರು ಮಾಡುತ್ತಾ ಇರತಕ್ಕ ಸ್ತುತ್ಯ ಕಾರ್ಯವನ್ನು ಗಮನಿಸಿ, ಅವರ ಸಹಕಾರವನ್ನು ಪಡೆದು, ರೈತ ಬಾಂಧವರಿಗೆ ತನ್ಮೂಲಕ ಹೆಚ್ಚು ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಬಿನ್ನವಿಸಿಕೊಳ್ಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ತಾವು ಹಾಸನಕ್ಕೆ ಬಂದಿದ್ದ ಕಾಲದಲ್ಲಿ, ಹಾಸನದಲ್ಲಿ ಹೆಚ್ಚುವರಿ ಇರತಕ್ಕ ಅಮೃತಮಹಲ್ ಕಾವಲನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಭರವಸೆ ಕೊಟ್ಟಿದ್ದೀರಿ. ಆದರೆ, ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಈಗ ಅದನ್ನೆಲ್ಲಾ ಖಾಸಗೀಯವರು ಅಕ್ರಮವಾಗಿ ಸಾಗುವಳಿ ಮಾಡುತ್ತಾ ಇದ್ದಾರೆ. ಇವತ್ತಿನ ದಿವಸ, ಅಕ್ರಮವಾಗಿ ಇಂತಹ ಉತ್ಕೃಷ್ಟವಾದ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವವರಿಂದ ಸದರಿ ಜಮೀನುಗಳನ್ನು ಬಿಡಿಸಿಕೊಳ್ಳುವುದಕ್ಕೆ ಸರಕಾರಕ್ಕೆ ಶಕ್ತಿ ಇಲ್ಲವಾಗಿದೆ. ಹೀಗಾದರೆ, ದೇಶಕ್ಕೆ ಅನುಕೂಲವಾಗತಕ್ಕ ಯೋಜನೆಗಳನ್ನು ಜಾರಿಗೆ ಕೊಡುವ ಬಗೆಯಾದರೂ ಹೇಗೆ ಎಂಬ ಕಳವಳವನ್ನು ನಾನು ಇವತ್ತಿನ ದಿವಸ ವ್ಯಕ್ತಪಡಿಸಬೇಕಾಗಿದೆ. ಆದ್ದರಿಂದ, ತಾವು ಭರವಸೆ ಕೊಟ್ಟಿದ್ದರಂತೆ, ಹಾಸನದ ಸಮೀ

ಪದಲ್ಲಿರತಕ್ಕ ಹೊಸಹಳ್ಳಿಮಾನಿ ಕಾವಲನ್ನು ಕಾರೇರಿಂಗ್ ಸೆಂಟರ್ ಮಾಡಲು ತಕ್ಷಣ ಪ್ರಯತ್ನ
ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಅದರೆ ನನಗೆ ಬಂದಿರತಕ್ಕ ವರ್ತಮಾನದಿಂದ ಹೆಚ್ಚುವರಿ ಕಾವಲನ್ನು ಖಾಸಗಿಯವರಿಗೆ
ಒಂದು ರೀತಿಯಲ್ಲಿ ಯಾವುದೋ ಒಂದು ಯೋಜನೆಯನ್ನು ಇಟ್ಟುಕೊಂಡು ಹಿಂದುಗಡೆಯಿಂದ
ಯಾವುದೋ ಒಂದು ಶಿಫಾರಿಸ್ಸಿನ ಮೇಲೆ ಆ ಕಾವಲನ್ನು ಖಾಸಗಿಯವರು ಪಡೆಯತಕ್ಕ ಸಲಹೆ
ಸರ್ಕಾರದ ಮುಂದೆ ಇದೆ ಎಂದು ತಿಳಿದು ಬಂದಿದೆ. ಇದು ಸರಿಯಲ್ಲ. ಉತ್ಕೃಷ್ಟ ಕಾವಲನ್ನು
ಯಾವುದಾದರೂ ಒಂದು ರೀತಿಯಲ್ಲಿ ಖಾಸಗಿಯವರಿಗೆ ಕೊಡತಕ್ಕ ಸೀಮಿತ ಇದ್ದರೆ ಸರ್ಕಾರದವರು
ಉತ್ತರ ಕೊಡುವಾಗ ಈ ತರಹ ಯೋಜನೆ ಯಾವುದು ಇದ್ದರೆ, ಆ ಜಮೀನನ್ನು ಖಾಸಗಿಯವರಿಗೆ
ಯಾವರೀತಿಯಲ್ಲಿ ಕೊಡುತ್ತಾರೆ ಎನ್ನುವುದನ್ನು ಕೂಡ ತಾವು ಘೋಷಣೆ ಮಾಡಬೇಕು, ಹಾಗೆ
ಏನಾದರೂ ಜಮೀನುಗಳನ್ನು ಖಾಸಗಿಯವರಿಗೆ ಕೊಡದೇ ಇದ್ದರೆ ಬುದ್ಧಿವಂತರು, ತಜ್ಞರು ಅಂತಹ
ಕಡೆಗಳಲ್ಲಿ ಆಸಕ್ತಿ ವಹಿಸಿದರೆ ಉಪಯೋಗ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು
ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನೊಂದು ವಿಷಯ ಏನೆಂದರೆ ದನಗಳ
ಆಸ್ಪತ್ರೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈಗ ಎಲ್ಲಾ ಇಲಾಖೆಗಳಲ್ಲೂ
ಕೂಡ ವಾಹನ ಸೌಕರ್ಯ ಕೊಟ್ಟಿದ್ದೀರಿ, ದನಗಳ ಪಶುಸಂಪತ್ತನ್ನು ರಕ್ಷಣೆ ಮಾಡಬೇಕು ಎನ್ನ
ತಕ್ಕಂಥಾದ್ದು ಬಹಳ ಪ್ರಾಮುಖ್ಯವಾದ ವಿಚಾರ. ಇವೊತ್ತು ಮಿಶ್ರತಳಿ ಹಸು ತೆಗೆದುಕೊಂಡರೆ
ಎರಡೂ ಮೂರೂ ಸಾವಿರ ರೂಪಾಯಿ ಆಗುತ್ತದೆ, ಹೋರಿಗಳ ಬೆಲೆ ಐದಾರು ಸಾವಿರ ರೂಪಾಯಿ
ಆಗುತ್ತದೆ. ಇಂತಹ ಪರಿಸ್ಥಿತಿ ಇರುವ ಕಾಲದಲ್ಲಿ ಎಮರ್ಜೆನ್ಸಿ ಔಷಧೋಪಚಾರ ಮಾಡಿಸಬೇಕು
ಎಂದರೆ ರೈತರಿಗೆ ಡಾಕ್ಟರುಗಳು ಬಂದು ಔಷಧೋಪಚಾರ ಮಾಡುವುದರೊಳಗೆ ದನಗಳಿಗೆ
ಅಪಾಯವಾಗತಕ್ಕ ಸಂಭವ ಇದೆ. ಆದುದರಿಂದ ಪ್ರತಿ ತಾಲ್ಲೋಕುಗಳಲ್ಲಿ ಇರತಕ್ಕ ವೆಟರ್‌ನರಿ
ಡಾಕ್ಟರುಗಳಿಗೆ ಯಾವುದಾದರೂ ರೀತಿಯಲ್ಲಿ ವಾಹನ ಸೌಕರ್ಯ ಕಲ್ಪಿಸಿಕೊಡಬೇಕು ಅವರ ಉಪ
ಯೋಗ ರೈತರಿಗೆ ಆಗತಕ್ಕ ವ್ಯವಸ್ಥೆಯನ್ನು ಮಾಡತಕ್ಕ ಸಲಹೆಯನ್ನು ವಿಚಾರ ಮಾಡಬೇಕು ಎಂದು
ತಮ್ಮಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಕೊನೆಯದಾಗಿ ದೇಶದಲ್ಲಿ ಆ ಉತ್ಕೃಷ್ಟವಾಗಿರತಕ್ಕ
ಅಮೃತ್‌ಮಹಲ್ ಮತ್ತಿತರ ಕಾವಲುಗಳಲ್ಲಿ ಸಾಗುವಳಿ ಮಾಡುತ್ತಾ ಇರುವವರಿಗೆ ಹಾಗೆ ಬಿಡ
ಬೇಡಿ. ಅದನ್ನು ಪೂರ್ಣವಾಗಿ ಉಪಯೋಗಿಸಿಕೊಂಡು ಒಂದು ಹಳ್ಳಿಗರ ಸೆಂಟರ್ ಮಾಡುವ ರೀತಿ
ಯಲ್ಲಿ ಇರಬೇಕು. ಮತ್ತೆ ಅಮೃತ್‌ಮಹಲ್ ದನಗಳನ್ನು ಹೆಚ್ಚು ಮಾಡಬೇಕು, ಖಾಸಗಿಯವರಲ್ಲಿ
ಇರತಕ್ಕ ಅಮೃತ್‌ಮಹಲ್ ತಳಿ ದನಗಳನ್ನು ಖರೀದಿಗೆ ತೆಗೆದುಕೊಂಡು ದನಗಳನ್ನು ಹೆಚ್ಚು ಮಾಡ
ಬೇಕು. ಮತ್ತೆ ಇಲಾಖೆ ಕಾವಲುಗಳು ಎಲ್ಲೆಲ್ಲಿ ಇವೆ ಅಂತಹ ಕಡೆಗಳಲ್ಲಿ ವೆಟರ್‌ನರಿ ಡಿಸ್‌ಪೆನ್‌ಸರಿ
ಓಪನ್ ಮಾಡಬೇಕು. ಹಿಂದೆ ನಾನು ಚೆನಕೆರೆಗೆ ವೆಟರ್‌ನರಿ ಡಿಸ್‌ಪೆನ್‌ಸರಿ ಕೊಡಬೇಕು ಎಂದು
ಹೇಳಿದ್ದೆ. ಅಲ್ಲಿ ಒಂದು ಸಾರಿ ದನಗಳಿಗೆ ಚಪ್ಪೆ ರೋಗ ಬಂದು ಸುಮಾರು 10-15 ಕರುಗಳು
ಒಂದೇ ದಿವಸದಲ್ಲಿ ಸತ್ತು ಹೋದವು. ಈಗ ಎಲ್ಲೆಲ್ಲಿ ಕಾವಲುಗಳು ಇದೆ ಆ ಭಾಗಗಳಲ್ಲಿ ವೆಟರ್‌ನರಿ
ಡಿಸ್‌ಪೆನ್‌ಸರಿ ಮಾಡಿದರೆ ಬಹಳ ಅನುಕೂಲವಾಗುತ್ತದೆ ಎಂದು ಹೇಳಿ, ಇದುವರೆಗೆ ಮಾತನಾಡಲು
ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ನಂಜಪ್ಪ (ಅರಸೀಕೆರೆ).—ಮಾನ್ಯ ಉಪಾಧ್ಯಕ್ಷರೇ, ವ್ಯವಸಾಯ ಸಚಿವರು ಈ
ದಿವಸ 31 ಕೋಟಿ 25 ಲಕ್ಷ 80 ಸಾವಿರ ರೂಪಾಯಿಗಳ ಡಿಮ್ಯಾಂಡಿನ ಒಪ್ಪಿಗೆ ಬಗ್ಗೆ ಈ ಸಭೆಯ
ಮುಂದೆ ಇಟ್ಟಿದ್ದಾರೆ. ಇವೊತ್ತಿನ ದಿವಸ ನೂರಕ್ಕೆ ಎಂಭತ್ತು ಜನ ವ್ಯವಸಾಯದಲ್ಲಿ ತೊಡಗಿರತಕ್ಕ
ನಮ್ಮ ರಾಜ್ಯದಲ್ಲಿ ಈ ಒಂದು ವ್ಯವಸಾಯದ ಕ್ಷೇತ್ರ ಏನು ಇದೆ ಅದು ಬಹಳ ಮುಖ್ಯವಾದುದು.
ಎಲ್ಲಿಯವರೆಗೆ ವ್ಯವಸಾಯ ಕ್ಷೇತ್ರ ಅಭಿವೃದ್ಧಿಯಾಗಿ ವ್ಯವಸಾಯದ ಬಗ್ಗೆ ಹೆಚ್ಚು ಉತ್ಪಾದನೆ ಜಾಸ್ತಿ
ಯಾಗುವುದಿಲ್ಲ; ಅಲ್ಲಿಯವರೆಗೆ ನಮ್ಮ ದೇಶ ಸಂಪದ್ಭರಿತ ದೇಶವಾಗುವುದಿಲ್ಲ. ದೇಶದ ಜನಜೀವನ
ಉತ್ತಮ ಮಟ್ಟಕ್ಕೆ ಬರುವುದಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದು ಕಳೆದ 25 ವರ್ಷಗಳಿಂದ ಮಾಡಿರ
ತಕ್ಕ ಪ್ರಯತ್ನ ಆ ಕ್ಷೇತ್ರದ ಬಗ್ಗೆ ಅಷ್ಟೊಂದು ಫಲದಾಯಕವಾಗಿಲ್ಲ ಎಂದು ನಾನು ಹೇಳುತ್ತೇನೆ.
ಇದು ಒಂದು ವರ್ಷ ಅಥವಾ ಒಂದು ತಿಂಗಳು ಅಥವಾ ಒಂದು ದಿವಸದಲ್ಲಿ ಮಾಡಬೇಕಾಂಥ ಸಾಧನೆ
ಯಲ್ಲ. ಇದಕ್ಕೆ ಸತತವಾಗಿ ಪ್ರಯತ್ನ ಮಾಡಬೇಕು, ಹಿಂದಿನವರು ಮಾಡಲಿಲ್ಲ, ಮುಂದಿನವರು ಮಾಡ
ಲಿಲ್ಲ ಎಂದು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ ಇದರ ಬಗ್ಗೆ ಹೆಚ್ಚುಗಮನ ಕೊಟ್ಟಿರ
ಲಿಲ್ಲವಾದ್ದರಿಂದ ಆಹಾರೋತ್ಪಾದನೆ ಕಡಿಮೆಯಾಗುವುದಕ್ಕೆ ಕಾರಣ ಆಯಿತು ಎಂದು ಈ ಸಂದರ್ಭ
ದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದನ್ನು ಹಾಗೆ ಬಿಟ್ಟು ಇದರ ಬಗ್ಗೆ ಯೋಚನೆ ಮಾಡದೇ
ಹೋದರೆ ಇನ್ನು ಉತ್ಕಟ ಪರಿಸ್ಥಿತಿ ದೇಶಕ್ಕೆ ಒದಗುತ್ತದೆ, ಆ ಒಂದು ದೃಷ್ಟಿಯಿಂದ ಹೆಚ್ಚು

ಗಮನವನ್ನು ಕೊಡಬೇಕೆಂದು ಕೆಲವು ಸಲಹೆಗಳನ್ನು ಈ ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಪಡುತ್ತೇನೆ. ನಮ್ಮ ಕರ್ನಾಟಕದಲ್ಲಿ 89 ಪರ್‌ಸೆಂಟ್ ಒಣಭೂಮಿ ವ್ಯವಸಾಯ ಇದೆ, ಕೇವಲ 11 ಪರ್‌ಸೆಂಟ್ ಮಾತ್ರ ನೀರಾವರಿ ಸಾಗುವಳಿ ಮಾಡತಕ್ಕ ಭೂಮಿ ಇದೆ. ಎಲ್ಲಿಯವರಿಗೆ 89 ಪರ್‌ಸೆಂಟ್ ಇರುವುದನ್ನು 60 ಪರ್‌ಸೆಂಟಿಗೆ ಇಳಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. 11 ಪರ್‌ಸೆಂಟ್ ಇರತಕ್ಕ ನೀರಾವರಿ ಯೋಜನೆಯನ್ನು ಕನಿಷ್ಟಪಕ್ಷ 35 ಪರ್‌ಸೆಂಟ್‌ಗೆ ಏರಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ ನಮ್ಮ ಅಭಿವೃದ್ಧಿ ಸಾಧನೆಯಾಗುವುದಿಲ್ಲ. ವ್ಯವಸಾಯ ಪದಾರ್ಥಗಳು ಹೆಚ್ಚಿಗೆ ಉತ್ಪತ್ತಿಯಾಗದ ಹೊರತು ನಮ್ಮ ದೇಶದಲ್ಲಿ ಆಹಾರ ಕೊರತೆ ಇದ್ದೇ ಇರುತ್ತದೆ. ಈ ಒಂದು ದೃಷ್ಟಿಯಿಂದ ಸರ್ಕಾರದ ಗಮನಕ್ಕೆ ತರತಕ್ಕದ್ದು ಏನು ಎಂದರೆ ನೀವು ಮಾಡತಕ್ಕ ಯೋಜನೆ ಏನು ಇದೆ ಅದು ರಚನಾತ್ಮಕವಾದ ಯೋಜನೆ ಆಗಬೇಕು. ಈಗ ಇದಕ್ಕಾಗಿ ಮುವತ್ತೆರಡುಕಾಲು ಕೋಟಿ ರೂಪಾಯಿಗಳನ್ನು ಅಳವಡಿಸಿದ್ದೀರಿ, ಇದನ್ನು ನೋಡಿದರೆ ನಿಜವಾಗಿ 32 ಕೋಟಿ ರೂಪಾಯಿಗಳು ಯಾವುದಕ್ಕೂ ಸಾಲದು ಕೊನೇಪಕ್ಷ ನೂರು ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ಅಂದರೆ ಸತತವಾಗಿ ಹತ್ತು ವರ್ಷ ಖರ್ಚು ಮಾಡುವ ಮುಖಾಂತರ ನಾನು ಹೇಳಿದ ಹಾಗೆ ಒಣ ಭೂಮಿ ಪರ್‌ಸೆಂಟೇಜ್ ಕಡಿಮೆ ಮಾಡಿ ನೀರಾವರಿ ಆಗತಕ್ಕ 11 ಪರ್‌ಸೆಂಟ್‌ನ್ನು 40-45 ಪರ್‌ಸೆಂಟಿಗೆ ಏರಿಸುವುದಕ್ಕೆ ಪ್ರಯತ್ನ ಮಾಡಿದರೆ ಅನುಕೂಲವಾಗುತ್ತದೆ. ಈಗ ಸಧ್ಯಕ್ಕೆ ಪ್ರತಿಯೊಂದು ತಾಲ್ಲೋಕಿನಲ್ಲೂ ಕೂಡ ಭೂಮಿಯನ್ನು ಪರೀಕ್ಷೆ ಮಾಡಿ ವ್ಯವಸಾಯದ ಭೂಮಿಯಲ್ಲಿ ವ್ಯವಸಾಯದ ಬೆಳೆಯನ್ನು ಇಡುವುದಕ್ಕೆ, ಎಷ್ಟು ಪ್ರಮಾಣದ ಗೊಬ್ಬರ ಹಾಕಬೇಕು ಎನ್ನುವ ಬಗ್ಗೆ ತಾಲ್ಲೋಕಿನಲ್ಲಿ ಇರತಕ್ಕ ವ್ಯವಸಾಯದ ಅಧಿಕಾರಿಗಳು ಪ್ರತಿ ವರ್ಷ ಕೂಡ ಒಂದು ಕ್ಯಾಲೆಂಡರ್ ತಯಾರು ಮಾಡಬೇಕು. ಗೊಬ್ಬರವನ್ನು ತಾವು ಕೊಡುತ್ತೀರಿ 1973-74, 1974-75ರಲ್ಲಿ ತಮ್ಮ ಘೋಷಣೆ ಏನು ಇತ್ತು ಎಂದರೆ ಹೆಚ್ಚು ಗೊಬ್ಬರ ಹಾಕಿ ಹೆಚ್ಚು ಬೆಳೆ ಬೆಳೆಯಿರಿ ಎನ್ನತಕ್ಕ ಘೋಷಣೆ ಇತ್ತು. 1974-75ರಲ್ಲಿ ಕಡಿಮೆ ಗೊಬ್ಬರ ಹಾಕಿ ಹೆಚ್ಚು ಬೆಳೆ ಬೆಳೆಯಿರಿ ಎನ್ನುವ ಘೋಷಣೆಯದ್ದು ತಕ್ಷಣ ಪ್ರಾರಂಭ ಮಾಡಿದಿರಿ. ಅದಕ್ಕೆ ಗೊಬ್ಬರ ಕೊಡುವುದು ಕಾರಣವಾಗುತ್ತದೆ. ಈಗ ಗೊಬ್ಬರದ ಅಭಾವ ಇಲ್ಲ ಎಂದು ಹೇಳುತ್ತೀರಾ. ಇನ್ನು ವ್ಯವಸಾಯ ಪ್ರಾರಂಭವಾಗಿಲ್ಲ, ಮಳೆ ಹಿಂಗಾರು ಮುಂಗಾರು ಬಂದಿಲ್ಲ. ವ್ಯವಸಾಯ ಪ್ರಾರಂಭವಾಗುವುದಕ್ಕೆ ಮುಂಚೆ ಯಾವುದು ಇರುವುದಿಲ್ಲ. ವ್ಯವಸಾಯ ಪ್ರಾರಂಭವಾದಮೇಲೆ ಗೊಬ್ಬರದ ವ್ಯಾಪಾರ ಮಾಯಾಬಜಾರ್ ಆಗುತ್ತದೆ ಎಂದು ಹೇಳಬಹುದು, ಸಾವಿರಾರು ಟನ್ ಇದ್ದಂಥ ಗೊಬ್ಬರ ವ್ಯವಸಾಯ ಪ್ರಾರಂಭವಾದ ಮೇಲೆ ಹತ್ತು ಚೀಲ ಸೊಸೈಟಿಗಳಲ್ಲಿ ಕಾಣುವುದಿಲ್ಲ. ಈ ಒಂದು ದೃಷ್ಟಿಯಿಂದ ಈಗಾಗಲೇ ಸಾಕಷ್ಟು ಗೊಬ್ಬರವನ್ನು ಸೊಸೈಟಿಗಳಲ್ಲಿ ಅಥವಾ ಇತರ ಏಜೆನ್ಸಿಗಳ ಹತ್ತಿರ ದಾಸ್ತಾನು ಇರುವ ಹಾಗೆ ಮಾಡಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ಒಣ ಬೇಸಾಯ ಮಾಡತಕ್ಕ ಪ್ರದೇಶದಲ್ಲಿ ಯಾವ ಯಾವ ಬೆಳೆಗೆ ರಾಗಿ ಬೆಳೆಗೆ, ಮತ್ತು ಜೋಳದ ಬೆಳೆಗೆ ಎಷ್ಟೆಷ್ಟು ಪ್ರಮಾಣದ ಯಾವ ಯಾವ ಗೊಬ್ಬರವನ್ನು ಕೊಡಬೇಕು ಎನ್ನುವುದನ್ನು ವ್ಯವಸಾಯದ ಪರಿಣತರನ್ನು ನಿಗದಿಮಾಡಿ ಕ್ಯಾಲೆಂಡರ್ ತಯಾರು ಮಾಡಿ, ಪ್ರತಿಯೊಬ್ಬ ರೈತನ ಮನೆಯಲ್ಲಿ ದೇವರ ಫೋಟೋ ಇಡುವಂತೆ ಇಡುವ ಹಾಗೆ ಪ್ರತಿಯೊಬ್ಬ ರೈತರಿಗೆ ಕೊಡಬೇಕು. ಆ ಕ್ಯಾಲೆಂಡರ್‌ನಲ್ಲಿ ರಾಗಿ ಬೆಳೆಗೆ ಎಷ್ಟು ಗೊಬ್ಬರ ಹಾಕಬೇಕು, ಜೋಳದ ಬೆಳೆಗೆ ಎಷ್ಟು ಗೊಬ್ಬರ ಹಾಕಬೇಕು, ಆ ಪ್ರಮಾಣ ಕ್ಯಾಲೆಂಡರ್‌ನಲ್ಲಿ ಇರಬೇಕು ಎಂದು ತಿಳಿಸುತ್ತೇನೆ 10 ಕೆ.ಜಿ. 20 ಕೆ.ಜಿ. ಹಾಕುವ ಕಡೆ 5 ಕೆ.ಜಿ. ಹಾಕ್ಬಿದರೆ ಉತ್ಪತ್ತಿ ಕಡಿಮೆಯಾಗುತ್ತದೆ, ಆದ್ದರಿಂದ ತಾಲ್ಲೋಕುಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಸೆಮಿನಾರ ಮಾಡಿ, ಕ್ಯಾಲೆಂಡರನ್ನು ತಯಾರು ಮಾಡುವುದಕ್ಕೆ ಪ್ರಯತ್ನಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ಈಗ ತಾಲ್ಲೋಕುಮಟ್ಟದಲ್ಲಿ ವ್ಯವಸಾಯ ಇಲಾಖೆ ಏನು ಇದೆ ಅದು ಸ್ವಲ್ಪ ಚುರುಕಾಗಿ ಕೆಲಸ ಮಾಡಬೇಕು, ಮತ್ತೆ ಗ್ರಾಮ ಸೇವಕರು ಅವರ ಕೆಲಸವನ್ನು ತೃಪ್ತಿಕರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈಗ 20-25 ಇಂಚು ಮಳೆಯಾಗುವ ಪ್ರದೇಶ ಎಲ್ಲಿ ಇದೆಯೋ ಅದನ್ನು ಸರ್ವೇ ಮಾಡಿ ಆ ಪ್ರದೇಶಗಳಲ್ಲಿ ವ್ಯವಸಾಯ ಉಪಯೋಗಕ್ಕೆ ಏನು ಆಗಬೇಕು ಅದರ ಬಗ್ಗೆ ತೆಗೆದುಕೊಳ್ಳಬೇಕಾಗಿದೆ, ಇಲ್ಲದೇ ಹೋದರೆ ಖಾಯಂ ಆದಂಥ ಬರಗಾಲ ಪ್ರದೇಶವಾಗುತ್ತದೆ. ಈಗ ದೊಡ್ಡ ನೀರಾವರಿ ಯೋಜನೆ ಮಾಡುವುದಕ್ಕೆ ನ್ಯಾಚುರಲ್ ಸೋರ್‌ಸಸ್ ಇಲ್ಲದೇ ಹೋದರೆ ಸಣ್ಣ ನೀರಾವರಿ ಮಾಡುವುದಕ್ಕೆ ಅವಕಾಶ ಇರುತ್ತದೆ ಅದರ ಬಗ್ಗೆ ಯೋಚನೆ ಮಾಡಬೇಕು. ಒಂದು ಉದಾಹರಣೆ ಹೇಳುವುದಾದರೆ ಅರಸೀಕೆರೆ ತಾಲ್ಲೂಕಿನಲ್ಲಿ 20-24 ಇಂಚು ಮಳೆ ಬೀಳುತ್ತದೆ, ಖಾಯಂ ಬರಗಾಲ ಇರುತ್ತದೆ. ಸರ್. ಎಂ ವಿಶ್ವೇಶ್ವರಯ್ಯನವರು ಇಂಜಿನಿಯರ್ ಆಗಿದ್ದಾಗ ಯಗಚಿ ಅಣೆಕಟ್ಟನ್ನು ಮಂಜೂರು ಮಾಡಿದ್ದು, ಇತ್ತೀಚೆಗೆ ಇದನ್ನು ಕೇಳಿದ್ದಕ್ಕೆ ಲೆವೆಲ್ ಪರ್‌ಮಿಟ್ ಮಾಡುವುದಿಲ್ಲ ಇದರಿಂದ ಹೆಚ್ಚಿನ ಲಾಭ ದೊರೆಯುವುದಿಲ್ಲ, ಹೆಚ್ಚಿಗೆ ಖರ್ಚಾಗುತ್ತದೆ ಎಂದು ಹೇಳಿದರು. ಇದನ್ನು ಪುನಃ ಸರ್ವೇ ಮಾಡಿಸಿ ಪುನರ್ ವಿಮರ್ಶೆ ಮಾಡಿಸಿ ಎಂದು ಹೇಳುತ್ತೇನೆ.

ಯಾಗಚಿ ಹೊಳೆ ಯೋಜನೆ ಬರುವ ಹಾಗೆ ಮಾಡದೇ ಹೋದರೆ ಅರಸೀಕೆರೆ ತಾಲ್ಲೋಕಿನಲ್ಲಿ ಖಾಯಂ ಬರಗಾಲ ಅನುಭವಿಸುತ್ತೇವೆ ಎಂದು ತಮ್ಮಲ್ಲಿ ನಿವೇದಿಸಿಕೊಳ್ಳುತ್ತೇನೆ. ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಪ್ರಾರ್ಥನೆ.

ಗೊಬ್ಬರದ ವಿಷಯದಲ್ಲಿ ಏನಾಗುತ್ತದೆ ಎಂದರೆ, ಸೊಸೈಟಿಯವರು ಗೊಬ್ಬರವನ್ನು ಕೊಡಬೇಕಾದರೆ ಹಳ್ಳಿಗಳಲ್ಲಿ ತೂಕಮಾಡಿ ಕೊಡತಕ್ಕ ಪದ್ಧತಿ ಇಲ್ಲ. ಹಾರ್ಬರ್‌ನಿಂದ ತೆಗೆದುಕೊಂಡು ಬಂದಿರುವುದನ್ನು ಹಾಗೆ ತೆಗೆದುಕೊಂಡು ಹೋಗಿ ಎಂದು ಸೊಸೈಟಿಯವರು ಹೇಳುತ್ತಾರೆ, ತೂಕ ಮಾಡಿ ಕೊಡುವುದಿಲ್ಲ. ಹಾಗೇ ತೆಗೆದು ಕೊಂಡು ಹೋದರೆ 4-5 ಕೆ.ಜಿ. ಕಡಿಮೆ ಬರುತ್ತದೆ. ಸೊಸೈಟಿಯವರಿಗೆ ತೂಕಮಾಡಿ ಕೊಡಿ ಎಂದು ಕೇಳಿದರೆ, ತೂಕಮಾಡಿ ಕೊಟ್ಟರೆ ನಮಗೆ ಲಾಸ್ ಆಗುತ್ತದೆ, ಹಾಗೇ ತೆಗೆದುಕೊಂಡು ಹೋಗಿ ಎಂದು ಹೇಳುತ್ತಾರೆ. ಇದರಿಂದ ರೈತನಿಗೆ ಹಣವೂ ಜಾಸ್ತಿಯಾಗುತ್ತದೆ, ಜೊತೆಗೆ ಗೊಬ್ಬರ 10 ಕೆ.ಜಿ. ಕಡಿಮೆ ಬಂದು ನಷ್ಟವೂ ಆಗುತ್ತದೆ. ಆದುದರಿಂದ ಹೋಲ್‌ಸೇಲ್‌ನಲ್ಲಾಗಲೀ ರಿಟೇಲ್‌ನಲ್ಲಾಗಲೀ ಗೊಬ್ಬರವನ್ನು ತೂಕಮಾಡಿಕೊಡತಕ್ಕ ಪದ್ಧತಿಯನ್ನು ತತ್‌ಕ್ಷಣ ಜಾರಿಗೆ ತರಬೇಕು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

6-30 P.M.

ಆ ಮೇಲೆ ರೈತ ಕಷ್ಟಪಟ್ಟು ಧಾನ್ಯವನ್ನು ಬೆಳೆಯುತ್ತಾನೆ, ಬೆಳೆದ ಮೇಲೆ ತಾವು ಲೆವಿಯನ್ನು ತೆಗೆದುಕೊಳ್ಳುತ್ತೀರಿ. ಲೆವಿ ತೆಗೆದುಕೊಂಡ ಮೇಲೆ ಉಳಿದ ಧವಸವನ್ನು ರೈತ ಸ್ವತಂತ್ರವಾಗಿ ಮಾರಾಟ ಮಾಡಿಕೊಳ್ಳುವುದಕ್ಕೆ ಅವನಿಗೆ ಅವಕಾಶ ಕೊಡಬೇಕು. ಅವನಿಗೆ ಸ್ವತಂತ್ರವಾಗಿ ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡದೇ ಹೋದರೆ ಅವನಲ್ಲಿ ಉತ್ಸಾಹ ಕಡಿಮೆಯಾಗುತ್ತದೆ, ಮುಂದೆ ಬೆಳೆ ಬೆಳೆಯುವುದಕ್ಕೆ ನಿರುತ್ಸಾಹ ಉಂಟಾಗುತ್ತದೆ. ಆದುದರಿಂದ ಇದನ್ನು ವಿಮರ್ಶೆ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಬೆಳೆಗಾರರಿಗೆ ಕೊಡತಕ್ಕ ಸಾಲದ ಬಗ್ಗೆ ಮಾತನಾಡುವುದಾದರೆ, ಡಿಸ್ಟ್ರಿಕ್ಟ್ ಬ್ಯಾಂಕ್ಸ್ ಮುಖಾಂತರ ಸಾಲ ಕೊಡುತ್ತಾರೆ. ಕಳೆದ ಎರಡು ವರ್ಷಗಳಿಂದ ಬಡ್ಡಿಯನ್ನು ಜಾಸ್ತಿಮಾಡಿದ್ದಾರೆ. ಸಣ್ಣ ಸಣ್ಣ ರೈತರಿಗೆ ವ್ಯವಸಾಯವೇ ಮುಖ್ಯ ಕಸುಬು. ದೊಡ್ಡ ದೊಡ್ಡವರು ಟ್ರ್ಯಾಕ್ಟರನ್ನು ತಂದು ಉಪಯೋಗಿಸಿಕೊಳ್ಳುತ್ತಾರೆ. ಆದರೆ ಸಣ್ಣ ರೈತರಿಗೆ ಎತ್ತುಗಳ ಬೆಲೆ ಜಾಸ್ತಿಯಾಗಿರುವುದರಿಂದ ಎತ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲ. ಇದರಿಂದ ವ್ಯವಸಾಯ ಮಾಡುವುದಕ್ಕೆ ತೊಡಕಾಗಿದೆ. ಎತ್ತಿನ ಸಾಲವನ್ನು ಹೆಚ್ಚಿಗೆ ಕೊಡುವುದಕ್ಕೆ ಜಿಲ್ಲಾ ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ಗೆ ಹಣವನ್ನು ಕೊಟ್ಟಿದ್ದಾರೆ. ಆದರೆ ಇವರು ಬಡ್ಡಿಯನ್ನು ಜಾಸ್ತಿ ಮಾಡಿದ್ದಾರೆ. ಆದುದರಿಂದ ತಕಾವಿ ಸಾಲಗಳ ಬಡ್ಡಿಯನ್ನು ಕಡಿಮೆಮಾಡಿ, ಸುಲಭ ದರದಲ್ಲಿ ಎತ್ತುಗಳನ್ನು ಒದಗಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಅನಂತರ ಗೋಮಾಳದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ, ನಗರಗಳಲ್ಲಿ ಮುನಿಸಿಪಾಲಿಟಿಗಳಲ್ಲಿ ನೀರು ವೇಸ್ಟಾಗಿ ಹೋಗುತ್ತಿದೆ. ನಗರಗಳಲ್ಲಿ ವೇಸ್ಟಾಗುತ್ತಿರುವ ಡ್ರೈನೇಜ್ ನೀರನ್ನು ಉಪಯೋಗಿಸಿಕೊಳ್ಳುವ ಮುಖಾಂತರ ಹುಲ್ಲನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕು.

ಇನ್ನು ರೈತ ಬೆಳೆದಂಥ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಕ್ಕುತ್ತಿಲ್ಲ. ಫಸಲು ಮಾರುಕಟ್ಟೆಗೆ ಹೆಚ್ಚಾಗಿ ಬಂದರೆ ಧಾರಣೆ ಕಡಿಮೆಯಾಗುತ್ತದೆ, ಕಡಿಮೆ ಬಂದಾಗ ಧಾರಣೆ ಹೆಚ್ಚಾಗುತ್ತದೆ. ಈ ರೀತಿ ಆಗತಕ್ಕಂಥ ಪರಿಸ್ಥಿತಿಯಲ್ಲಿ ರೈತನು ಬೆಳೆಯುವುದಕ್ಕೆ ಖರ್ಚು ಮಾಡತಕ್ಕ ಹಣಕ್ಕೆ ಮತ್ತು ಅವನು ಮಾಡಿದ ಕಷ್ಟಕ್ಕೆ ತಕ್ಕಂಥ ಪ್ರತಿಫಲ ದೊರಕುವ ಹಾಗೆ ಒಂದು ನಿರ್ದಿಷ್ಟ ಬೆಲೆಯನ್ನು ನಿಗದಿಮಾಡಬೇಕು. ಇಷ್ಟು ಬೆಳೆದರೆ ಇಷ್ಟು ಬೆಲೆ ಬರುತ್ತದೆ ಎನ್ನುವ ಗ್ಯಾರಂಟಿ ರೈತನಿಗೆ ಕೊಟ್ಟರೆ ಅವನಿಗೆ ಬೆಳೆಯುವುದಕ್ಕೆ ಉತ್ಸಾಹ ಇರುತ್ತದೆ, ತನ್ಮೂಲಕ ಅವರ ಅಭಿವೃದ್ಧಿಯಾಗುತ್ತದೆ. ಅದಕ್ಕೆ ವಿಮೆಯಾದರೂ ಮಾಡಿಸಿ ಬೆಲೆಯನ್ನು ನಿಗದಿ ಮಾಡತಕ್ಕ ಪದ್ಧತಿಯನ್ನು ಮಾಡಬೇಕು. ಮುಖ್ಯವಾಗಿ ನಾವು ಹಣ ಕೊಡುತ್ತೇವೆ. ಇದು ಒಂದು ಬಹಳ ಮುಖ್ಯವಾದಂಥ ಯೋಜನೆಯಾಗಿರುವುದರಿಂದ ವ್ಯವಸಾಯ ಮಂತ್ರಿಗಳು, ಸಣ್ಣ ನೀರಾವರಿ ಮಂತ್ರಿಗಳು, ದೊಡ್ಡ ನೀರಾವರಿ ಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಇರತಕ್ಕಂಥ ಒಂದು ಉಪಸಮಿತಿಯನ್ನು ಸರ್ಕಾರದ ಮಟ್ಟದಲ್ಲಿ ರಚನೆಮಾಡಿ, ಇದಕ್ಕೆ ತೀವ್ರವಾದ ಗಮನವನ್ನು ಕೊಡುವುದು ಅವಶ್ಯಕ ಎಂದು ಹೇಳಿ, ನನಗೆ ಮಾತನಾಡುವುದಕ್ಕೆ ಇಷ್ಟು ಕಾಲವನ್ನು ಕೊಟ್ಟಿದ್ದಕ್ಕಾಗಿ ಉಪಾಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ನಾನು ಇವತ್ತಿನ ದಿವಸ ವ್ಯವಸಾಯ ಮತ್ತು ಪಶುಸಂಗೋಪನಾ ಡಿಮ್ಯಾಂಡ್ ಮೇಲೆ ಮಾತನಾಡುತ್ತಾ ಕಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕೆಲವು ವಿಷಯಗಳನ್ನು ನಿವೇದಿಸಿಕೊಳ್ಳುತ್ತೇನೆ. ಈಗಾಗಲೇ ಮಾತನಾಡಿರತಕ್ಕ ಅನೇಕ ಸದಸ್ಯರುಗಳು ಮತ್ತು ಮಾನ್ಯ ಮಿತ್ರರು ಪಶುಸಂಗೋಪನೆ ಹಾಗೂ ವ್ಯವಸಾಯದ ಬಗ್ಗೆ ಮಾತನಾಡಿದ್ದಾರೆ. ಇದರೊಳಗೆ ಎಲ್ಲಾ ವಿಷಯಗಳು ಅಡಕವಾಗಿವೆ. ನಾನು ಹೇಳಬೇಕಾದರೂ ಕೂಡ ಅದೇ ವಿಷಯವನ್ನು ಹೇಳಬೇಕಾಗುತ್ತದೆ ಆದರೆ ನನ್ನ ಕ್ಷೇತ್ರದ ಪರಿಸ್ಥಿತಿಯನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರದೇ ಹೋದರೆ ಕರ್ತವ್ಯಲೋಪವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಕಲವು ಅಂಶಗಳನ್ನು ಹೇಳಬಯಸುತ್ತೇನೆ. ವ್ಯವಸಾಯ ಅತಿಮುಖ್ಯವಾದುದು. ನಮ್ಮ ಇಂಡಿಯಾ ದೇಶ ಪೂರ್ತಿ ವ್ಯವಸಾಯದ ಮೇಲೆ ವಲಂಬನೆಯಾಗಿರತಕ್ಕ ದೇಶ. ನೂರಕ್ಕೆ 95 ಜನ ವ್ಯವಸಾಯದಿಂದ ಜೀವನಮಾಡತಕ್ಕ ದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಉತ್ತೇಜನ ಇನ್ನೂ ನಮಗೆ ಸಿಕ್ಕುತ್ತಾ ಇಲ್ಲ. ಈಗ ಗೊಬ್ಬರದ ಬೆಲೆಯನ್ನು ನಾವು ಲೆಕ್ಕ ಹಾಕುವುದಾದರೆ ಕಳೆದ ಸಾರಿಗೂ, ಈ ಸಾರಿಗೂ ಒಂದಕ್ಕೆರಡರಷ್ಟು ಧಾರಣೆ ಏರಿದೆ. ಕಳೆದ ಮೀಟಿಂಗ್‌ನಲ್ಲಿ ನಮ್ಮ ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಗೊಬ್ಬರ ಯಥೇಚ್ಛವಾಗಿ ಸಿಗುತ್ತದೆ, ಗೊಬ್ಬರಕ್ಕೆ ಅಭಾವ ಪಡಬೇಕಾಗಿಲ್ಲ ಎಂದು ಹೇಳಿದರು. ಗೊಬ್ಬರವನ್ನು ಉಪಯೋಗಿಸತಕ್ಕವರು, ಗೊಬ್ಬರಕ್ಕೆ ಕೊಡಬೇಕಾದ ಧಾರಣೆಯನ್ನು ಕೊಡುವುದಕ್ಕೆ ಶಕ್ತಿ ಇಲ್ಲದೆ, ನಮಗೆ ಗೊಬ್ಬರವೇ ಬೇಡ ಎನ್ನುವ ಪರಿಸ್ಥಿತಿಗೆ ಬಂದಿರುವುದೇ ಗೊಬ್ಬರ ಹೆಚ್ಚಾಗಿ ಉಳಿದಿರುವುದಕ್ಕೆ ಕಾರಣ ಎಂದು ಹೇಳಿದರೆ ತಪ್ಪಾಗಲಾರದು. ಇಂತಹ ಪರಿಸ್ಥಿತಿ ತಪ್ಪಬೇಕು. ಬೆಳೆ ಹೆಚ್ಚಾಗಬೇಕಾದರೆ ಪ್ರತಿಯೊಬ್ಬ ರೈತನೂ ಗೊಬ್ಬರವನ್ನು ಉಪಯೋಗಿಸಬೇಕು. ಭೂಮಿಗೆ ಕೃತಕ ಗೊಬ್ಬರ ಹಾಕದೇ ಹೋದರೆ ಬೆಳೆ ಏನೇನೂ ಆಗುವುದಿಲ್ಲ, ಆದುದರಿಂದ ಪ್ರತಿಯೊಬ್ಬ ರೈತನಿಗೂ ಅನುಕೂಲವಾಗತಕ್ಕ ರೀತಿಯಲ್ಲಿ ಗೊಬ್ಬರದ ಬೆಲೆಯನ್ನು ನಿಗದಿ ಮಾಡದೇ ಹೋದರೆ ನಮಗೆ ಬಹಳ ತೊಂದರೆಯಾಗುತ್ತದೆ. ಅಲ್ಲದ ರೈತನು ಆಹಾರಧಾನ್ಯಗಳನ್ನು ಬೆಳೆಯುವುದನ್ನು ಬಿಡಬೇಕಾದ ಪರಿಸ್ಥಿತಿ ಬರುತ್ತದೆ. ಆದುದರಿಂದ ಸುಲಭ, ಬೆಲೆಗೆ ಕೃತಕ ಗೊಬ್ಬರವನ್ನು ಸಪ್ಲೈ ಮಾಡಬೇಕು, ಕೃತಕ ಗೊಬ್ಬರ ಸಪ್ಲೈ ಮಾಡುವುದಕ್ಕೆ ಆಗದೇ ಹೋದರೆ ಬೇರೆ ಗೊಬ್ಬರವನ್ನಾದರೂ ಸಪ್ಲೈಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಮ್ಮ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಕಳೆದ ವರ್ಷ ಗೊಬ್ಬರದ ಬೆಲೆ 54 ರೂಪಾಯಿ ಮೂಟೆಗೆ ಇತ್ತು. ಈ ವರ್ಷ 135-140 ರೂಪಾಯಿ ಗಿದೆ, ಇನ್ನೂ 20 ರೂಪಾಯಿ ಜಾಸ್ತಿಯಾಗತಕ್ಕ ನಿರೀಕ್ಷಣೆ ಕೂಡ ಇದೆ. ಈ ಮಟ್ಟಕ್ಕೆ ಗೊಬ್ಬರದ ಬೆಲೆ ಏರುತ್ತಾ ಹೋದರೆ ಆಹಾರದ ಬೆಳೆ ಖಂಡಿತವಾಗಿ ಕುಂಟಿತವಾಗತಕ್ಕ ಪರಿಸ್ಥಿತಿ ಬರುತ್ತದೆ. ಇದರಿಂದ ದೇಶದಲ್ಲಿ ಆಹಾರದ ಅಭಾವ ಜಾಸ್ತಿಯಾಗುತ್ತದೆ. ನಮ್ಮ ಮಾನ್ಯ ಮಂತ್ರಿಗಳು ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾಗಿದ್ದರು. ಅವರ ಕಾಲದಲ್ಲಿ ಪಂಪುಸೆಟ್ಟುಗಳನ್ನು ಕೊಡಿಸಿದ್ದಾರೆ, ರೈತರಿಗೆ ಸಬ್ಸಿಡಿಯನ್ನು ಕೊಟ್ಟಿರತಕ್ಕ ಸಂದರ್ಭಗಳಿವೆ. ಈಗ ಯಾವ ಪಂಪ್‌ಸೆಟ್ಟಿಗೆ ಸಬ್ಸಿಡಿ ಕೊಡುತ್ತಿಲ್ಲ. ಹಿಂದೆ ಕೊಟ್ಟಿರುವ ಹಣಕ್ಕೆ ಈಗ ಪೀನಲ್ ಇಂಟರೆಸ್ಟ್ ಹಾಕಿ, ತಗಾದೆ ಮಾಡುತ್ತಿದ್ದಾರೆ, ಆದುದರಿಂದ ತಕ್ಷಣ ಇದನ್ನು ಗಮನಕ್ಕೆ ತೆಗೆದುಕೊಂಡು ಪೀನಲ್ ಇಂಟರೆಸ್ಟ್ ವಜಾಮಾಡಿ, ಸಬ್ಸಿಡಿ ಕೊಟ್ಟು ಉಳಿಕೆ ಮೊಬಲಗನ್ನು ವಸೂಲುಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಎನ್. ಎಸ್. ಭಾವಿಗಳನ್ನು ತೆಗೆದುಕೊಂಡರೆ ಒಂದು ವರ್ಷದಲ್ಲಿ ಎಲ್ಲಾ ಬಾವಿಗಳನ್ನು ಪೂರೈಸುತ್ತೇವೆ, ಕಾಲು ಭಾಗ ಸಬ್ಸಿಡಿ ಕೊಡುತ್ತೇವೆ ಎಂದು ಮಂತ್ರಿಗಳು ಹೇಳಿದರು. ಯಾವ ಭಾಗಕ್ಕೂ ಸಬ್ಸಿಡಿ ಕೊಟ್ಟಿಲ್ಲ. ರೈತರು ನಮಗೆ ಸರ್ಕಾರದಿಂದ ಸಬ್ಸಿಡಿ ಸಿಗುತ್ತದೆ ಎನ್ನುವ ದೃಷ್ಟಿಯಿಂದ ಬಾವಿಗಳನ್ನು ನಿರೀಕ್ಷಣೆ ಮಾಡಿದ್ದರು, ಕೊನೆಗೆ ಸಬ್ಸಿಡಿ ಸಿಕ್ಕಲಿಲ್ಲ. ಆದುದರಿಂದ ಯಾರು ಯಾರು ಸಕಾಲದಲ್ಲಿ ಬಾವಿಗಳನ್ನು ಪೂರ್ಣಗೊಳಿಸಿದ್ದಾರೆ ಅಂಥವರಿಗೆ ಸಬ್ಸಿಡಿ ದೊರಕಿಸಿಕೊಡಬೇಕು, ಪೀನಲ್ ಇಂಟರೆಸ್ಟ್ ವಜಾ ಮಾಡಿಕೊಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. 1962ನೇ ಇಸವಿಯಿಂದಲೂ ಕೂಡ ಜನಗಳಿಂದ ಚುನಾವಣೆ ಸಂದರ್ಭದಲ್ಲಿ ಓಟುಗಳನ್ನು ತೆಗೆದುಕೊಳ್ಳುವುದಕ್ಕೋಸ್ಕರ ಸಾಲವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಇವತ್ತಿನ ದಿವಸ ಅದಕ್ಕೆ ಪೀನಲ್ ಇಂಟರೆಸ್ಟ್ ಹಾಕಿ, ಇದರ ಸಮೇತ ಹಣವನ್ನು ವಾಪಸ್ ಕೊಡಬೇಕು ಎಂದು ಹೇಳುತ್ತಿರುವುದರಿಂದ ರೈತನಿಗೆ ಹೊರಲಾರದಷ್ಟು ಹೊರೆಯಾಗಿದೆ.

ರೈತರಿಗೆ ಸಾಲ ಕೊಟ್ಟು ಅವರಿಂದ ಹಿಂದಕ್ಕೆ ಪಡೆಯುವ ಪೀನಲ್ ಇಂಟರೆಸ್ಟು ಎಂದು ಅವರ ಮೇಲೆ ಹೆಚ್ಚು ಹೊರೆ ಹಾಕಬಾರದು ಎಂದು ಸಲಹೆ ಮಾಡುತ್ತೇನೆ. ಅಲ್ಲದೆ ನಮ್ಮ ಮಾಗಡಿ

ತಾಲ್ಲೂಕು ಬರಗಾಲಕ್ಕೆ ತುತ್ತಾಗುವ ಪ್ರದೇಶವಾಗುತ್ತಿದೆ. ಮಳೆ ಕೂಡ ಇಲ್ಲ. ಹಿಂದೆ ನಾಗಮಂಗಲದ ತಾಲ್ಲೂಕು ಬರಗಾಲದ ಪ್ರದೇಶ ಎಂದು ಹೇಳುತ್ತಿದ್ದರು. ಈಗ ಅಲ್ಲಿಗೆ ಹೇಮಾವತಿಯ ಮೂಲಕ ನೀರು ಕೊಡುವ ಅನುಕೂಲ ಬಂದಿರುವುದರಿಂದ ಅಲ್ಲಿನ ಜನಕ್ಕೆ ಸ್ವಲ್ಪ ಅನುಕೂಲವಾಗಿದೆ. ಅದೇ ರೀತಿ ನಮ್ಮ ಮಾಗಡಿ ತಾಲ್ಲೂಕಿಗೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಯೋಜನೆ ನೀರು ಬರುತ್ತೆ ಎಂದು ಇತ್ತು. ಈಗ ಅಲ್ಲೂ ಕೂಡ ನೀರು ಕೊಡುವುದಿಲ್ಲ ಎಂದು ಗೊತ್ತಾಗುತ್ತಿದೆ. ಇದರಿಂದ ತಿಪ್ಪಗೊಂಡನಹಳ್ಳಿಯ ಮೂಲಕ ಬೆಂಗಳೂರಿಗೆ ನೀರು ಒದಗಿಸುತ್ತಿದ್ದಾರೆ. ಆದುದರಿಂದ ನಮ್ಮ ತಾಲ್ಲೂಕಿನಲ್ಲಿ ಅನೇಕ ಲಿಫ್ಟ್ ಇರಿಗೇಷನ್ ಯೋಜನೆಗಳನ್ನು ಮಾಡಬೇಕೆಂದು ಇದ್ದಾರೆ. ಸುಮಾರು 20 ಪ್ರಾಜೆಕ್ಟುಗಳಾಗಬೇಕೆಂದು ಇಲ್ಲಿಂದ ಸಲಹೆಗಳನ್ನು ಕೂಡ ಸರಕಾರಕ್ಕೆ ಕಳುಹಿಸಲಾಗಿದೆ. ಇದರ ಕಡೆಗೆ ಹೆಚ್ಚು ಲಕ್ಷ ಕೊಟ್ಟು ಸರಕಾರದವರು ಮಾಡಿಸಿ ಕೊಡಬೇಕೆಂದು ಕೇಳುತ್ತೇವೆ. ಬೆಂಗಳೂರಿಗೇನೋ ಕಾವೇರಿ ನೀರಿನ ಯೋಜನೆ ತಂದು ನೀರು ಕೊಡುತ್ತಿದ್ದಾರೆ. ಆದುದರಿಂದ ನಮ್ಮ ಭಾಗದ ಜನಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯದಿಂದ ವ್ಯವಸಾಯಕ್ಕೆ ನೀರನು ನೀರಿನ ಅಭಾವ ಹೆಚ್ಚಾಗಿರುವುದರಿಂದ ಬೇಗನೆ ಲಿಫ್ಟ್ ಇರಿಗೇಷನ್ ಮೂಲಕ ನೀರಾವರಿ ಯೋಜನೆ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದನ್ನು ಮಾಡಿದರೆ ಇಲ್ಲಿ ವ್ಯವಸಾಯ ಮಾಡುವ ರೈತರು ಉಳಿಯುತ್ತಾರೆ. ಇಲ್ಲದಿದ್ದರೆ ಜನರಿಗೆ ತುಂಬಾ ಕಷ್ಟವಾಗುತ್ತದೆ. ನಮ್ಮ ಮಾಗಡಿ ತಾಲ್ಲೂಕು ಸುಮಾರು 30—40 ಮೈಲಿಗಳ ದೂರದಲ್ಲಿದೆ. ಹಿಂದೆ ಡೈರಿ ಯೋಜನೆ ಮಾಡಿದಾಗ ಸರ್ಕಾರದ ಡೈರಿಯವರು ಹಾಲನ್ನು ಸುಮಾರು 30—40 ಮೈಲಿ ದೂರವಿರುವ ಕಡೆಗಳಿಂದ ಹಾಲನ್ನು ತೆಗೆದುಕೊಂಡು ಬರುತ್ತಾರೆ ಎಂದು ಇತ್ತು. ಅದರಂತೆ ನಮ್ಮ ಮಾಗಡಿ ತಾಲ್ಲೂಕಿನ ರೈತರೂ ಹಾಲನ್ನು ಡೈರಿಗೆ ಕೊಡಲು ಸಿದ್ಧವಾಗಿದ್ದರೂ ಕೂಡ ಇದುವರೆಗೆ ಡೈರಿ ಇಲಾಖೆಯವರು ಇಲ್ಲಿಗೆ ಬಂದು ಹಾಲನ್ನು ತೆಗೆದುಕೊಂಡು ಹೋಗುವ ಹಾಲಿನ ವ್ಯಾನ್ ಕೂಡ ಇಲ್ಲ. ಇಲ್ಲಿನ ರೈತರು ಬೇರೆ ಕಡೆ ಹಾಲಿನ ವ್ಯಾಪಾರ ಮಾಡಬೇಕಾಗಿದೆ ಇದರಿಂದ ಅನೇಕ ರೀತಿಯಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಇದರ ಕಡೆಗೆ ಗಮನ ಕೊಟ್ಟು ಇಲ್ಲಿಂದ ಹಾಲನ್ನು ಡೈರಿಗೆ ತರುವ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಮಾಗಡಿ ತಾಲ್ಲೂಕಿನ ಸುತ್ತ ಅರಣ್ಯ ಪ್ರದೇಶಗಳಿವೆ. ಇದನ್ನು ಅಭಿವೃದ್ಧಿ ಮಾಡಬೇಕು ಮತ್ತು ಕುರಿ ತಳಿ ಅಭಿವೃದ್ಧಿ ಮಾಡುವ ಕೇಂದ್ರವನ್ನು ತೆರೆದು ಇದರಿಂದ ಜನತೆಗೆ ಅನುಕೂಲವಾಗುವಂತೆ ಮಾಡಬೇಕು. ಮತ್ತು ನಮ್ಮ ಕಡೆ ಇರುವ ದನಕರುಗಳಿಗೆ ಅನುಕೂಲವಾಗುವಂತೆ ವೆಟರ್ನರಿ ಆಸ್ಪತ್ರೆಗಳನ್ನು ಹೆಚ್ಚು ಹೆಚ್ಚಾಗಿ ತೆರೆಯಬೇಕು ಮತ್ತು ನಮ್ಮ ಕಡೆ ಇರುವ ಜಾನುವಾರುಗಳಿಗೆ ಸಹಾಯ ಮಾಡಲುಬೇಕು. ಇಷ್ಟು ಹೇಳಿ ಮಾತಾಡಲು ಅವಕಾಶ ಮಾಡಿಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Business of the House

Mr. DEPUTY SPEAKER.—The Business Advisory Committee at a sitting held to-day has decided that the House may have two sittings tomorrow from 9-00 A.M. to 12-00 noon and from 1-00 A.M. to 6-00 P.M. to transact the following business :

Morning Session

1. The Karnataka Appropriation Bill, 1975
2. The Karnataka Civil Services (Classification and Scale of Pay of Non-graduate Junior Engineers of the Public Works Department) Bill, 1975
3. Reply to the debate on the Demands for grants relating to the Minister for Agriculture and Animal Husbandary.